ಕರ್ನಾಟಕ ಸರ್ಕಾರ

# ಸಮಾಜ ವಿಜ್ಞಾನ

## ಭಾಗ – I

## ಕನ್ನಡ ಮಾಧ್ಯಮ

## (ಪರಿಷ್ಕೃತ)

# 7

## ಏಳನೆಯ ತರಗತಿ



ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 560 085.

## ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1ರಿಂದ 4ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5ರಿಂದ 10ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach)ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ನಿತ್ಯ ಜೀವನದಲ್ಲಿ ಗಣಿತವು ಎಲ್ಲಾ ಹಂತಗಳಲ್ಲೂ ಯಶಸ್ಸಿಗೆ ಅತ್ಯಾವಶ್ಯಕವಾಗಿದೆ. ರಾಷ್ಟ್ರೀಯ ಪಠ್ಯಕ್ರಮ-2005ರಂತೆ ಗಣಿತವು ಕೆಲವು ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡು ಸಿದ್ಧಾಂತಗಳನ್ನು ನಿರೂಪಿಸಿ, ಪ್ರಮೇಯಗಳನ್ನು ಸಾಧಿಸಿ, ಲೆಕ್ಕಗಳನ್ನು ಮಾಡಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವುದನ್ನು ಬಿಟ್ಟು ಗಣಿತವನ್ನು ಜೀವನದ ಸಕಲ ಕ್ಷೇತ್ರಗಳಲ್ಲೂ ಬಳಸುವ ಸಾಮರ್ಥ್ಯವನ್ನು ಬೆಳೆಸಿಕೊಂಡು ಜೀವನದಲ್ಲಿ ಯಶಸ್ಸನ್ನು ಗಳಿಸುವಂತೆ ಮಾಡಬೇಕು. ಅದು ಸಹಕಾರೀ ಕಲಿಕೆಗೂ ಪೂರಕವಾಗಿರಬೇಕು. ಬಹುತೇಕ ಮಂದಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಗಣಿತವೆಂದರೆ ಭಯ. ಈ ಭಯವನ್ನು ಹೋಗಲಾಡಿಸಲು ವಿನೋದಗಣಿತ, ಕಥೆಗಳು, ಒಗಟುಗಳು, ಗೂಢಪ್ರಶ್ನೆಗಳು ಮುಂತಾದ ಅಂಶಗಳನ್ನು ಸೇರಿಸಲಾಗಿದೆ. ಪ್ರಾಥಮಿಕ ಹಂತದಲ್ಲಿ

ಚಟುವಟಿಕೆಯ ಮೂಲಕ ಅಥವಾ ಕುತೂಹಲ ಕೆರಳಿಸುವ ಕಥೆಗಳ ಮೂಲಕ ಪ್ರತಿಯೊಂದು ಪರಿಕಲ್ಪನೆಯನ್ನು ವಿವರಿಸಲಾಗಿದೆ. ಪ್ರಾಚೀನ ಭಾರತದ ಶ್ರೇಷ್ಠ ಗಣಿತ ಶಾಸ್ತ್ರಜ್ಞರ ಕೊಡುಗೆಗಳನ್ನು ಸೂಕ್ತ ಸಂದರ್ಭಗಳಲ್ಲಿ ಕೊಡಲಾಗಿದೆ.

ನಾವಿಂದು ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಜೀವಿಸುತಿದ್ದೇವೆ. ಕಳೆದ ಅರ್ಧಶತಮಾನದಲ್ಲಿ ಮಾನವನ ಅದ್ಭುತ ಕನಸುಗಳು ನನಸಾಗಿ ಮಾನವ ತನ್ನ ಸಾಧನೆಯ ಪರಾಕಾಷ್ಠೆಯನ್ನು ಮುಟ್ಟಿದ್ದಾನೆ. ಜೀವನವನ್ನು ಸುಗಮವನ್ನಾಗಿಸಲು ಅತ್ಯಾವಶ್ಯಕವಾದ ಸಕಲ ವಸ್ತುಗಳನ್ನು ತಯಾರಿಸಿದ್ದಾನೆ. ಹಾಗೆಯೇ ಭೋಗ ವಿಲಾಸ ಜೀವನಕ್ಕೆ ಮಾರುಹೋಗಿ ಇಂದು ಮೂಲ ವಿಜ್ಞಾನವನ್ನೇ ಮರೆಯುವ ಹಂತಕ್ಕೆ ಮಾನವ ತಲುಪಿರುವುದು ಒಂದು ದುರಂತವೇ ಆಗಿದೆ. ಭೋಗ ಜೀವನಕ್ಕೆ ಪುಷ್ಠಿಯನ್ನು ಕೊಡುವ ತಂತ್ರಜ್ಞಾನದತ್ತ ಇಂದು ನಮ್ಮ ಒಲವಿದ್ದು ಮೂಲವಿಜ್ಞಾನದತ್ತ ನಮ್ಮ ದೃಷ್ಟಿ ಹರಿಯುತ್ತಿಲ್ಲ. ಈಗಲಾದರೂ ನಮ್ಮ ಯುವಕ ಯುವತಿಯರು ವಿಜ್ಞಾನ ಕ್ಷೇತ್ರದಲ್ಲಿ ಆಳವಾದ ಅಧ್ಯಯನ ನಡೆಸಿ ಸಂಶೋಧನಾ ಸಂಪ್ರದಾಯವನ್ನು ಮುಂದುವರಿಸುವರೆಂದು ಆಶಿಸಿ ಮುಂದೆ ಬರುವ ನೂತನ ವಿಜ್ಞಾನ ಪುಸ್ತಕಗಳಲ್ಲಿ ಅವರಿಗೆ ಯೋಚಿಸುವುದು, ಆಳವಾದ ಅಧ್ಯಯನ ಮಾಡುವುದು, ಪ್ರಯೋಗಗಳನ್ನು ಮಾಡುವುದು ಹಾಗೂ ಅವರಲ್ಲಿ ಸೃಜನಶೀಲತೆಯನ್ನು ಬೆಳೆಸುವತ್ತ ಒಲವನ್ನುಂಟುಮಾಡಲು ಅವಕಾಶಗಳನ್ನು ಕಲ್ಪಿಸಿ ಕೊಡಲಾಗಿದೆ. ಕಲಿಕೆ ಚಟುವಟಿಕೆಗಳ ಸುತ್ತಲೂ ಹೆಣೆಯುವಂತೆ ಮಾಡಲು ಪ್ರಯತ್ನಗಳು ನಡೆದಿವೆ. ಈ ವಿಚಾರದಲ್ಲಿ ಗುರುವೃಂದದವರ ಸಹಕಾರವು ಅತ್ಯಾವಶ್ಯಕ.

7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವು ಪಠ್ಯವಸ್ತುವಿಗೆ ಅನುಗುಣವಾಗಿ ರಚನೆಯಾಗಿದ್ದು, ಎನ್‌ಸಿಎಫ್ 2005 ಹಾಗೂ ಕೆಸಿಎಫ್ 2007 ಇವುಗಳಲ್ಲಿ ಕಂಡುಬರುವ ಎಲ್ಲಾ ಲಕ್ಷಣಗಳನ್ನು ಹೊಂದಿರುತ್ತದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸ್ವಂತವಾಗಿ ಜ್ಞಾನವನ್ನು ರಚಿಸಿಕೊಳ್ಳುವ ನಿಟ್ಟಿನಲ್ಲಿ ಅನೇಕ ಚಟುವಟಿಕೆಗಳನ್ನು ಹೊಂದಿಸಲಾಗಿದೆ. ಅವುಗಳೊಂದಿಗೆ ಅನೇಕ ಪ್ರಾಜೆಕ್ಟ್‌ಗಳನ್ನು ರಚಿಸಲಾಗಿದೆ. ಆದರೆ ಕಂಠಪಾಠ ಮಾಡುವ ಅಂಶಗಳಾದ ಇಸವಿಗಳು, ಅನಾವಶ್ಯಕ ವಿಷಯಗಳು ಪುಸ್ತಕದಲ್ಲಿ ಪ್ರಾಮುಖ್ಯತೆಯನ್ನು ಪಡೆದಿಲ್ಲ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ
ಬೆಂಗಳೂರು.

# ಪರಸ್ಪರ

ನಿನ್ನೆ, ಇಂದು ಮತ್ತು ನಾಳೆಗಳು ಇಂದು ಈ ಕ್ಷಣದಲ್ಲಿ ಸೇರಿಕೊಂಡಿರುತ್ತವೆ ಎನ್ನುವ ವಿವೇಕವನ್ನು ಅಲ್ಲಮಪ್ರಭು ಹೇಳುತ್ತಾ ಚರಿತ್ರೆ ಎನ್ನುವುದು ಗುಪ್ತಗಾಮಿನಿಯಾಗಿ ಹರಿಯುತ್ತಿರುತ್ತದೆ. ಕೆಲವೊಮ್ಮೆ ಮೂರ್ತವಾಗಿ ಮತ್ತೆ ಕೆಲವೊಮ್ಮೆ ಅಮೂರ್ತವಾಗಿ ತನ್ನನ್ನು ಪ್ರಕಟಿಸಿಕೊಳ್ಳುತ್ತಿರುತ್ತದೆ. ಘಟನೆಗಳಾಗಿ, ವ್ಯಕ್ತಿಗಳಾಗಿ, ಮೌಲ್ಯಗಳಾಗಿ ವಿವಿದ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇಂದು ಜಗತ್ತು ಧರ್ಮ, ಬಣ್ಣ, ಲಿಂಗ, ಭಾಷೆ, ಪ್ರಾದೇಶಿಕತೆ, ಬಡವರು, ಶ್ರೀಮಂತರು ಎಂಬ ನೂರಾರು 'ಐಡೆಂಟಿಟಿ'ಗಳಲ್ಲಿ ಒಡೆದು ಹೋಗಿದೆ. ವಿವಿಧ ಆಸಕ್ತಿಗಳ ಸಂಘರ್ಷದಲ್ಲೇ ಜನರು ತಮ್ಮ ಚರಿತ್ರೆಯನ್ನು ಸೃಷ್ಟಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಇತಿಹಾಸವು ಕೇವಲ ಒಂದು ಸರಳ ರೇಖಾ ಮಾದರಿಯ ಬೆಳವಣಿಗೆಯಲ್ಲ. ಮನುಷ್ಯನು ಇತಿಹಾಸದ ಭಾಗವಾಗಿದ್ದುಕೊಂಡೇ ಹೊಸ ಟಿಸಿಲುಗಳನ್ನು ಸೃಷ್ಟಿಸುತ್ತಿರುತ್ತಾನೆ. ಇತಿಹಾಸವೆನ್ನುವುದು ಒಂದು ಬೆಳೆಯುತ್ತಿರುವ ಸರಪಳಿ ಇದ್ದ ಹಾಗೆ ಪ್ರತಿ ಕೊಂಡಿಯು ಒಂದು ತಲೆಮಾರು; ಮತ್ತು ತಲೆಮಾರುಗಳು ಸೃಷ್ಟಿಯಾಗುತ್ತಲೇ ಇರುತ್ತದೆ. ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ಚರಿತ್ರೆಯು ಅದರ ಸಂಚಯಿಕ ರೂಪದಲ್ಲಿ ಅತ್ಯಂತ ಸಂಕೀರ್ಣವಾದದ್ದು. ಚರಿತ್ರೆಯೆನ್ನುವುದು ಮೂಲತಃ ಒಂದು ನಿರಂತರ ಪ್ರಕ್ರಿಯೆ. ಅದನ್ನು ಅರ್ಥೈಸಿಕೊಳ್ಳಬೇಕಾದ ಬೌದ್ಧಿಕ ಶಕ್ತಿಯನ್ನು ನಾವು ನಿರಂತರ ಅಧ್ಯಯನದಿಂದ ಮಾತ್ರ ಗಳಿಸಿಕೊಳ್ಳಲು ಸಾಧ್ಯ.

ಚರಿತ್ರೆಯು ಅತ್ಯಂತ ವಿಸ್ತಾರವಾದದ್ದು. ಏಷ್ಯ, ಯೂರೋಪ್ ಮತ್ತು ಅಮೆರಿಕ ಖಂಡಗಳ ಚರಿತ್ರೆಗಳನ್ನು ಮಾತ್ರ ನಾವು ಪಠ್ಯಗಳಲ್ಲಿ ಪರಿಚಯಿಸಿಕೊಂಡಿದ್ದೇವೆ. ಆಫ್ರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಖಂಡಗಳ ಚರಿತ್ರೆಗಳನ್ನು ಇನ್ನೂ ಸರಿಯಾಗಿ ಪರಿಚಯಿಸಿಕೊಳ್ಳಬೇಕಿದೆ. ಅಲ್ಲದೆ ಜಗತ್ತಿನಾದ್ಯಂತ ಸಂಶೋಧನೆಗಳು ಅಸಂಖ್ಯ ರೀತಿಯಲ್ಲಿ ನಡೆಯುತ್ತಿದೆ. ಅವುಗಳನ್ನು ಪಠ್ಯಕ್ರಮಗಳ ಚೌಕಟ್ಟಿಗೆ ತರುವುದು ದೊಡ್ಡ ಸವಾಲು. ಏರು ಸುರುಳಿಯ ಕ್ರಮವನ್ನು ಅನುಸರಿಸುತ್ತಿದ್ದೇವೆ ಎಂದು ಕೊಂಡರೂ ಅದು ಮತ್ತಷ್ಟು ವೈಜ್ಞಾನಿಕವಾಗಿ ರೂಪುಗೊಳ್ಳಬೇಕಿದೆ.

ಪ್ರಸ್ತುತ ಏಳನೇ ತರಗತಿಯ ಪಠ್ಯವು ಯೂರೋಪ್ ಮತ್ತು ಭಾರತದ ಚರಿತ್ರೆಗಳನ್ನು ಹೆಚ್ಚು ಒಳಗೊಂಡಿದೆ. ವಿವಿಧ ಖಂಡಗಳ ವಿಶೇಷ ಭೌಗೋಳಿಕ ಲಕ್ಷಣಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ. ಭಾರತದ ಚರಿತ್ರೆಗೆ ಹೆಚ್ಚು ಅಧ್ಯಯನದ ವ್ಯಾಪ್ತಿಯನ್ನು ಒದಗಿಸಲಾಗಿದೆ. ಇತ್ತೀಚಿನ ಸಂಶೋಧನೆಗಳನ್ನು ಗಮನದಲ್ಲಿರಿಸಿಕೊಂಡು ವಿಷಯಾವಾರು ವಿವರಗಳನ್ನು ನೀಡಲಾಗಿದೆ. ಪಠ್ಯಕ್ರಮವೇ ತುಸು ಹೆಚ್ಚೆನಿಸುವುದರಿಂದ ವಿವರಗಳು ಸಹಜವಾಗಿಯೆ ಸ್ವಲ್ಪ ಹೆಚ್ಚಾಗಿ ಬಂದಿವೆ. ಈ ಹಂತದ ವಿದ್ಯಾರ್ಥಿಗಳಿಗೆ ಎಷ್ಟನ್ನು ತಿಳಿಸಬೇಕು ಎಂದು ತೀರ್ಮಾನಿಸುವುದೇ ಒಂದು ದೊಡ್ಡ ಸವಾಲಾಗಿತ್ತು.

ಈ ರಚನೆಯಾಗುವ ಸಂದರ್ಭದಲ್ಲಿ ಎದುರಾದ ಮತ್ತೊಂದು ಸವಾಲೆಂದರೆ ಧರ್ಮ, ಜಾತಿ, ಲಿಂಗ ಮುಂತಾದ ಸೂಕ್ಷ್ಮ ವಿಚಾರಗಳನ್ನು ಕುರಿತು ಹೇಗೆ ಬರೆಯಬೇಕೆಂಬುದು. ನಮ್ಮದು ಬಹುಮುಖಿ ಸಮಾಜ. ಏಳನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅತ್ಯಂತ ಸೂಕ್ಷ್ಮಾವಸ್ಥೆಯ ಮನೋಸ್ಥಿತಿಯನ್ನು ಹೊಂದಿರುತ್ತಾರೆ. ಜನಮುಖಿ ಮತ್ತು ಸಮಾಜಮುಖಿ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವಿಷಯಗಳನ್ನು ತಿಳಿಸುವ ಪ್ರಯತ್ನವನ್ನು ಈ ಪಠ್ಯದಲ್ಲಿ ಮಾಡಲಾಗಿದೆ.

**ಶಿಕ್ಷಕರ ಗಮನಕ್ಕೆ ತಪ್ಪದೆ ತರಬೇಕಾದ ಕೆಲವು ಅಂಶಗಳನ್ನು ನಾವಿಲ್ಲಿ ಹಂಚಿಕೊಳ್ಳುತ್ತಿದ್ದೇವೆ.**

- 7ನೇಯ ತರಗತಿಯ ಪಠ್ಯಪುಸ್ತಕದ ಪಠ್ಯವಸ್ತು 5 ಮತ್ತು 6ನೇ ತರಗತಿಯ ಪಠ್ಯವಸ್ತುವಿನ ಮುಂದುವರಿದ ಭಗವಾಗಿದೆ. ಆದ್ದರಿಂದ ಶಿಕ್ಷಕರು ಹಿಂದಿನ ತರಗತಿಗಳ ಪಠ್ಯವಸ್ತುವನ್ನು ಅರಿಯುವುದು ಸೂಕ್ತವೇ ಆಗಿದೆ.
- ಪಾಠದ ಪ್ರಾರಂಭ ಮತ್ತು ಕೊನೆಯನ್ನು ಐಕಾನಗಳ ಮೂಲಕ ಸೂಚಿಸಿದೆ. ಲಿಖಿತ ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ಈ ಚೌಕಟ್ಟು ಮೀರದಿರಲಿ. ಬಾಕ್ಸ್‌ಗಳಲ್ಲಿ ನೀಡಲಾದ ಹೆಚ್ಚಿನ ಮಾಹಿತಿಯನ್ನು ಕುರಿತಾದ ಪ್ರಶ್ನೆಗಳನ್ನು ಲಿಖಿತ ಪರೀಕ್ಷೆಯಲ್ಲಿ ಕೇಳಬಾರದಾಗಿಯೂ ವಿನಂತಿ.
- ಪಾಠದ ಪ್ರಾರಂಭದಲ್ಲಿ ಪಾಠದ ಪರಿಚಯ ಮತ್ತು ಸಾಮರ್ಥ್ಯಗಳನ್ನು ಶಿಕ್ಷಕರ ಮಾರ್ಗದರ್ಶಕ್ಕಾಗಿ ಮಾತ್ರವೇ ನೀಡಲಾಗಿದೆ. ಅವನ್ನು ಶಿಕ್ಷಕರು ಅಂತರ್ಗತಗೊಳಿಸಿಕೊಳ್ಳಬೇಕೆಂಬುದು ನಮ್ಮ ಆಶಯ.
- ಪಠ್ಯಪುಸ್ತಕದ ಉತ್ತಮ ಅಂಶಗಳು ಮತ್ತು ಕೊರತೆಗಳನ್ನು ಶಿಕ್ಷಕರು ಕರ್ನಾಟಕ ಪಠ್ಯಪುಸ್ತಕ ಸಂಘದ ಮುಖ್ಯ ಸಂಯೋಜಕರಿಗೆ ತಿಳಿಸುವ ಪರಿಪಾಠವನ್ನು ಸ್ವಾಗತಿಸುತ್ತೇವೆ. ಪಠ್ಯಪುಸ್ತಕ ಪರಿಷ್ಕರಣೆಯ ಹಂತದಲ್ಲಿ ಶಿಕ್ಷಕರ ಸೂಕ್ತ ಸಲಹೆಗಳನ್ನು ಅಳವಡಿಸಲಾಗುವುದು. ಪೋಷಕರೂ ಈ ಕಾರ್ಯದಲ್ಲಿ ಭಾಗವಹಿಸುವುದಾದರೆ ಅದನ್ನು ಸ್ವಾಗತಿಸುತ್ತೇವೆ.
- ಸದರಿ ಪಠ್ಯಪುಸ್ತಕವನ್ನು ರೂಪುಗೊಳಿಸಲು ಸಹಕರಿಸಿದ ಎಲ್ಲರಿಗೂ ವಂದನೆಗಳು.

**ಡಾ. ಅಶ್ವತ್ಥನಾರಾಯಣ**
ಅಧ್ಯಕ್ಷರು, ಪಠ್ಯಪುಸ್ತಕ ರಚನಾ ಸಮಿತಿ

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು** : ಡಾ. ಅಶ್ವತ್ಥನಾರಾಯಣ, ಅಸೋಸಿಯೇಟ್ ಪ್ರೊಫೆಸರ್, ಇತಿಹಾಸ ವಿಭಾಗ, ಜ್ಞಾನಭಾರತಿ ಕ್ಯಾಂಪಸ್, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು-560056.

**ಸದಸ್ಯರು** : ಶ್ರೀ ಎಂ.ಎನ್.ಕಟ್ಟಿ, ಭೂಗೋಳ ಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಬಿ ಪಿ ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು-560026.

ಶ್ರೀ ಎನ್.ನಿಂಗರಾಜು, ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಯಲಹಂಕ, ಬೆಂಗಳೂರು.

ಶ್ರೀ ವೈ.ರಾಮಕೃಷ್ಣರಾವ್, ರಾಜ್ಯಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಎರ್ಮಾಳು ಬಡ ಅಂಚೆ, ಉಡುಪಿ ಜಿಲ್ಲೆ-574119.

ಶ್ರೀ ಎಸ್.ಬಿ.ಕಡಕೋಳದವರ, ಸಹಶಿಕ್ಷಕರು, ವಿದ್ಯಾರಣ್ಯ ಪಿ.ಯು. ಕಾಲೇಜು, ಪ್ರೌಢಶಾಲಾ ವಿಭಾಗ, ಧಾರವಾಡ-1.

ಶ್ರೀಮತಿ ಕೆ.ವಿ.ಶಿಲ್ಪ, ಸಹಶಿಕ್ಷಕರು, ಹಿರಿಯ ಪ್ರಾಥಮಿಕ ಶಾಲೆ, ಚನ್ನಯ್ಯನ ಕೋಟೆ, ವಿರಾಜ ಪೇಟೆ ತಾಲ್ಲೂಕು, ಮಡಿಕೇರಿ ಜಿಲ್ಲೆ.

**ಚಿತ್ರ ಕಲಾವಿದರು** : ಶ್ರೀ ತಾರಾನಾಥ ಕೈರಂಗಳ್, ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಂಚಿ ಕೊಳ್ನಾಡು, ಬಂಟ್ವಾಳ, ದಕ್ಷಿಣ ಕನ್ನಡ ಜಿಲ್ಲೆ.

**ಪರಿಶೀಲಕರು** : ಶ್ರೀ ಎಂ. ರಾಘವೇಂದ್ರ ಪ್ರಭು, ಇತಿಹಾಸ ಪ್ರೊಫೆಸರ್ (ನಿವೃತ್ತ), ಅನಂತ ಪ್ರಸಾದ, ದಂಬೆಲ್, ಅಶೋಕನಗರ ಅಂಚೆ, ಮಂಗಳೂರು-575006.

ಶ್ರೀ ಕೆ.ಆರ್.ಮಂಜುನಾಥ್, ಪ್ರಾಂಶುಪಾಲರು, ಎಮ್ ಇ ಎಸ್ ಪದವಿಪೂರ್ವ ಕಾಲೇಜು, ಬಿ ಟಿ ಎಮ್ ಲೇಔಟ್, ಬೆಂಗಳೂರು.

**ಸಂಪಾದಕ ಮಂಡಳಿ** : ಡಾ. ಎಂ.ವಿ. ಶ್ರೀನಿವಾಸ್, ಇತಿಹಾಸ ಪ್ರೊಫೆಸರ್ (ನಿವೃತ್ತ), ಹೆಚ್. ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು.

ಡಾ. ಆರ್.ಎಲ್.ಎಂ. ಪಾಟೀಲ್, ರಾಜ್ಯಶಾಸ್ತ್ರ ಪ್ರೊಫೆಸರ್ (ನಿವೃತ್ತ), 1105, ಪೂರ್ಣಪ್ರಜ್ಞನಗರ, ಉತ್ತರ ಹಳ್ಳಿ, ಬೆಂಗಳೂರು.

ಡಾ. ಈಶ್ವರಪ್ಪ ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

**ಮುಖ್ಯ ಸಂಯೋಜಕರು** : ಪ್ರೊ. ಜಿ.ಎಸ್, ಮುಡಂಬಡಿತ್ತಾಯ, ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ**

: ಶ್ರೀ ನಾಗೇಂದ್ರಕುಮಾರ್, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.) ಬೆಂಗಳೂರು.

ಶ್ರೀಮತಿ ಸಿ. ನಾಗಮಣಿ, ಉಪ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.) ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು**

: ಶ್ರೀಮತಿ ಎಸ್.ಎನ್. ಲೀಲಾವತಿ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.), ಬೆಂಗಳೂರು.

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ**
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಡಾ. ಟಿ. ಆರ್. ಚಂದ್ರಶೇಖರ್**
ಸಮಾಲೋಚಕರು, 4ನೇ ಹಣಕಾಸು ಆಯೋಗ, 3ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–01.

**ಸದಸ್ಯರು :**

**ಡಾ. ಬಸವರಾಜ್**
ಸಹಪ್ರಾಧ್ಯಾಪಕರು, ರಾಜ್ಯಶಾಸ್ತ್ರ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

**ಡಾ. ಎನ್.ಆರ್. ಹಡಪದ**
ಭೂಗೋಳಶಾಸ್ತ್ರ ಉಪನ್ಯಾಸಕರು, ಶ್ರೀ ಚನ್ನಬಸವೇಶ್ವರ ಪದವಿ ಪೂರ್ವ ಕಾಲೇಜು, ಬಿ.ಅರಳೀಕಟ್ಟಿ,
ಹುಬ್ಬಳ್ಳಿ ತಾ, ಧಾರವಾಡ ಜಿಲ್ಲೆ.

**ಶ್ರೀ. ಹಂ. ಗು. ರಾಜೇಶ್**
ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ದೊಡ್ಡೇರಿ, ಬೆಂಗಳೂರು ದಕ್ಷಿಣ ತಾ.
ಬೆಂಗಳೂರು–562130.

**ಶ್ರೀ. ಪಿ. ಎಂ. ಕಾಗೀನಕರ್**
ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಚಂಗವಾರ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀಮತಿ. ರಾಜಲಕ್ಷ್ಮಿ ಎಸ್**
ಸಹ ಶಿಕ್ಷಕರು, ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ವಿಭಾಗ) ಶ್ರೀರಾಂಪುರಂ,
ಬೆಂಗಳೂರು, ಉತ್ತರ ವಲಯ–2, ಬೆಂಗಳೂರು ಉತ್ತರ ಜಿಲ್ಲೆ.

**ಶ್ರೀಮತಿ. ಶಾಹಿನಾ ಬೇಗಂ**
ಸಹ ಶಿಕ್ಷಕರು, ಸ್ತ್ರೀಸಮಾಜ, ಶೇಷಾದ್ರಿಪುರಂ ಪ್ರೌಢಶಾಲೆ, ಬೆಂಗಳೂರು ಉತ್ತರ ವಲಯ–2,
ಬೆಂಗಳೂರು ಉತ್ತರ ಜಿಲ್ಲೆ.

**ಕಲಾವಿದರು :**

**ಶ್ರೀ. ಡಿ.ಎನ್. ವೆಂಕಟೇಶ್**
ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ಜಿಲ್ಲೆ.

## ಉನ್ನತ ಪರಿಶೀಲನ ಸಮಿತಿ

**ಡಾ. ಎಂ. ಎಸ್. ತಳವಾರ್**
#777, 'ಜೇನುಗೂಡು',
5ನೇ ಬ್ಲಾಕ್, ಬನಶಂಕರಿ 6ನೇ ಘಟ್ಟ,
ಮೆಟ್‌ಕಲ್ ಪಾಳ್ಯ,
ಬೆಂಗಳೂರು–60.

**ಡಾ. ಅಮರೇಶ ಯತಗಲ್**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಸ್ನಾತಕೋತ್ತರ ಕೇಂದ್ರ, ತೊರವಿ,
ವಿಜಯಪುರ – 586105.

**ಡಾ. ನಂದೀಶ್ವರ**
ಪ್ರಾಂಶುಪಾಲರು,
ಎಸ್.ಎಂ.ಆರ್. ಪಿ.ಯು. ಕಾಲೇಜು,
ಕಳ್ಳಂಬೆಳ್ಳ, ಸಿರಾ ತಾಲ್ಲೂಕು,
ತುಮಕೂರು ಜಿಲ್ಲೆ – 572125.

**ಶ್ರೀ. ಮಂಜುನಾಥ ಐಲಿ**
ಇತಿಹಾಸ ಉಪನ್ಯಾಸಕರು,
ಸರಕಾರಿ ಪದವಿ ಪೂರ್ವ ಕಾಲೇಜು,
ಪೋಲಿಸ್ ಕಾಲೋನಿ, ರಾಯಚೂರು – 584101.

### ಸಲಹೆ ಮತ್ತು ಮಾರ್ಗದರ್ಶನ :

**ಶ್ರೀ ಎಂ.ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ),
ಬೆಂಗಳೂರು.

**ಶ್ರೀ ಕೆ.ಜಿ ರಂಗಯ್ಯ**
ಉಪ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ),
ಬೆಂಗಳೂರು.

### ಕಾರ್ಯಕ್ರಮ ಸಂಯೋಜಕರು :

**ಶ್ರೀಮತಿ. ಎಸ್.ಎನ್. ಲೀಲಾವತಿ**
ಹಿರಿಯ ಸಹಾಯಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ),
ಬೆಂಗಳೂರು.

## ಪರಿಷ್ಕರಣೆ ಕುರಿತು.

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ

ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ. ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**ಎಂ.ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫.

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫.

# ಪರಿವಿಡಿ

V9D1W9

U2X3D2

# ಪಾಠ 1 ವಿಜಯನಗರದ ಅರಸು ಮನೆತನಗಳು

## ಪಾಠದ ಪರಿಚಯ

13ನೇ ಶತಮಾನದಲ್ಲಿ ದೆಹಲಿ ಸುಲ್ತಾನ ಅಲ್ಲಾವುದ್ದೀನ್ ಖಿಲ್ಜಿಯಿಂದ ಪ್ರಾರಂಭವಾದ ದಕ್ಷಿಣ ಭಾರತ ದಂಡಯಾತ್ರೆಗಳು 14ನೇ ಶತಮಾನದಲ್ಲಿಯೂ ಮುಂದುವರೆದವು. ಇದರಿಂದ ದಕ್ಷಿಣ ಭಾರತದಲ್ಲಿದ್ದ ದೇವಗಿರಿಯ ಯಾದವರು, ದ್ವಾರಸಮುದ್ರದ ಹೊಯ್ಸಳರು, ವಾರಂಗಲ್ಲಿನ ಕಾಕತೀಯರು, ಮಧುರೈ ಪಾಂಡ್ಯರು ಮುಂತಾದ ಮನೆತನಗಳ ಆಳ್ವಿಕೆಯು ಅವಸಾನದೆಡೆಗೆ ಸಾಗಿತು. ಇಂತಹ ಸಂದರ್ಭದಲ್ಲಿ ದಕ್ಷಿಣ ಭಾರತದಲ್ಲಿ ಉದ್ಭವಿಸಿದ ರಾಜಕೀಯ ಬಿಕ್ಕಟ್ಟಿಗೆ ಪರಿಹಾರವಾಗಿ ಪ್ರಬಲ ರಾಜಕೀಯ ಶಕ್ತಿಯೊಂದನ್ನು ರೂಪಿಸುವಲ್ಲಿ ವಿಜಯನಗರವು ಯಶಸ್ವಿಯಾಯಿತು. ಇದು ಮೂರು ಶತಮಾನಗಳ ಕಾಲ ಸದೃಢವಾಗಿ ಮೆರೆಯಿತು.

ಈ ಪಾಠದಲ್ಲಿ ವಿಜಯನಗರ ಸಾಮ್ರಾಜ್ಯವನ್ನಾಳಿದ ವಿವಿಧ ವಂಶಗಳ ಪ್ರಮುಖ ಅರಸರುಗಳ ಕುರಿತು ವಿವರಿಸಲಾಗಿದೆ. ಈ ಅರಸರು ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ಚರ್ಚಿಸಲಾಗಿದೆ. ಅಲ್ಲದೆ ಈ ಮನೆತನದ ಅವನತಿಗೆ ಕಾರಣವಾದ ತಾಳಿಕೋಟೆ (ರಕ್ಕಸತಂಗಡಿ) ಯುದ್ಧ ಹಾಗೂ ಅದರ ಪರಿಣಾಮಗಳನ್ನು ಇಲ್ಲಿ ವಿವರಿಸಲಾಗಿದೆ.

## ಸಾಮರ್ಥ್ಯಗಳು

1] ವಿಜಯನಗರ ಅರಸರ ಸಾಧನೆಗಳನ್ನು ಅರ್ಥಮಾಡಿಕೊಳ್ಳುವುದು.

2] ವಿಜಯನಗರ ಕಾಲದ ಆಡಳಿತ, ಸಾಮಾಜಿಕ ಸ್ಥಿತಿ, ಆರ್ಥಿಕ ಸ್ಥಿತಿ, ಸಾಹಿತ್ಯ ಮುಂತಾದವುಗಳನ್ನು ಅರಿಯುವುದು.

3] ವಿಜಯನಗರ ಕಾಲದ ಕಲೆ ವಾಸ್ತುಶಿಲ್ಪಗಳ ಸ್ವರೂಪವನ್ನು ಅರಿತುಕೊಳ್ಳುವುದು.

4] ವಿಜಯನಗರ ಅರಸರು ಅನುಸರಿಸಿದ ಧರ್ಮ ಸಮನ್ವಯತೆಯನ್ನು ತಿಳಿದುಕೊಳ್ಳುವುದು.

5] ಭೂಪಟದಲ್ಲಿ ವಿಜಯನಗರ ಸಾಮ್ರಾಜ್ಯದ ಎಲ್ಲೆಗಳನ್ನು ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸುವುದು.

ವಿಜಯನಗರ ಸಾಮ್ರಾಜ್ಯವು ಸಂಗಮನ ಪುತ್ರರಾದ ಹರಿಹರ, ಬುಕ್ಕರಾಯ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪರಿಂದ ಸಾ.ಶ 1336ರಲ್ಲಿ ತುಂಗಭದ್ರಾ ನದಿಯ ದಕ್ಷಿಣ ದಡದ ಮೇಲೆ ಸ್ಥಾಪಿಸಲ್ಪಟ್ಟಿತು. ಹಂಪಿಯು ಇವರ ರಾಜಧಾನಿಯಾಗಿತ್ತು. ವರಾಹವು ರಾಜಲಾಂಛನವಾಗಿತ್ತು.



ರಾಜಲಾಂಛನ ವರಾಹ



ಸಾ.ಶ. 1336 ರಿಂದ 1646 ರ ವರೆಗೆ ವಿಜಯನಗರ ಸಾಮ್ರಾಜ್ಯವನ್ನು ಸಂಗಮ ವಂಶ (ಸಾ.ಶ. 1336–1485) ಸಾಳುವ ವಂಶ (ಸಾ.ಶ 1485–1505), ತುಳುವ ವಂಶ (ಸಾ.ಶ 1505–1567) ಹಾಗೂ ಅರವೀಡು ವಂಶ (ಸಾ.ಶ 1570–1646) ಎಂಬ ನಾಲ್ಕು ವಂಶಗಳು ಆಳ್ವಿಕೆ ನಡೆಸಿದವು.

## ಸಂಗಮ ವಂಶ (ಸಾ.ಶ 1336–1485)

**ಹರಿಹರ ಮತ್ತು ಬುಕ್ಕ :** ಹರಿಹರ (ಸಾ.ಶ 1336–57) ನು ಈ ಮನೆತನದ ಮೊದಲ ಅರಸ. ಈತನು ತುಂಗಭದ್ರಾ ನದಿ ಪ್ರದೇಶಗಳ ಮೇಲೆ ಹಿಡಿತ ಸಾಧಿಸಿದನು. ತನ್ನ ರಾಜ್ಯವನ್ನು ಪಶ್ಚಿಮದಲ್ಲಿ ಕೊಂಕಣ ತೀರ ಪ್ರದೇಶದವರೆಗೂ, ಪೂರ್ವದಲ್ಲಿ ನೆಲ್ಲೂರು ಮತ್ತು ಕಡಪಾಗಳವರೆಗೂ, ಉತ್ತರದಲ್ಲಿ ಕೃಷ್ಣಾ ನದಿ ಹಾಗೂ ದಕ್ಷಿಣದಲ್ಲಿ ಕಾವೇರಿ ನದಿಯವರೆಗೂ ವಿಸ್ತರಿಸಿದನು. ಹೀಗೆ ಆರಂಭದಲ್ಲಿ ರಾಜ್ಯಕ್ಕೆ ಭದ್ರ ಬುನಾದಿ ಹಾಕಿದನು.

ಹರಿಹರನಿಗೆ ಪುತ್ರ ಸಂತಾನವಿಲ್ಲದ್ದರಿಂದ ಅವನ ಮರಣದ ನಂತರ ಸಹೋದರನಾದ ಬುಕ್ಕರಾಯ (ಸಾ.ಶ 1357–1377) ಅಧಿಕಾರಕ್ಕೆ ಬಂದನು. ಈತನ ಕಾಲದಲ್ಲಿ ಮಧುರೆಯ ಸುಲ್ತಾನನನ್ನು ಸೋಲಿಸಿದ ಬುಕ್ಕರಾಯನ ಪುತ್ರ ಕಂಪಣನು ಸಾಮ್ರಾಜ್ಯ ವಿಸ್ತರಿಸಿದನು. ಈ ದಿಗ್ವಿಜಯವನ್ನು ಕುರಿತು ಕಂಪಣನ ರಾಣಿ ಗಂಗಾದೇವಿ ಬರೆದ 'ಮಧುರಾ ವಿಜಯಂ' ಎಂಬ ಸಂಸ್ಕೃತ ಕೃತಿಯಲ್ಲಿ ವಿವರಿಸಲಾಗಿದೆ. ಬುಕ್ಕನು ಕೊಂಡವೀಡಿನ ರೆಡ್ಡಿಗಳನ್ನು ಸೋಲಿಸಿ ಪೆನುಕೊಂಡ

ಪ್ರದೇಶವನ್ನು ವಿಜಯನಗರದಲ್ಲಿ ಸೇರಿಸಿದನು. ಈತನು ಜೈನರು ಮತ್ತು ಶ್ರೀ ವೈಷ್ಣವರ ನಡುವಿನ ಧಾರ್ಮಿಕ ಕಲಹವನ್ನು ಶಮನಗೊಳಿಸಿ ಸರ್ವಧರ್ಮ ಸಮನ್ವಯತೆಯನ್ನು ಎತ್ತಿಹಿಡಿದ ಬಗ್ಗೆ ಸಾ.ಶ 1368 ರ ಶ್ರವಣಬೆಳಗೊಳ ಶಾಸನ ವಿವರಣೆ ನೀಡುತ್ತದೆ.

ಬುಕ್ಕರಾಯನ ನಂತರ ಎರಡನೇ ಹರಿಹರ (ಸಾ.ಶ 1377–1404) ಇಮ್ಮಡಿ ಬುಕ್ಕ ಇಮ್ಮಡಿ ವಿರೂಪಾಕ್ಷ (ಸಾ.ಶ 1404–1406), ಒಂದನೆಯ ದೇವರಾಯ (ಸಾ.ಶ 1406–1422), ವೀರ ವಿಜಯರಾಯರು (ಸಾ.ಶ 1422–1424) ಆಳಿದರು.

### ಎರಡನೆಯ (ಪ್ರೌಢ) ದೇವರಾಯ (ಸಾ.ಶ 1424–1446)

ಸಂಗಮ ವಂಶದ ಪ್ರಸಿದ್ದ ದೊರೆಯಾಗಿದ್ದ ಈತನ ಆಳ್ವಿಕೆಯು ವಿಜಯನಗರದಲ್ಲಿ ಮಹತ್ವದ ಕಾಲವಾಗಿದೆ. ಅಧಿಕಾರಕ್ಕೆ ಬಂದ ಮೇಲೆ ನುರಿತ ಬಿಲ್ಲುಗಾರರು ಹಾಗೂ ಕುದುರೆಗಳನ್ನು ಪಳಗಿಸುವ ಕಲೆಯಲ್ಲಿ ಪ್ರವೀಣರಾದ ಮುಸ್ಲಿಮರನ್ನು ಒಳಗೊಂಡಂತೆ ಹೊಸದಾಗಿ ಸೈನ್ಯವನ್ನು ಸಂಘಟಿಸಿದನು. ಈ ಸೈನ್ಯದ ನೆರವಿನಿಂದ ಆಂಧ್ರದ ಕೊಂಡವೀಡು ಪ್ರದೇಶದ ರೆಡ್ಡಿ ನಾಯಕರನ್ನು ಸೋಲಿಸಿದನು. ಬಹಮನಿ ಸುಲ್ತಾನ ಅಹ್ಮದ್ ಷಾನೊಂದಿಗೆ ಕಾದಾಡಿ ಪ್ರಸಿದ್ಧವಾದ ಮುದುಗಲ್ ಕೋಟೆ, ರಾಯಚೂರು ಹಾಗೂ ಬಂಕಾಪುರಗಳನ್ನು ಸಂರಕ್ಷಿಸಿಕೊಂಡನು. ಈತನ ವೀರ ಸೇನಾನಿಯಾದ ಲಕ್ಕಣ್ಣ ದಂಡೇಶನು ಕೇರಳ ಮತ್ತು ಶ್ರೀಲಂಕಾ ರಾಜರ ಮೇಲೆ ವಿಜಯ ಸಾಧಿಸಿ ಅವರಿಂದ ಕಪ್ಪ ಕಾಣಿಕೆ ಸಂಗ್ರಹಿಸಿದನು.



ಸರ್ವಧರ್ಮ ಸಹಿಷ್ಣುವಾಗಿದ್ದ ಪ್ರೌಢದೇವರಾಯನು ರಾಜಧಾನಿಯಲ್ಲಿ ಜೈನ ಹಾಗೂ ವೈಷ್ಣವ ದೇವಾಲಯಗಳನ್ನು ನಿರ್ಮಿಸಿದನು. ಅಲ್ಲದೇ ಮಸೀದಿಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಿದನು. ಈತನ ಆಸ್ಥಾನದಲ್ಲಿ ತೆಲುಗು ಕವಿ ಶ್ರೀನಾಥ, ಸಂಸ್ಕೃತ ವಿದ್ವಾಂಸ ಡಿಂಡಿಮ ಮತ್ತು ಕನ್ನಡ ಕವಿ ಹಾಗೂ ಮಂತ್ರಿಯಾಗಿದ್ದ ಲಕ್ಕಣ್ಣ ದಂಡೇಶ ಮುಂತಾದವರು ಆಶ್ರಯ ಪಡೆದಿದ್ದರು. ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಧರ್ಮ ಪುನರುಜ್ಜೀವನ ಕಂಡಿತು.

ಪರ್ಷಿಯಾ ದೇಶದ ರಾಯಭಾರಿ ಅಬ್ದುಲ್ ರಜಾಕ್‌ನು ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರವನ್ನು ಸಂದರ್ಶಿಸಿ "ವಿಜಯನಗರದಂತಹ ಸಂಪದ್ಭರಿತ ರಾಜಧಾನಿಯನ್ನು ನನ್ನ ಕಣ್ಣುಗಳು ಮೊದಲ ಬಾರಿ ನೋಡುತ್ತಿವೆ. ನಗರಕ್ಕೆ ಏಳು ಕೋಟೆಗಳ ಆವರಣವಿದೆ. ರಾಯನ ಸೇನೆ ಲಕ್ಷಾವಧಿ ಸಂಖ್ಯೆಯಲ್ಲಿದೆ" ಎಂದು ವರ್ಣಿಸಿದ್ದಾನೆ.

ಈತನಿಗೆ 'ಗಜಬೇಂಟೆಗಾರ', 'ಚತುಸಮುದ್ರಾಧೀಶ್ವರ', 'ಅರಿರಾಯವಿಭಾಡ' ಎಂಬ ಬಿರುದುಗಳಿದ್ದವು. ಸಾ.ಶ 1446 ರಲ್ಲಿ ಪ್ರೌಢದೇವರಾಯನು ಮೃತನಾದ ಮೇಲೆ ಅವನ ಮಗ ಮಲ್ಲಿಕಾರ್ಜುನ (ಸಾ.ಶ 1446–1465) ಹಾಗೂ **3ನೇ ವಿರೂಪಾಕ್ಷ (ಸಾ.ಶ 1465–1485)**ರು ಆಳ್ವಿಕೆ ನಡೆಸಿದರು. ಇವರು ದುರ್ಬಲರಾಗಿದ್ದರಿಂದ ಪ್ರಬಲ ಸೇನಾನಿಯಾದ ಸಾಳುವ ನರಸಿಂಹನು ರಾಜಧಾನಿಯನ್ನು ವಶಪಡಿಸಿಕೊಂಡನು. ಇದರೊಂದಿಗೆ ಸಂಗಮ ವಂಶದ ಆಳ್ವಿಕೆ ಸಾ.ಶ. 1485ರಲ್ಲಿ ಕೊನೆಗೊಂಡಿತು.

### ಸಾಳುವ ವಂಶ (ಸಾ.ಶ 1485–1505)

ಸಾ.ಶ 1485 ರಲ್ಲಿ ಅಧಿಕಾರಕ್ಕೆ ಬಂದ ಸಾಳುವ ನರಸಿಂಹನು 6 ವರ್ಷ ಆಡಳಿತ ನಡೆಸಿ ಸಾ.ಶ 1491 ರಲ್ಲಿ ಮರಣ ಹೊಂದಿದನು. ಆಗ ಆತನ ಮಕ್ಕಳು ಅಪ್ರಾಪ್ತರಾಗಿದ್ದರಿಂದ ಸಾ.ಶ 1491 ರಿಂದ ಸಾ.ಶ 1503 ರ ವರೆಗೆ ಆಡಳಿತವು ತುಳುವ ನರಸನಾಯಕ ಎಂಬ ಸೇನಾನಿಯ ರಕ್ಷಣೆಯಲ್ಲಿ ನಡೆಯಿತು.

### ತುಳುವ ವಂಶ (ಸಾ.ಶ 1505–1567)

ಸಾ.ಶ 1505 ರಲ್ಲಿ ತುಳುವ ನರಸನಾಯಕನ ಮಗ ವೀರ ನರಸಿಂಹನು ತುಳುವ ಮನೆತನದ ಆಳ್ವಿಕೆ ಪ್ರಾರಂಭಿಸಿದನು. ಇವನು 1509ರಲ್ಲಿ ಮರಣ ಹೊಂದಿದ ನಂತರ ಅವನ ಸೋದರರಲ್ಲಿ ಕೃಷ್ಣದೇವರಾಯನು ಅಧಿಕಾರಕ್ಕೆ ಬಂದನು.

### ಕೃಷ್ಣದೇವರಾಯ (ಸಾ.ಶ 1509–1529)

ಕೃಷ್ಣದೇವರಾಯನು ವಿಜಯನಗರ ಅರಸರಲ್ಲಿಯೇ ಅತ್ಯಂತ ಪ್ರಸಿದ್ಧ ದೊರೆಯಾಗಿದ್ದನು. ಅಧಿಕಾರಕ್ಕೆ ಬಂದ ಹೊಸದರಲ್ಲಿ ಈತನು ಅನೇಕ ಬಂಡಾಯಗಳನ್ನು ಎದುರಿಸಬೇಕಾಯಿತು.

> ಅಸಾಮಾನ್ಯ ಪರಾಕ್ರಮಿ, ಚತುರ ಸೇನಾನಿ ಮತ್ತು ರಾಜತಾಂತ್ರಿಕ ನಿಪುಣನಾಗಿದ್ದ ಕೃಷ್ಣದೇವರಾಯನು ಶತೃಗಳನ್ನು ಸದೆಬಡಿದು ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ವಿಸ್ತರಿಸಿದನೆಂದು ಇತಿಹಾಸಕಾರ ರಾಬರ್ಟ್ ಸಿವೆಲ್ ಹೇಳುತ್ತಾನೆ.

ಸಾ.ಶ. 1510ರಲ್ಲಿ ಉಮ್ಮತ್ತೂರಿನ ಪಾಳೆಯಗಾರ ಗಂಗರಾಜನಿಂದ ಶಿವನಸಮುದ್ರ ಕೋಟೆಯನ್ನು ವಶಪಡಿಸಿಕೊಂಡನು. ನಂತರ ರಾಯಚೂರು ಕೋಟೆಯನ್ನು ಗೆದ್ದನು. ಬಿಜಾಪುರದ ಸುಲ್ತಾನನಿಂದ ಗೋವೆಯನ್ನು ವಶಪಡಿಸಿಕೊಳ್ಳುವಲ್ಲಿ ಪೋರ್ಚುಗೀಸರಿಗೆ ಸಹಾಯ ಮಾಡಿದನು. ಸಾ.ಶ. 1513 ರಲ್ಲಿ ಉದಯಗಿರಿ ಕೋಟೆಯನ್ನು, ಸಾ.ಶ. 1518 ಕಳಿಂಗದ ದೊರೆ ಗಜಪತಿ ಪ್ರತಾಪರುದ್ರನನ್ನು ಸೋಲಿಸಿ ರಾಜಧಾನಿ ಕಟಕ್ ಅನ್ನು ವಶಪಡಿಸಿಕೊಂಡನು ಹಾಗೂ ಗಜಪತಿಯ ಮಗಳಾದ ಜಗನ್ಮೋಹಿನಿಯನ್ನು ಮದುವೆಯಾದನು.


ಕೃಷ್ಣದೇವರಾಯನ ಕಾಲದಲ್ಲಿನ ವಿಜಯನಗರ ಸಾಮ್ರಾಜ್ಯ
(ಸಾ.ಶ. 16ನೇ ಶತಮಾನ)
ಅಹಮದ್‌ನಗರ
ಚೌಲ್
ಧಾಬೋಳ್
ಕಲ್ಯಾಣ
ಓರಂಗಲ್ಲು
ಕಲಬುರಗಿ
ವಿಜಯಾಪುರ
ಕೊಂಡಪಲ್ಲಿ
ತಾಳಿಕೋಟೆ
ತಂಗಡಗಿ
ರಾಯಚೂರು
ರಕ್ಕಸಗಿ
ಬೆಳಗಾವಿ
ಗೋವಾ
ವಿಜಯನಗರ
ಅಂಕೋಲಾ
ತಾಡಪತ್ರಿ
ಕೆಳದಿ
ಲೇಪಾಕ್ಷಿ
ಶೃಂಗೇರಿ
ತಿರುಪತಿ
ಅರಬ್ಬೀ ಸಮುದ್ರ
ಮಂಗಳೂರು
ಬೆಂಗಳೂರು
ವೆಲ್ಲೂರು
ಬಂಗಾಳ ಕೊಲ್ಲಿ
ಶ್ರೀರಂಗಪಟ್ಟಣ
ಪಾಂಡಿಚೇರಿ
ಮಧುರೆ
ಉ
SKETCH MAP NOT TO SCALE

ಸಾ.ಶ 1522 ರಲ್ಲಿ ಆದಿಲ್‌ಶಾಹಿ ದೊರೆ ಇಸ್ಮಾಯಿಲ್ ಆದಿಲ್‌ಷಾ ನಿಂದ ರಾಯಚೂರನ್ನು ಮತ್ತೆ ವಶಪಡಿಸಿಕೊಂಡನು. ಮುಂದುವರೆದು ಕಲಬುರಗಿ, ಬೀದರ್ ಕೋಟೆಗಳನ್ನು ವಶಪಡಿಸಿಕೊಂಡನು. ಬಹಮನಿ ರಾಜ್ಯದ ಪ್ರಧಾನಿ ಬಂಧಿಸಿಟ್ಟಿದ್ದ ರಾಜಪುತ್ರನನ್ನು ಬಿಡುಗಡೆಗೊಳಿಸಿ ಬೀದರಿನ ಸಿಂಹಾಸನದ ಮೇಲೆ ಪ್ರತಿಷ್ಠಾಪಿಸಿದನು. ಅದಕ್ಕಾಗಿ ಕೃಷ್ಣದೇವರಾಯನು 'ಯವನ ರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದು ಧರಿಸಿದನು. ಸಾ.ಶ 1529 ರಲ್ಲಿ ಕೃಷ್ಣದೇವರಾಯನು ಮರಣ ಹೊಂದುವ ವೇಳೆಗೆ ವಿಜಯನಗರ ಸಾಮ್ರಾಜ್ಯ ನಾಲ್ಕೂ ದಿಕ್ಕುಗಳಲ್ಲಿ ವಿಸ್ತರಿಸಿತ್ತು. ಈತನ ಆಸ್ಥಾನಕ್ಕೆ ಭೇಟಿ ನೀಡಿದ ಡೊಮಿಂಗೊ ಪೆಯಸ್ "ಕೃಷ್ಣದೇವರಾಯನು ಸೌಮ್ಯ ಸ್ವಭಾವದ ವ್ಯಕ್ತಿತ್ವ ಹೊಂದಿದ್ದು, ದೃಢಕಾಯದವನಾಗಿದ್ದನು" ಎಂದಿದ್ದಾರೆ.

## ರಕ್ಕಸ ತಂಗಡಿ ಕದನ

ಕೃಷ್ಣದೇವರಾಯನ ನಂತರ ಅಚ್ಯುತರಾಯ (ಸಾ.ಶ. 1530–1542) ಮತ್ತು ಸದಾಶಿವರಾಯರು (ಸಾ.ಶ. 1543–1565) ಆಳಿದರು. ಸದಾಶಿವರಾಯರು ಇನ್ನೂ ಅಪ್ರಾಪ್ತರಾಗಿದ್ದ ಕಾರಣ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ಕೃಷ್ಣದೇವರಾಯನ ಅಳಿಯ ಅರವೀಡು ವಂಶದ ರಾಮರಾಯನು ವಹಿಸಿಕೊಂಡನು. ಈತನ ರಾಜತಾಂತ್ರಿಕ ನಡೆಗಳು ವಿಜಯನಗರ ರಾಜ್ಯವನ್ನು ವಿಸ್ತರಿಸಿತಲ್ಲದೆ ಶ್ರೀಮಂತಗೊಳಿಸಿತು. ಜೊತೆಗೆ ವೈರಿಗಳ ಸಂಖ್ಯೆಯನ್ನೂ ಹೆಚ್ಚಿಸಿತು.

ದಖ್ಖನ್ನಿನ ಸುಲ್ತಾನರ ರಾಜ್ಯಗಳು ಆಗಾಗ ನಡೆಸುತ್ತಿದ್ದ ದಾಳಿಯ ಪ್ರತೀಕಾರವಾಗಿ ರಾಮರಾಯನು ಬಿಜಾಪುರ ಹಾಗೂ ಗೋಲ್ಕೊಂಡ ರಾಜ್ಯಗಳ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದು ಕದನಕ್ಕೆ ಪ್ರಚೋದನೆ ನೀಡಿದವು. ವಿಜಯನಗರ ಸಾಮ್ರಾಜ್ಯದ ಏಳಿಗೆ ಹಾಗೂ ಸಮೃದ್ಧಿಯ ಬಗ್ಗೆ ಮತ್ಸರ ಹಾಗೂ ದ್ವೇಷಗಳನ್ನು ಹೊಂದಿದ್ದ ಸುಲ್ತಾನರು ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾದರು.

ಸಾ.ಶ. 1565 ಜನವರಿ 23 ರಂದು ದಖ್ಖನ್ ಸುಲ್ತಾನರ ಒಕ್ಕೂಟ ಸೈನ್ಯಕ್ಕೂ ಹಾಗೂ ವಿಜಯನಗರದ ಸೈನ್ಯಕ್ಕೂ ಕೃಷ್ಣಾ ನದಿಯ ದಂಡೆಯ ಮೇಲೆ ನಡೆದ ರಕ್ಕಸ ತಂಗಡಿ ಯುದ್ಧದಲ್ಲಿ ರಾಮರಾಯನು ಹತನಾದನು. ಗೆದ್ದ ಸುಲ್ತಾನರು ವಿಜಯನಗರವನ್ನು ಲೂಟಿ ಮಾಡಿದರು. ರಣರಂಗದಿಂದ ಪಲಾಯನಗೈದ ರಾಮರಾಯನ ಮಕ್ಕಳಾದ ತಿರುಮಲ ಮತ್ತು ವೆಂಕಟರು ಪೆನುಕೊಂಡಕ್ಕೆ ಓಡಿಹೋದರು. ಮುಂದೆ ಪೆನುಕೊಂಡ, ಚಂದ್ರಗಿರಿ ಕೊನೆಯಲ್ಲಿ ವೆಲ್ಲೂರ್‌ಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಅರವೀಡು ವಂಶಜರು ಸಾ.ಶ. 1570 ರಿಂದ 1646ರ ವರೆಗೆ ಆಡಳಿತ ನಡೆಸಿದರು. ಈ ಯುದ್ಧದ ಪರಿಣಾಮವಾಗಿ ಕರ್ನಾಟಕದಲ್ಲಿ ಮೈಸೂರು, ಕೆಳದಿ, ಚಿತ್ರದುರ್ಗ, ಯಲಹಂಕ ಮತ್ತು ಸುರಪುರ ಮುಂತಾದ ನಾಯಕರು ಮತ್ತು ಪಾಳೇಗಾರರು ಸ್ವತಂತ್ರರಾದರು.

## ವಿಜಯನಗರದ ಸಾಂಸ್ಕೃತಿಕ ಕೊಡುಗೆಗಳು

**ಆಡಳಿತ :** ವಿಜಯನಗರ ಸಾಮ್ರಾಜ್ಯವು ಬಲಿಷ್ಠ ಕೇಂದ್ರಾಡಳಿತವನ್ನು ಹೊಂದಿತ್ತು ಹಾಗೂ ವಿಕೇಂದ್ರೀಕೃತ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡಿತ್ತು. ಆಡಳಿತದಲ್ಲಿ ರಾಜನಿಗೆ ಸಹಾಯಕರಾಗಿ ವಿವಿಧ ಮಂತ್ರಿಗಳು, ವಿವಿಧ ಪ್ರಾಂತಗಳ ನಾಯಕರು ಇದ್ದರು. ಆಡಳಿತ ದೃಷ್ಟಿಯಿಂದ ಸಾಮ್ರಾಜ್ಯವನ್ನು

ಪ್ರಾಂತ್ಯಗಳಾಗಿ, ಪ್ರಾಂತ್ಯಗಳನ್ನು ನಾಡುಗಳಾಗಿ, ನಾಡುಗಳನ್ನು ನಗರಗಳಾಗಿ, ನಗರಗಳನ್ನು ಹಳ್ಳಿಗಳ ಸಮೂಹಗಳಾಗಿ ವಿಂಗಡಿಸಿದ್ದರು. ಪ್ರಾಂತಗಳಲ್ಲಿ ರಾಜಪ್ರತಿನಿಧಿಯೂ ಗ್ರಾಮಗಳಲ್ಲಿ ವಂಶಪಾರಂಪರ್ಯದಿಂದ ಬಂದ ಅಧಿಕಾರಿಗಳು ಆಡಳಿತ ನಿರ್ವಹಿಸುತ್ತಿದ್ದರು.

ಅರಸನು ನ್ಯಾಯಾಂಗದ ಪರಮಾಧಿಕಾರಿಯಾಗಿದ್ದನು. ಪ್ರಾಂತ್ಯಗಳಲ್ಲಿ ಪ್ರಾಂತಾಧಿಕಾರಿ ನ್ಯಾಯ ನೀಡುತ್ತಿದ್ದನು. ಆದಾಯದ ಪ್ರಮುಖ ಮೂಲ ಭೂಕಂದಾಯವನ್ನು 1/6 ಭಾಗದಷ್ಟು ಸಂಗ್ರಹಿಸಲಾಗುತ್ತಿತ್ತು. ಇದರೊಂದಿಗೆ ವಾಣಿಜ್ಯ ತೆರಿಗೆ, ವೃತ್ತಿ ತೆರಿಗೆ, ದಾರಿ ಸುಂಕ, ಸಂತೆ ಸುಂಕ, ರಫ್ತು ತೆರಿಗೆ, ಕಪ್ಪ ಕಾಣಿಕೆಗಳು ರಾಜ್ಯಾದಾಯದ ಮೂಲಗಳಾಗಿದ್ದವು.

ವಿಜಯನಗರದ ಕಾಲದಲ್ಲಿ ಕಾಲ್ದಳ, ಅಶ್ವದಳ, ಗಜದಳ, ಮತ್ತು ಫಿರಂಗಿ ಪಡೆಗಳು ಸೈನ್ಯದ ಪ್ರಮುಖ ಅಂಗಗಳಾಗಿದ್ದವು. ಅರಬ್ ದೇಶದ ಕುದುರೆಗಳು ವಿಜಯನಗರದ ಆಕರ್ಷಣೆಯಾಗಿದ್ದವು.

**ಸಾಮಾಜಿಕ ಸ್ಥಿತಿ :** ವಿಜಯನಗರ ಕಾಲದ. ಸಮಾಜದಲ್ಲಿ ಬಾಲ್ಯ ವಿವಾಹ, ಸತಿ ಪದ್ಧತಿ ಹಾಗೂ ದೇವದಾಸಿ ಪದ್ಧತಿಗಳು ರೂಢಿಯಲ್ಲಿದ್ದವು. ಏಕ ಪತ್ನಿತ್ವ ಸಾಮಾನ್ಯವಾಗಿದ್ದರೂ ಶ್ರೀಮಂತರು, ಅರಸರು ಬಹುಪತ್ನಿತ್ವ ಅನುಸರಿಸುತ್ತಿದ್ದರು. ಸ್ತ್ರೀಯರಿಗೆ ಗೌರವ ನೀಡಲಾಗುತ್ತಿತ್ತು. ದೀಪಾವಳಿ ಮತ್ತು ದಸರಾ ಹಬ್ಬಗಳನ್ನು ವಿಜೃಂಭಣೆಯಿಂದ ಸಾರ್ವಜನಿಕವಾಗಿ ಆಚರಿಸಲಾಗುತ್ತಿತ್ತು. ದಸರಾ ಹಬ್ಬವು ರಾಜಾಶ್ರಯದಲ್ಲಿ ನಡೆಯುತ್ತಿತ್ತು.

**ಆರ್ಥಿಕ ಸ್ಥಿತಿ :** ಕೃಷಿಯು ಮುಖ್ಯ ಕಸುಬಾಗಿತ್ತು. ಅಕ್ಕಿ, ಜೋಳ, ಕಬ್ಬು ಮತ್ತು ಹತ್ತಿಗಳು ಮುಖ್ಯ ಬೆಳೆಗಳಾಗಿದ್ದವು. ವಿಜಯನಗರದ ಅರಸರು ಕೆರೆ, ಕಟ್ಟೆ, ಬಾವಿಗಳನ್ನು ಕಟ್ಟಿಸುವುದರ ಮೂಲಕ ಕೃಷಿಗೆ ಉತ್ತೇಜನ ನೀಡಿದರು. ವಿದೇಶಗಳೊಂದಿಗೆ ವಾಣಿಜ್ಯ ಸಂಪರ್ಕ ಇಟ್ಟುಕೊಂಡಿದ್ದರಿಂದ ಅಕ್ಕಿ, ಹತ್ತಿ ಬಟ್ಟೆಗಳು, ಕಬ್ಬಿಣ, ವಜ್ರ, ಸಕ್ಕರೆ, ಕಸ್ತೂರಿ, ಶ್ರೀಗಂಧ, ಸಾಂಬಾರು ಪದಾರ್ಥಗಳು ಮುಂತಾದವುಗಳು ರಫ್ತಾಗುತ್ತಿದ್ದವು. ಕುದುರೆ, ರೇಷ್ಮೆ ಬಟ್ಟೆಗಳು, ಮಖಮಲ್ ಬಟ್ಟೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ವಿಜಯನಗರವು ವಜ್ರದ ವ್ಯಾಪಾರಕ್ಕೆ ಅಂತಾರಾಷ್ಟ್ರೀಯ ವ್ಯಾಪಾರ ಕೇಂದ್ರವಾಗಿತ್ತು. ಬಟ್ಟೆ ನೇಯುವುದು ಪ್ರಮುಖ ಕೈಗಾರಿಕೆಯಾಗಿತ್ತು. ಭಟ್ಕಳ, ಹೊನ್ನಾವರ, ಮಂಗಳೂರುಗಳು ಪ್ರಮುಖ ರೇವು ಪಟ್ಟಣಗಳಾಗಿದ್ದವು. ಹೊನ್ನು ಅಥವಾ ವರಹ ಚಿನ್ನದ ನಾಣ್ಯವಾಗಿತ್ತು. ನಾಣ್ಯಗಳ ಮೇಲೆ ದೇವದೇವತೆಗಳ ಚಿತ್ರಗಳಿರುತ್ತಿದ್ದವು.

**ಸಾಹಿತ್ಯ :** ವಿಜಯನಗರ ಅರಸರ ಕಾಲದಲ್ಲಿ ಸಂಸ್ಕೃತ, ತೆಲುಗು ಮತ್ತು ಕನ್ನಡ ಭಾಷೆಗಳ ಸಾಹಿತ್ಯವು ವಿಶೇಷವಾಗಿ ಬೆಳೆಯಿತು. ಸಂಸ್ಕೃತ ಭಾಷೆಯಲ್ಲಿ ವಿದ್ಯಾರಣ್ಯರು 'ಶಂಕರ ವಿಜಯ' ಮತ್ತು 'ಸರ್ವದರ್ಶನ ಸಂಗ್ರಹ' ಕೃತಿಗಳನ್ನು ಬರೆದರು. ವಿದ್ಯಾರಣ್ಯರ ಸಹೋದರ ಸಾಯಣಾಚಾರ್ಯರು 'ವೇದಾರ್ಥಪ್ರಕಾಶ' ಮತ್ತು 'ಆಯುರ್ವೇದ ಸುಧಾನಿಧಿ' ಗ್ರಂಥಗಳನ್ನು ರಚಿಸಿದರು. ವಿಜಯನಗರದ ಅರಸರು ಮತ್ತು ಪರಿವಾರದವರು ಕೂಡ ಸಾಹಿತ್ಯ ರಚಿಸಿದ್ದಾರೆ. ಅವರಲ್ಲಿ ಗಂಗಾದೇವಿಯು 'ಮಧುರಾ ವಿಜಯಂ' ಎಂಬ ಕೃತಿಯನ್ನು, ಪ್ರೌಢದೇವರಾಯ ಮಹಾನಾಟಕ 'ಸುಧಾನಿಧಿ'ಯನ್ನು, ಕೃಷ್ಣದೇವರಾಯನು 'ಜಾಂಬವತಿ ಕಲ್ಯಾಣ', 'ಮದಾಲಸ ಚರಿತಂ', 'ರಸಮಂಜರಿ' ಎಂಬ ಕೃತಿಗಳನ್ನು ರಚಿಸಿದರು. ಕನ್ನಡ ಭಾಷೆಗೆ ಸಂಬಂಧಿಸಿದಂತೆ ಕುಮಾರವ್ಯಾಸನ 'ಗದುಗಿನ ಭಾರತ',

ರತ್ನಾಕರವರ್ಣಿಯ 'ಭರತೇಶ ವೈಭವ', ಚಾಮರಸನ 'ಪ್ರಭುಲಿಂಗಲೀಲೆ' ಮುಂತಾದವುಗಳು ಪ್ರಮುಖವಾದವುಗಳು. ಲಕ್ಕಣ್ಣ ದಂಡೇಶನು 'ಶಿವತತ್ವ ಚಿಂತಾಮಣಿ', ಭೀಮ ಕವಿಯ 'ಬಸವ ಪುರಾಣ' ಮುಂತಾದ ವೀರಶೈವ ಸಾಹಿತ್ಯವೂ ಅಪಾರವಾಗಿ ಬೆಳೆಯಿತು.

ಕೃಷ್ಣದೇವರಾಯನು ತೆಲುಗು ಭಾಷಾ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದರಿಂದ ಅವನಿಗೆ 'ಆಂಧ್ರ ಭೋಜ' ಎಂಬ ಬಿರುದು ಬಂದಿತು. ಸ್ವತ: ಕವಿಯಾಗಿದ್ದ ಕೃಷ್ಣದೇವರಾಯನು ತೆಲುಗಿನಲ್ಲಿಯೂ 'ಅಮುಕ್ತ ಮಾಲ್ಯದ' ಕೃತಿಯನ್ನು ರಚಿಸಿದ್ದಾನೆ. ಅಲ್ಲದೆ ತನ್ನ ಆಸ್ಥಾನದಲ್ಲಿ ಅಷ್ಟ ದಿಗ್ಗಜರೆಂದೇ ಪ್ರಖ್ಯಾತರಾಗಿದ್ದ ಅಲ್ಲಸಾನಿ ಪೆದ್ದಣ್ಣ, ನಂದಿ ತಿಮ್ಮಣ್ಣ, ಶ್ರೀನಾಥ, ಸೂರಣ್ಣ, ತೆನಾಲಿ ರಾಮಕೃಷ್ಣ ಮುಂತಾದವರಿಗೆ ಆಶ್ರಯದಾತನಾಗಿದ್ದನು.

**ಧರ್ಮ ಸಮನ್ವಯ :** ವಿಜಯನಗರದ ಅರಸರು ಪರಮತ ಸಹಿಷ್ಣುಗಳಾಗಿದ್ದರು. ಅವರು ರಾಜಧಾನಿಯಲ್ಲಿ ಮಸೀದಿಯೊಂದನ್ನು ಕಟ್ಟಿಸಿದರು. ಬುಕ್ಕರಾಯನು ಜೈನ ಮತ್ತು ವೈಷ್ಣವರ ನಡುವೆ ತಲೆದೋರಿದ್ದ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿದನೆಂದು ಆತನ ಸಾ.ಶ. 1368ರ ಶ್ರವಣಬೆಳಗೊಳ ಶಾಸನ ತಿಳಿಸುತ್ತದೆ. ಕ್ರಿಶ್ಚಿಯನ್, ಯಹೂದಿ, ಮುಸ್ಲಿಂ, ಹಿಂದೂ ಯಾರಾದರೂ ಸಹ ವಿಜಯನಗರ ಸಾಮ್ರಾಜ್ಯದಲ್ಲಿ ನಿಶ್ಚಿಂತೆಯಿಂದ ಜೀವಿಸಬಹುದಾಗಿತ್ತೆಂದೂ, ರಾಜರು ಎಲ್ಲರನ್ನೂ ಗೌರವದಿಂದ ಕಾಣುತ್ತಾರೆ ಎಂದೂ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ ಬಾರ್ಬೋಸ ತಿಳಿಸಿದ್ದಾನೆ.

**ಕಲೆ ಮತ್ತು ವಾಸ್ತುಶಿಲ್ಪ :** ವಿಜಯನಗರ ಅರಸರ ಕಾಲದಲ್ಲಿ ರಚನೆಗೊಂಡ ದೇವಾಲಯಗಳು, ಕಟ್ಟಡಗಳು ಮತ್ತು ಮೂರ್ತಿಶಿಲ್ಪಗಳನ್ನೆಲ್ಲ ಅವಲೋಕಿಸಿ ಖ್ಯಾತ ಕಲಾ ಇತಿಹಾಸಕಾರರಾದ ಪರ್ಸಿಬ್ರೌನ್ ವಿಜಯನಗರ ವಾಸ್ತುಶಿಲ್ಪ ಶೈಲಿಯನ್ನು 'ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ಸ್ವರೂಪ' ಎಂದು ಬಣ್ಣಿಸಿದ್ದಾರೆ.



ಹಜಾರ ರಾಮಸ್ವಾಮಿ ದೇವಾಲಯ, ಹಂಪೆ


ಈ ಕಾಲದ ದೇವಾಲಯಗಳು ಬಿರುಸಾದ ಬೆಣಚು ಕಲ್ಲುಗಳಿಂದ ರಚನೆಗೊಂಡಿವೆ. ಹಂಪೆಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪ, ಹಜಾರ ರಾಮಸ್ವಾಮಿ ದೇವಾಲಯ, ವಿಠ್ಠಲಸ್ವಾಮಿ ದೇವಾಲಯ, ಕೃಷ್ಣಸ್ವಾಮಿ ದೇವಾಲಯ, ಗಾರೆಯಿಂದ ರಚಿಸಿದ ಕಮಲ್ ಮಹಲ್, ಶೃಂಗೇರಿ ವಿದ್ಯಾಶಂಕರ ದೇವಾಲಯ, ಪ್ರಮುಖವಾದವುಗಳು. ವಿಶಾಲವಾದ ಪ್ರಾಕಾರ, ಎತ್ತರದ ಗೋಪುರ, ವಿಶಾಲ ಕಲ್ಯಾಣ ಮಂಟಪ, ಸಭಾ ಮಂಟಪ, ವಸಂತ ಮಂಟಪ ಮುಂತಾದವುಗಳು ವಿಜಯನಗರ ಕಾಲದ ದೇವಾಲಯದ ಲಕ್ಷಣಗಳಾಗಿವೆ.



ವಿದ್ಯಾಶಂಕರ ದೇವಾಲಯ, ಶೃಂಗೇರಿ

ಕಾಳಹಸ್ತಿ, ಶ್ರೀಶೈಲ, ತಿರುಪತಿ, ಚಿದಂಬರಂ, ಶ್ರೀರಂಗಂ, ಕುಂಭಕೋಣಂ, ಕಾಂಚಿ ಮುಂತಾದ ಕಡೆಗಳಲ್ಲಿ ವಿಜಯನಗರ ಕಾಲದ ವಾಸ್ತುಶಿಲ್ಪಗಳನ್ನು ಕಾಣಬಹುದು.

ಶೈವರ ಅಜಂತಾ ಎಂದು ಪ್ರಸಿದ್ಧವಾಗಿರುವ ಲೇಪಾಕ್ಷಿ ದೇವಾಲಯವು ವಿಜಯನಗರ ಕಾಲದ ಶಿವಪುರಾಣ ಚಿತ್ರಗಳನ್ನು ಹೊಂದಿದೆ. ಹಂಪೆಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪದ ಮೇಲ್ಛಾವಣಿಯಲ್ಲಿ ದಶಾವತಾರ ಮತ್ತು ಗಿರಿಜಾ ಕಲ್ಯಾಣಕ್ಕೆ ಸಂಬಂಧಿಸಿದ ದೃಶ್ಯಗಳನ್ನು ಚಿತ್ರಿಸಲಾಗಿದೆ.



ಸಾಸಿವೆಕಾಳು ಗಣೇಶ, ಹಂಪಿ



ಉಗ್ರನರಸಿಂಹ, ಹಂಪಿ



ಕಲ್ಲಿನ ರಥ, ಹಂಪಿ

ಹಂಪಿಯ ಕಲ್ಲಿನ ರಥ, ನರಸಿಂಹ ಮತ್ತು ಗಣಪತಿ ವಿಗ್ರಹಗಳು ವಿಜಯನಗರ ಕಾಲದ ಏಕಶಿಲಾ ಶಿಲ್ಪಕಲೆಯನ್ನು ಎತ್ತಿ ತೋರಿಸುತ್ತವೆ. ಕರ್ನಾಟಕ ಸಂಗೀತವೆಂದು ಪರಿಚಿತವಾದ ದಕ್ಷಿಣಾದಿ ಸಂಗೀತ ಈ ಕಾಲದಲ್ಲಿ ಜನಸಾಮಾನ್ಯರಿಗೂ ಮುಟ್ಟಿತು. ಪುರಂದರದಾಸರು ಹಾಗೂ ಕನಕದಾಸರು ಈ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ.

**ಕಾಲಗಣನೆ (ಸಾ.ಶ.)**

| | | |
|---|---|---|
| ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲ | – | 1336–1565 |
| ಸಂಗಮ ವಂಶ | – | 1336–1485 |
| ಹರಿಹರ | – | 1336–1357 |
| ಬುಕ್ಕರಾಯ | – | 1357–1377 |
| ಎರಡನೆಯ (ಪ್ರೌಢ) ದೇವರಾಯ | – | 1424–1446 |
| ಸಾಳುವ ವಂಶ | – | 1485–1505 |
| ತುಳುವ ನರಸನಾಯಕ | – | 1491–1503 |
| ತುಳುವ ವಂಶ | – | 1505–1567 |
| ಕೃಷ್ಣದೇವರಾಯ | – | 1509–1529 |
| ರಕ್ಕಸತಂಗಡಿ ಯುದ್ಧ | – | 1565, ಜನವರಿ 23 |

**ಗಮನಿಸಿ:** ಸಾ.ಶ. ಎಂದರೆ 'ಸಾಮಾನ್ಯ ಶಕ' ಸಾ.ಶ.ಪೂ. ಎಂದರೆ 'ಸಾಮಾನ್ಯ ಶಕ ಪೂರ್ವ'. ಕ್ರಿ.ಶ. ಮತ್ತು ಕ್ರಿ.ಪೂ. ಪ್ರಯೋಗಗಳಿಗೆ ಬದಲಾಗಿ ಸಾ.ಶ. ಮತ್ತು ಸಾ.ಶ.ಪೂ ಎಂದು ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಬಳಸಲಾಗಿದೆ.



## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಶ್ರೀಲಂಕಾದ ರಾಜರನ್ನು ಸೋಲಿಸಿ ಕಪ್ಪಕಾಣಿಕೆ ಪಡೆದ ಎರಡನೆಯ ದೇವರಾಯನ ಸೇನಾನಿ__________
2. ಕೃಷ್ಣದೇವರಾಯನು ಗಜಪತಿ ಪ್ರತಾಪರುದ್ರನ ಮಗಳಾದ__________ಅನ್ನು ಮದುವೆಯಾದನು.
3. ವಿಜಯನಗರ ಸಾಮ್ರಾಜ್ಯದಲ್ಲಿ ವರಾಹ______ ನಾಣ್ಯವಾಗಿತ್ತು.
4. ಎಲ್ಲಾ ಧರ್ಮಿಯರೂ ವಿಜಯನಗರ ಸಾಮ್ರಾಜ್ಯದಲ್ಲಿ ನಿಶ್ಚಿಂತೆಯಿಂದ ಜೀವಿಸಬಹುದಾಗಿತ್ತು ಎಂದು ಹೇಳಿದ ವಿದೇಶಿ ಪ್ರವಾಸಿಗ__________
5. ವಿಜಯನಗರ ವಾಸ್ತುಶೈಲಿಯು ದ್ರಾವಿಡ ಶೈಲಿಯ ಶ್ರೇಷ್ಠ ವಿಕಸಿತ ಸ್ವರೂಪ ಎಂದು ಹೇಳಿದ ಕಲಾ ಇತಿಹಾಸಕಾರ________

**II ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ವಿಜಯನಗರ ಸಾಮ್ರಾಜ್ಯದ ಸ್ಥಾಪಕರು ಯಾರು?
2. ವಿಜಯನಗರ ಸಾಮ್ರಾಜ್ಯವನ್ನಾಳಿದ ವಂಶಗಳಾವುವು?

3. ಸಂಗಮ ವಂಶದ ಪ್ರಖ್ಯಾತ ದೊರೆ ಯಾರು?
4. ವಿಜಯನಗರ ಸಾಮ್ರಾಜ್ಯದ ಅರಸರಲ್ಲಿ ಅತ್ಯಂತ ಶ್ರೇಷ್ಠ ದೊರೆ ಯಾರು?
5. ರಕ್ಕಸ ತಂಗಡಿ ಕದನ ಯಾವಾಗ ನಡೆಯಿತು?
6. ವಿಜಯನಗರ ಸಾಮ್ರಾಜ್ಯದ ರಾಜ್ಯಾದಾಯದ ಮೂಲಗಳಾವುವು?
7. ವಿಜಯನಗರ ಸಾಮ್ರಾಜ್ಯದಲ್ಲಿ ಆಚರಿಸುತ್ತಿದ್ದ ಹಬ್ಬಗಳಾವುವು?
8. ವಿಜಯನಗರ ಸಾಮ್ರಾಜ್ಯದಲ್ಲಿ ಬೆಳೆಯುತ್ತಿದ್ದ ಪ್ರಮುಖ ಬೆಳೆಗಳಾವುವು?
9. ಕೃಷ್ಣದೇವರಾಯನ ಕೃತಿಗಳನ್ನು ತಿಳಿಸಿ.
10. ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರನ್ನು ಹೆಸರಿಸಿ.
11. ವಿಜಯನಗರ ಕಾಲದ ಪ್ರಮುಖ ದೇವಾಲಯಗಳಾವುವು?

**III ಈ ಕೆಳಕಂಡ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಕೃಷ್ಣದೇವರಾಯನ ದಿಗ್ವಿಜಯಗಳನ್ನು ಕುರಿತು ಬರೆಯಿರಿ.
2. ವಿಜಯನಗರ ಕಾಲದ ಸಾಹಿತ್ಯ ಕೃತಿಗಳನ್ನು ಪಟ್ಟಿ ಮಾಡಿ.

**IV ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| 1. ಗಂಗಾದೇವಿ | ಅ) ಆಂಧ್ರಭೋಜ |
| 2. ಎರಡನೆಯ ದೇವರಾಯ | ಆ) ಮಧುರಾ ವಿಜಯಂ |
| 3. ಕೃಷ್ಣದೇವರಾಯ | ಇ) ವಿದ್ಯಾಶಂಕರ ದೇವಾಲಯ |
| 4. ಶೃಂಗೇರಿ | ಈ) ಗಜಬೇಂಟೆಗಾರ |

**ಚಟುವಟಿಕೆಗಳು**

1. ವಿಜಯನಗರದ ಸ್ಮಾರಕಗಳ ಛಾಯಾ ಚಿತ್ರಗಳನ್ನು ಸಂಗ್ರಹಿಸಿ, ವಿವರಣೆಯನ್ನು ಬರೆಯಿರಿ.
2. ವಿಜಯನಗರ ಕಾಲದ ಮೂರ್ತಿಶಿಲ್ಪಗಳ ಚಿತ್ರಗಳನ್ನು ಸಂಗ್ರಹಿಸಿ ವಿವರಣೆಯನ್ನು ಬರೆಯಿರಿ.
3. ಪುರಂದರ ಮತ್ತು ಕನಕದಾಸರ ಒಂದೆರಡು ಕೀರ್ತನೆಗಳನ್ನು ಸಂಗ್ರಹಿಸಿ ಗುಂಪಾಗಿ ಹಾಡಿ.
4. ಹಂಪಿಗೆ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಿ. ಪ್ರವಾಸದ ನಂತರ ನಿಮ್ಮ ಅನುಭವಗಳನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.

★ ★ ★

| ಪಾಠ 2 | ಬಹಮನಿ ಆದಿಲ್ ಷಾಹಿಗಳು |
|---|---|

K3W5J9

**ಪಾಠದ ಪರಿಚಯ**

ಕರ್ನಾಟಕದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು ಸಾ.ಶ. 1336ರಲ್ಲಿ ಸ್ಥಾಪನೆಯಾಯಿತು. ತದನಂತರ ಸಾ.ಶ. 1347 ಆಗಸ್ಟ್ 3 ರಂದು ಅಸ್ತಿತ್ವಕ್ಕೆ ಬಂದ ಪ್ರಥಮ ಮುಸ್ಲಿಂ ಸಂತತಿ ಬಹಮನಿ ಸಾಮ್ರಾಜ್ಯವಾಗಿದೆ. ಅಲ್ಲಾವುದ್ದೀನ್ ಹಸನ್ ಗಂಗೂ ಬಹಮನ್‌ಷಾ ಈ ಮನೆತನದ ಸ್ಥಾಪಕ. ಬಹಮನಿ ಸುಲ್ತಾನರು ಮತ್ತು ವಿಜಯನಗರದ ಅರಸರ ನಡುವೆ ನಿರಂತರ ಯುದ್ಧಗಳು ನಡೆಯುತ್ತಿದ್ದವು. ಕಾಲಗತಿಯಲ್ಲಿ ಅಧಿಕಾರಕ್ಕಾಗಿ ಬಹಮನಿ ರಾಜ್ಯದಲ್ಲಿ ಅಂತಃಕಲಹಗಳು ನಡೆದು ಅದು ಸಾ.ಶ 1527ರ ಹೊತ್ತಿಗೆ ಐದು ಷಾಹಿ ಮನೆತನಗಳು ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ವಿಜಯಪುರದ ಆದಿಲ್ ಷಾಹಿಗಳು ಪ್ರಮುಖರಾದವರು. ಈ ಮನೆತನದ ಪ್ರಮುಖ ಸುಲ್ತಾನರ ಸಾಧನೆಗಳನ್ನು ಪರಿಚಯಿಸಲಾಗಿದೆ. ಇದರ ಜೊತೆಗೆ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರು.

ಈ ಪಾಠದಲ್ಲಿ ಬಹಮನಿ ರಾಜ್ಯದ ಸುಲ್ತಾನ ಫಿರೋಜ್ ಷಾ ಹಾಗೂ ಪ್ರಸಿದ್ಧ ಮುಖ್ಯಮಂತ್ರಿ ಮಹಮದ್‌ಗವಾನ್‌ನ ಸಾಧನೆಗಳನ್ನು ವಿವರಿಸಲಾಗಿದೆ. ಇದರೊಂದಿಗೆ ಬಹಮನಿ ರಾಜ್ಯದ ಪ್ರಮುಖ ಕೊಡುಗೆಗಳನ್ನು ವಿವರಿಸಲಾಗಿದೆ.

**ಸಾಮರ್ಥ್ಯಗಳು**

1] ಫಿರೋಜ್‌ಷಾ ಮತ್ತು ಮಹಮದ್ ಗವಾನ್ ಇವರ ಕೊಡುಗೆಗಳನ್ನು ತಿಳಿಯುವುದು.

2] ಬಹಮನಿ ಸುಲ್ತಾನರ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿರುವ ಪ್ರಮುಖ ಕೊಡುಗೆಗಳನ್ನು ಗುರುತಿಸುವುದು.

3] ಭೂಪಟದಲ್ಲಿ ಬಹಮನಿ ರಾಜ್ಯಕ್ಕೆ ಸಂಬಂಧಿಸಿದ ಮುಖ್ಯ ಐತಿಹಾಸಿಕ ಸ್ಥಳಗಳನ್ನು ಗುರುತಿಸುವುದು.

4] ವಿಜಯಪುರದ ಆದಿಲ್ ಷಾಹಿಗಳಲ್ಲಿ ಪ್ರಮುಖ ಸುಲ್ತಾನರ ಬಗೆಗೆ ಅರಿಯುವುದು.

5] ಕಲೆ, ಸಾಹಿತ್ಯ, ವಾಸ್ತು ಶಿಲ್ಪಗಳನ್ನು ಕುರಿತು ತಿಳಿಯುವುದು.



ವಿಜಯನಗರ ಸಾಮ್ರಾಜ್ಯವು ಆರಂಭವಾದ ಕಾಲದಲ್ಲಿಯೇ ಆ ರಾಜ್ಯದ ಉತ್ತರ ಭಾಗದಲ್ಲಿ ಬಹಮನಿ ಸಾಮ್ರಾಜ್ಯವು 1347ರಲ್ಲಿ ಸ್ಥಾಪನೆಯಾಯಿತು. ಇದರ ಸ್ಥಾಪಕ 'ಅಲ್ಲಾವುದ್ದಿನ್ ಹಸನ್ ಗಂಗು ಬಹಮನ್ ಷಾ'. ಬಹಮನ್ ಷಾ ಈ ಮೊದಲು ದೆಹಲಿಯ ಸುಲ್ತಾನನಾದ ಮಹಮ್ಮದ್ ಬಿನ್ ತುಘಲಕನ ಸೈನ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದನು.

## ಬಹಮನಿ ಸುಲ್ತಾನರು (ಸಾ.ಶ. 1347ರಿಂದ 1527)

ಬಹಮನಿ ರಾಜ್ಯವು ಈಗಿನ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ (ತೆಲಂಗಾಣ) ಭಾಗಗಳನ್ನು ಒಳಗೊಂಡಿತ್ತು. ಕೃಷ್ಣಾ ನದಿ ರಾಜ್ಯದ ದಕ್ಷಿಣದ ಗಡಿಯಾಗಿತ್ತು. ಪ್ರಾರಂಭದಲ್ಲಿ ಕಲಬುರಗಿ ಅನಂತರ ಬೀದರ್ ಅದರ ರಾಜಧಾನಿಯಾಗಿತ್ತು. ಕೃಷ್ಣಾ ನದಿಯ ಉತ್ತರದಲ್ಲಿ ಬಹಮನಿ ಸಾಮ್ರಾಜ್ಯವಿದ್ದರೆ, ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯವಿದ್ದಿತು. ತಾಜುದ್ದೀನ್ ಫಿರೋಜ್ ಷಾ ಬಹಮನಿ ವಂಶದಲ್ಲಿ ಪ್ರಸಿದ್ಧನಾದ ಸುಲ್ತಾನ.



**ತಾಜುದ್ದೀನ್ ಫಿರೋಜ್ ಷಾ (ಸಾ.ಶ. 1397–1422)**

ಈತನು ನ್ಯಾಯಪರ, ಉದಾರಿ ಹಾಗೂ ದೈವಭಕ್ತನಾಗಿದ್ದನು. ಕುರಾನಿನ ಪ್ರತಿಗಳನ್ನು ತಯಾರಿಸಿ ತನ್ನ ಜೀವನಾಂಶ ಸಂಪಾದಿಸುತ್ತಿದ್ದನು. ಲೇಖಕನೂ, ಬಹುಭಾಷಾ ವಿಶಾರದನೂ ಆಗಿದ್ದ ಫಿರೋಜ್‌ಷಾನಿಗೆ ಜ್ಯಾಮಿತಿ ಮತ್ತು ಧರ್ಮಶಾಸ್ತ್ರಗಳಲ್ಲಿ ಪರಿಣತಿ ಇತ್ತು. ಈತನು ಅನೇಕ ಪಂಡಿತರಿಗೆ, ಕವಿಗಳಿಗೆ, ಕಲಾವಿದರಿಗೆ ತನ್ನ ಆಸ್ಥಾನದಲ್ಲಿ (ದರ್ಬಾರ) ಆಶ್ರಯ ನೀಡಿ ಗೌರವಿಸುತ್ತಿದ್ದನು. ದೌಲತಾಬಾದ್‌ನಲ್ಲಿ (ಮಹಾರಾಷ್ಟ್ರ) ಆಕಾಶ ವೀಕ್ಷಣಾಲಯವನ್ನು ಸ್ಥಾಪಿಸಿದ್ದನು. ರಾಜಧಾನಿ ಕಲಬುರಗಿಯ ಸೌಂದರ್ಯವನ್ನು ಹೆಚ್ಚಿಸಿದನು. ಅಲ್ಲದೆ ತನ್ನ ಹೆಸರಿನಲ್ಲಿ ಭೀಮಾ ನದಿಯ ದಂಡೆಯ ಬದಿಯಲ್ಲಿ "ಫಿರೋಜಾಬಾದ್" ಎಂಬ ಹೊಸ ನಗರವನ್ನು ಕಟ್ಟಿಸಿದನು. ಇವನ ಕಾಲದಲ್ಲಿ ರಾಜ್ಯಕ್ಕೆ ಬಂದಿದ್ದ ಸೂಫಿಸಂತ ಬಂದೇನವಾಜರಿಗೆ ಹಲವು ಗ್ರಾಮಗಳನ್ನು ಉಂಬಳಿಯಾಗಿ ನೀಡಿದನು. ಬಂದರುಗಳ ವಿಕಾಸಕ್ಕೆ ವಿಶೇಷ ಗಮನವಿತ್ತನು. ಇದರಿಂದ ವಿದೇಶಿ ಪ್ರವಾಸಕ್ಕೆ ಪ್ರೋತ್ಸಾಹ ಸಿಕ್ಕಿತು.

**ಮಹಮದ್ ಗವಾನ್ ( ಸಾ.ಶ. 1463 – 1481)**

ಬಹಮನಿ ರಾಜ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದ ಕೀರ್ತಿ ಮಹಮದ್ ಗವಾನ್‌ನಿಗೆ ಸಲ್ಲುತ್ತದೆ. ಪರ್ಷಿಯನ್ ಮೂಲದವನಾದ ಗವಾನನು 3ನೇ ಮಹಮದ್‌ಷಾ ಸುಲ್ತಾನನ ಮುಖ್ಯಮಂತ್ರಿಯಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದನು.

**ಪ್ರಮುಖ ಬಹಮನಿ ಸುಲ್ತಾನರು**

ಅಲ್ಲಾವುದ್ದೀನ್ ಹಸನ್ ಗಂಗೂ ಬಹಮನ್ ಷಾ, ಫಿರೋಜ್ ಷಾ, ಅಹಮದ್ ಷಾ ಮತ್ತು 3ನೇ ಮಹಮದ್ ಷಾ.

**ಪ್ರಮುಖಾಂಶಗಳು**

- ಮಹಮದ್ ಗವಾನನು ವಿಜಯನಗರ ಸಾಮ್ರಾಜ್ಯದಿಂದ ಹುಬ್ಬಳ್ಳಿ, ಬೆಳಗಾವಿ ಮತ್ತು ಗೋವಾ ಪ್ರದೇಶಗಳನ್ನು ವಶಪಡಿಸಿಕೊಂಡನು.
- ಆಡಳಿತವು ಇಸ್ಲಾಮೀ ಕಾನೂನುಗಳನ್ನು ಆಧರಿಸಿತ್ತು.
- ಕಂದಾಯ ಮತ್ತು ಅಂಚೆ ವ್ಯವಸ್ಥೆಯನ್ನು ಚುರುಕುಗೊಳಿಸಿದನು.
- ಭೂಮಿಯ ಫಲವತ್ತತೆ, ನೀರಾವರಿ ಸೌಲಭ್ಯಗಳನ್ನು ಗಮನಿಸಿ, ಭೂಮಾಪನ ಮಾಡಿ ಕಂದಾಯವನ್ನು ನಿಗದಿ ಮಾಡಿದನು. ಕಂದಾಯವನ್ನು ನಗದು ರೂಪದಲ್ಲಿ ಮಾತ್ರ ಸಂಗ್ರಹಿಸಲಾಗುತ್ತಿತ್ತು.
- ಜನರಿಗೆ ಕಿರುಕುಳ ಕೊಡುವ ತೆರಿಗೆಗಳನ್ನು ರದ್ದುಪಡಿಸಿದನು.
- ಸ್ವತಃ ವಿದ್ವಾಂಸನಾಗಿದ್ದ ಮಹಮದ್ ಗವಾನ್ ಬೀದರ್‌ನಲ್ಲಿ ಮದರಸಾ (ಮಹಾವಿದ್ಯಾಲಯ) ಸ್ಥಾಪಿಸಿದನು. ಇದು ಇಸ್ಲಾಂ ಧರ್ಮ ಮತ್ತು ಕಾನೂನು ಶಿಕ್ಷಣವನ್ನು ಪ್ರೋತ್ಸಾಹಿಸಿತು. ಇಲ್ಲಿ ಖಗೋಳಶಾಸ್ತ್ರ, ಗಣಿತ, ಇತಿಹಾಸ ಮುಂತಾದವುಗಳ ಅಧ್ಯಯನ ಕೂಡ ನಡೆಯುತ್ತಿದ್ದವು. ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ವಿದ್ಯಾರ್ಥಿ ನಿಲಯದ ಸೌಕರ್ಯಗಳಿದ್ದವು. ಮದರಸಾ ಗ್ರಂಥಾಲಯದಲ್ಲಿ ಸುಮಾರು 3,000 ಹಸ್ತ ಪ್ರತಿಗಳಿದ್ದವು.

- ಒಟ್ಟಿನಲ್ಲಿ ಬಹಮನಿ ರಾಜ್ಯದ ಮುನ್ನಡೆಗೆ ಮಹಮದ್ ಗವಾನ್ ಶ್ರೇಷ್ಠ ಕೊಡುಗೆ ನೀಡಿದನು. ಹೀಗಿದ್ದರೂ ಸ್ಥಳೀಯ ಸರದಾರರು ಗವಾನ್‌ನ ಸಾಧನೆಗಳನ್ನು ಕಂಡು ಮತ್ಸರದಿಂದ ಒಳಸಂಚು ನಡೆಸಿ ಕೊಲ್ಲಿಸಿದರು. ಗವಾನನ ಸಮಾಧಿಯ ಮೇಲೆ "ಮುಗ್ಧ ಗವಾನನನ್ನು ಕೊಲೆ ಮಾಡಲಾಯಿತು" ಎಂಬ ಉಲ್ಲೇಖವಿದೆ.

## ಸಾಂಸ್ಕೃತಿಕ ಕೊಡುಗೆಗಳು :

**ಶಿಕ್ಷಣ:** ಬಹಮನಿ ಸುಲ್ತಾನರು ಇಸ್ಲಾಂ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಕುರಾನ್ ಪಠಣವು ಶಿಕ್ಷಣದ ಒಂದು ಭಾಗವಾಗಿತ್ತು. ಇವರ ಕಾಲದಲ್ಲಿ ಕಲಬುರಗಿ, ಬೀದರ್, ಎಲಿಚಪುರ ಮತ್ತು ದೌಲತಾಬಾದ್ ಮುಂತಾದವುಗಳು ಇಸ್ಲಾಮಿ ವಿದ್ಯಾಕೇಂದ್ರಗಳಾಗಿದ್ದವು. ಧಾರ್ಮಿಕ ಶಿಕ್ಷಣವನ್ನು ಮಸೀದಿಗಳಲ್ಲಿ ಮತ್ತು ಮದರಸಾಗಳಲ್ಲಿ ನೀಡುತ್ತಿದ್ದರು. ಬಡವರಿಗಾಗಿ ಮತ್ತು ಅನಾಥರಿಗಾಗಿ ಮದರಸಾಗಳಲ್ಲಿ ಉಚಿತ ಊಟ ಮತ್ತು ವಸತಿ ಸೌಕರ್ಯಗಳನ್ನು ಮತ್ತು ವಿದ್ಯಾರ್ಥಿ ವೇತನವನ್ನು ಕಲ್ಪಿಸಿದರು. ಶಾಲೆಗಳಲ್ಲಿ ಕುರಾನ್, ತರ್ಕಶಾಸ್ತ್ರ ಮತ್ತು ಸೂಫೀ ಪಂಥದ ತತ್ವಗಳನ್ನು ಬೋಧಿಸಲಾಗುತ್ತಿತ್ತು.

**ಸಾಹಿತ್ಯ:** ಬಹಮನಿ ಸುಲ್ತಾನರು ಸಾಹಿತ್ಯದ ಮಹಾಪೋಷಕರಾಗಿ ಕವಿಗಳಿಗೆ, ವಿದ್ವಾಂಸರಿಗೆ, ಬರಹಗಾರರಿಗೆ ರಾಜಾಶ್ರಯವನ್ನು ನೀಡಿದ್ದರು. ಸುಲ್ತಾನರಾದ ಫಿರೋಜ್ ಷಾ, ಎರಡನೇ ಮಹಮದ್ ಷಾ ಮತ್ತು ಮಹಮದ್ ಗವಾನ್ ಬರಹಗಾರರು ಮತ್ತು ಮಂತ್ರಿ ಕವಿಗಳೂ ಆಗಿದ್ದರು. ಇವರ ಕಾಲಾವಧಿಯಲ್ಲಿ ಪರ್ಷಿಯನ್, ಅರೇಬಿಕ್, ಉರ್ದು ಸಾಹಿತ್ಯ ಬೆಳವಣಿಗೆಯಾಯಿತು. ಬಂದೇನವಾಜ್ ಎಂಬ ಖ್ಯಾತ ಸೂಫಿ ಸಂತ ಹಾಗೂ ಗ್ರಂಥಕಾರ ಇದೇ ಕಾಲದವರು. ಇವರು ಮತ್ತು ಇನ್ನಿತರ ವಿದೇಶಿ ವಿದ್ವಾಂಸರು ಬಳಸಿದ ಭಾಷೆ 'ದಖನಿ' ಎಂದು ಪ್ರಸಿದ್ಧವಾಯಿತು. ಮುಂದೆ ಇದೇ ಉರ್ದು ಭಾಷೆಯ ಬೆಳವಣಿಗೆಗೆ ಕಾರಣವಾಯಿತು.

**ವಾಸ್ತುಶಿಲ್ಪ:** ಬಹಮನಿಗಳ ಇತಿಹಾಸವು ವಾಸ್ತುಶಿಲ್ಪಕ್ಕೆ ಹೆಸರುವಾಸಿಯಾಗಿದೆ. ಅವರ ಕಲಬುರಗಿ, ಬೀದರ್ ಮತ್ತು ಇತರ ಸ್ಥಳಗಳಲ್ಲಿನ ಅವರ ಕಟ್ಟಡಗಳು ಹಿಂದೂ–ಮುಸ್ಲಿಂ ಶೈಲಿಯಲ್ಲಿವೆ. ಇದು ದಖನಿ ಶೈಲಿಯೆಂದು ಪರಿಚಿತವಾಗಿದೆ. ಬಹಮನಿಗಳ ಮೊದಲ ರಚನೆಯೆಂದರೆ ಕಲಬುರಗಿಯ ಜಾಮೀ ಮಸೀದಿ. ಇದು ಮಹಮದ್ ಷಾನ ರಚನೆ. ಚಿಕ್ಕ ಚಿಕ್ಕ ಗುಮ್ಮಟಗಳಿಂದ ಕೂಡಿರುವ ಇಲ್ಲಿನ ಸಭಾಂಗಣ ಆಕರ್ಷಕವಾಗಿದೆ. ಕಲಬುರಗಿಯ ಬಳಿ ಸುಲ್ತಾನರ ಸಮಾಧಿಗಳಿವೆ. ಅವು ಬೃಹತ್ ಗಾತ್ರದ ಗುಮ್ಮಟಗಳುಳ್ಳ ರಚನೆಗಳು. ಬಂದೇನವಾಜರ ಸಮಾಧಿ ಕಲಬುರಗಿಯ ಇನ್ನೊಂದು ಪ್ರಮುಖ ರಚನೆ.

ಬೀದರ್‌ನ ಸೋಲಾಖಾಂಬ್ ಮಸೀದಿ ಮತ್ತು ಕೋಟೆಯೊಳಗಿನ ಸುಂದರ ಅರಮನೆಗಳು ಪ್ರಸಿದ್ಧವಾಗಿವೆ. ಈ ಕಟ್ಟಡಗಳು ಅಲಂಕಾರ, ಕೆತ್ತನೆ, ಮರದ ಕುಸುರಿ ಕೆಲಸಗಳನ್ನು ಹೊಂದಿವೆ. ಬೀದರ್ ಬಳಿಯ ಅಷ್ಟೂರಿನ ಹನ್ನೆರಡು ಸಮಾಧಿಗಳು ಗಮನಾರ್ಹವಾಗಿವೆ.

ಬಹಮನಿ ಕಾಲದ ಕಟ್ಟಡಗಳಲ್ಲಿ ಅತ್ಯಂತ ಪ್ರಮುಖ ರಚನೆಯೆಂದರೆ ಮಹಮದ್ ಗವಾನನು ಕಟ್ಟಿಸಿದ ಮದರಸ. ಇದು 242 ಅಡಿ ಉದ್ದ 222 ಅಡಿ ಅಗಲವಿದ್ದು 56 ಅಡಿ ಎತ್ತರವಾಗಿದ್ದು 3 ಅಂತಸ್ತಿನ (ಮಾಳಿಗೆಯ) ರಚನೆಯಾಗಿದೆ. ಐದು ಶತಮಾನಕ್ಕೂ ಹಿಂದಿನ ಮದರಸ ಕಟ್ಟಡ ತನ್ನ ಘನತೆಯನ್ನು ಸಾರಿ ಹೇಳುವಂತಿದೆ.



ಕೋಟೆ, ಬೀದರ್





ಜಾಮೀ ಮಸೀದಿ, ಕಲಬುರಗಿ



ಬಂದೇನವಾಜರ ಸಮಾಧಿ, ಕಲಬುರಗಿ



ಗವಾನನ ಮದರಸಾ, ಬೀದರ್

## ಷಾಹಿ ಮನೆತನಗಳು

ಮಹಮದ್ ಗವಾನ್‌ನ ನಂತರ ಬಹಮನಿ ರಾಜ್ಯ ಹೆಚ್ಚು ಕಾಲ ಉಳಿಯಲಿಲ್ಲ. 3ನೇ ಮಹಮದ್ ನಂತರ ಅಧಿಕಾರಕ್ಕೆ ಬಂದ ಸುಲ್ತಾನರು ತೀರ ಅಸಮರ್ಥರಾಗಿದ್ದರು. ಈತನ ನಂತರ ಉತ್ತರಾಧಿಕಾರಿಯಾದ ಮಹಮದ್ ಬಾಲಕನಾಗಿದ್ದು, ರಾಜ್ಯದ ಐಕ್ಯತೆಯನ್ನು ಕಾಪಾಡುವಲ್ಲಿ ವಿಫಲನಾದನು. ಈ ವಂಶದ ಕೊನೆಯ ಸುಲ್ತಾನ ಕಾಲಿಮಲ್ಲಾ ಷಾ. ಇವನ ಮರಣದ ನಂತರ ಬಹಮನಿ ರಾಜ್ಯ ಐದು ಷಾಹಿ ರಾಜ್ಯಗಳಾಗಿ ಒಡೆದು ಹೋಯಿತು.

1. ವಿಜಯಪುರ(ಬಿಜಾಪುರ)ದ ಆದಿಲ್ ಷಾಹಿ.
2. ಬೀದರ್‌ನ ಬರೀದ್ ಷಾಹಿ.
3. ಗೋಲ್ಕಂಡದ ಕುತುಬ್ ಷಾಹಿ.
4. ಅಹಮದ್ ನಗರದ ನಿಜಾಂ ಷಾಹಿ.
5. ಬೀರಾರನ ಇಮಾದ್ ಷಾಹಿ.

## ವಿಜಯಪುರ(ಬಿಜಾಪುರ)ದ ಆದಿಲ್ ಷಾಹಿಗಳು (ಸಾ.ಶ.1489–1686).

| | |
|---|---|
| ಯೂಸೂಫ್ ಆದಿಲ್ ಷಾ | (ಸಾ.ಶ. 1489–1510) |
| ಇಸ್ಮಾಯಿಲ್ ಆದಿಲಾ ಷಾ | (ಸಾ.ಶ. 1510–1534) |
| ಒಂದನೇ ಇಬ್ರಾಹಿಂ ಆದಿಲ್ ಷಾ | (ಸಾ.ಶ. 1535–1558) |
| ಒಂದನೇ ಅಲಿ ಆದಿಲ್ ಷಾ | (ಸಾ.ಶ. 1558–1580) |
| ಎರಡನೇ ಇಬ್ರಾಹಿಂ ಆದಿಲ್ ಷಾ | (ಸಾ.ಶ. 1580–1626) |
| ಮಹಮದ್ ಆದಿಲ್ ಷಾ | (ಸಾ.ಶ. 1626–1656) |
| ಎರಡನೇ ಅಲಿ ಆದಿಲ್ ಷಾ | (ಸಾ.ಶ. 1656–1672) |
| ಸಿಕಂದರ್ ಆದಿಲ್ ಷಾ | (ಸಾ.ಶ. 1672–1686) |

ಯೂಸೂಫ್ ಆದಿಲ್ ಷಾನು ವಿಜಯಪುರದ ಆದಿಲ್‌ಷಾಹಿ ಮನೆತನದ ಸ್ಥಾಪಕನಾಗಿದ್ದನು. ಈತನು ಒಳ್ಳೆಯ ಆಡಳಿತಗಾರ ಮತ್ತು ಧರ್ಮ ಸಹಿಷ್ಣುವಾಗಿದ್ದನು. ಇವನ ನಂತರ ಎರಡನೇ ಇಬ್ರಾಹಿಂ ಆದಿಲ್ ಷಾ ಅಧಿಕಾರಕ್ಕೆ ಬಂದನು.

## ಎರಡನೇ ಇಬ್ರಾಹಿಂ ಆದಿಲ್ ಷಾ (ಸಾ.ಶ. 1580–1626).

ಎರಡನೇ ಇಬ್ರಾಹಿಂ ವಿಜಯಪುರದ ಸುಲ್ತಾನರಲ್ಲಿ ಶ್ರೇಷ್ಠನಾದವನು. ಈತನ ಕಾಲದಲ್ಲಿ ರಾಜ್ಯವು ವಿಸ್ತಾರಗೊಂಡಿತು. ಅಲ್ಲದೆ ಅದು ಸಮೃದ್ಧಿಯನ್ನು ಕಂಡಿತು. ಈತನಿಗೆ 'ಜಗದ್ಗುರು ಬಾದಾಷಾ' ಎಂಬ ಬಿರುದು ಇತ್ತು. ಇಬ್ರಾಹಿಂ ಧರ್ಮ ಸಹಿಷ್ಣು ಸುಲ್ತಾನನಾಗಿದ್ದನು. ಅನೇಕ ಹಿಂದೂ ವಿದ್ವಾಂಸರು, ಕವಿಗಳು ಮತ್ತು ಸಂಗೀತಗಾರರಿಗೆ ಆಶ್ರಯ ನೀಡಿದ್ದನು. ತನ್ನ ಅರಮನೆ ಕೋಟೆಯಲ್ಲಿನ ದತ್ತ ದೇವಾಲಯಗಳನ್ನು ದುರಸ್ತಿ ಮಾಡಿಸಿ ಪೂಜೆಗೆ ವ್ಯವಸ್ಥೆ ಮಾಡಿದ್ದನು.

ಹಿಂದೂ–ಮುಸ್ಲಿಂ ಸಾಂಸ್ಕೃತಿಕ ಏಕತೆಗಾಗಿ ಇಬ್ರಾಹಿಂ ಶ್ರಮಿಸಿದನು. ಉರ್ದು ಭಾಷೆಯಲ್ಲಿ "ಕಿತಾಬ್–ಇ– ನವರಸ್" ಎಂಬ ಪುಸ್ತಕವನ್ನು ಬರೆದು ಸಂಗೀತವನ್ನು ಮುಸಲ್ಮಾನರಲ್ಲಿ ಜನಪ್ರಿಯಗೊಳಿಸಲು ಯತ್ನಿಸಿದನು. ಈ ಕೃತಿ ಹಿಂದೂ ದೇವತೆಗಳಾದ ಸರಸ್ವತಿ, ಗಣಪತಿ, ಭೈರವ ಮುಂತಾದವರ ಸ್ತುತಿಯಿಂದ ಆರಂಭವಾಗುತ್ತದೆ. ಇವನು ಸ್ವತಃ ಒಳ್ಳೆಯ ಸಂಗೀತಗಾರನಾಗಿದ್ದನು. ಭವ್ಯ ವಾಸ್ತುಶಿಲ್ಪವಾದ 'ಇಬ್ರಾಹಿಂ ರೋಜಾ' ಇವನದೇ ರಚನೆಯಾಗಿದೆ.



ಇಬ್ರಾಹಿಂ ರೋಜಾ, ವಿಜಯಪುರ

## ಬೀದರ್ ಬರೀದ್ ಷಾಹಿ (ಸಾ.ಶ.1489–1619)

ಬಹಮನಿ ರಾಜ್ಯ ಹರಿದು ಹಂಚಿ ಹೋದಾಗ ದಖನ್ನಿನ ಬೀದರ್ ಮತ್ತು ಸುತ್ತ ಮುತ್ತಲಿನ ಪ್ರದೇಶಗಳನ್ನು ಆಳಿದವರು ಬರೀದ್ ಷಾಹಿ ಮನೆತನದವರು. ಖಾಸಿಂಬರೀದ್ ಎಂಬುವನು ಈ ಮನೆತನದ ಸ್ಥಾಪಕನಾಗಿದ್ದನು. ಈತನ ನಂತರ ಬೀದರನ್ನು ಆಳ್ವಿಕೆ ಮಾಡಿದ ಇಬ್ರಾಹಿಮ್ ಮತ್ತು ಆತನ ತಮ್ಮ ಖಾಸೀಮರು ಅಸಮರ್ಥರಾಗಿದ್ದರು. ಇವರ ಕಚ್ಚಾಟದಿಂದ ಬರೀದ್ ಷಾಹಿ ಮನೆತನವು ಅವನತಿಯತ್ತ ಸಾಗುವಂತಾಯಿತು. ಇಂತಹ ಸಮಯದಲ್ಲಿ ವಿಜಯಪುರದ ಇಬ್ರಾಹಿಮ್ ಆದಿಲ್ ಷಾ ಬೀದರನ್ನು ವಶಪಡಿಸಿಕೊಂಡನು. ಹೀಗೆ ಬರೀದ್ ಷಾಹಿ ರಾಜ್ಯ ಇಬ್ರಾಹಿಮ್‌ನ ವಿಜಯಪುರ ರಾಜ್ಯದಲ್ಲಿ ವಿಲೀನವಾಯಿತು.

## ಗೋಲ್ಕಂಡದ ಕುತುಬ್ ಷಾಹಿ (ಸಾ.ಶ.1512–1687)

**ಖುಲಿಕುತುಬ್ ಷಾ :** ಈತನು ಸ್ವತಂತ್ರ ಗೋಲ್ಕಂಡ ರಾಜ್ಯದ ಸ್ಥಾಪಕನಾಗಿದ್ದಾನೆ. ಇವನು ಸುದೀರ್ಘಕಾಲ ಉತ್ತಮ ಆಳ್ವಿಕೆಯನ್ನು ನಡೆಸಿ ಸಾ.ಶ. 1543 ರಲ್ಲಿ ತನ್ನೊಬ್ಬ ಮಗನಿಂದಲೇ ಕೊಲೆಯಾದನು.

### ಇಬ್ರಾಹಿಂ

ಈತನು ಹಿಂದೂ ಧರ್ಮದ ಬಗ್ಗೆ ಅತ್ಯಂತ ಸಹಾನುಭೂತಿಯುಳ್ಳವನಾಗಿದ್ದನು. ಈತನ ಆಸ್ಥಾನದಲ್ಲಿ ಹಿಂದೂಗಳೇ ಅತಿ ಹೆಚ್ಚಿನ ಸಂಖ್ಯೆಯ ಆಡಳಿತಾಧಿಕಾರಿಗಳಾಗಿದ್ದರು. ಈತನು ತನ್ನ

ಆಳ್ವಿಕೆಯಲ್ಲಿ ರಾಜಧಾನಿಯಾದ ಗೋಲ್ಕಂಡವನ್ನು ಒಂದು ಸುಂದರ ನಗರವನ್ನಾಗಿ ನಿರ್ಮಿಸಿದನು. ಸಾ.ಶ. 1589 ರ ವೇಳೆಯಲ್ಲಿ ಇಬ್ರಾಹಿಂನು ತನ್ನ ರಾಜಧಾನಿಯನ್ನು ಗೋಲ್ಕಂಡದಿಂದ ಹೈದ್ರಾಬಾದ್‌ಗೆ ವರ್ಗಾಯಿಸಿದನು. ಇಬ್ರಾಹಿಂನ ನಂತರ ಬಂದ ಅಬ್ದುಲ್ಲಾ ಕುತುಬ್ ಷಾ, ಅಬುಲ್ ಹಸನ್ ಮುಂತಾದ ಸುಲ್ತಾನರು ಅಸಮರ್ಥರಾಗಿದ್ದರಿಂದ ಗೋಲ್ಕಂಡವು ಮೊಗಲ್‌ರಿಗೆ ಶರಣಾಯಿತು.

## ಅಹಮದ್ ನಗರದ ನಿಜಾಮ್ ಷಾಹಿ (ಸಾ.ಶ.1490–1636)

ಸಾ.ಶ. 1490ರಲ್ಲಿ ಜುನ್ನಾರಿನ ಪ್ರಾಂತಾಧಿಕಾರಿಯಾಗಿದ್ದ ನಿಜಾಮ್ ಷಾಹಿ ರಾಜವಂಶದ ಮಲ್ಲಿಕ್ ಅಹಮದನು ಸ್ವತಂತ್ರವಾದ ಅಹಮದ್ ನಗರ ರಾಜ್ಯವನ್ನು ಸ್ಥಾಪಿಸಿದನು. ಈತನು ದೌಲತಾಬಾದನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ರಾಜ್ಯವನ್ನು ವಿಸ್ತರಿಸಿದನು. ಈತನ ನಂತರ ಬುರ್ಹಾನ, ಹುಸೇನ್ ನಿಜಾಮ್ ಷಾ ಮುರ್ತುಜಾ ಹೆಸರಿಗೆ ಮಾತ್ರ ಸುಲ್ತಾನರಾಗಿದ್ದರು. ಚಾಂದ್‌ಬೀಬಿಯ ಮರಣದೊಂದಿಗೆ ಅಹಮದ್ ನಗರ ಪತನವಾಯಿತು. ಕೊನೆಗೆ ಮೊಗಲ್ ದೊರೆ ಷಹಜಹಾನನ ಕಾಲದಲ್ಲಿ ಅಹಮದ್ ನಗರ ಸಂಪೂರ್ಣವಾಗಿ ಮೊಗಲ್ ಸಾಮ್ರಾಜ್ಯದಲ್ಲಿ ಸಾ.ಶ.1637ರಲ್ಲಿ ವಿಲೀನವಾಯಿತು.



## ಬೀರಾರ್‌ನ ಇಮಾದ್ ಷಾಹಿ (ಸಾ.ಶ. 1490–1580)

ಬಹಮನಿ ಸಾಮ್ರಾಜ್ಯದ ಪತನಾ ನಂತರ ಅಸ್ತಿತ್ವಕ್ಕೆ ಬಂದ ಐದು ದಕ್ಷಿಣ ಸುಲ್ತಾನ್ ರಾಜ್ಯಗಳಲ್ಲಿ ಬೀರಾರ್‌ನ ಇಮಾದ್ ಷಾಹಿ ಮನೆತನವೂ ಒಂದಾಗಿದೆ. ಇದು ಬೀದರ್‌ನ ಉತ್ತರದಲ್ಲಿ ವಾರ್ದಾ, ತಪತಿ, ಪೆನ್‌ಗಂಗಾ ಹಾಗೂ ವೈನ್ ಗಂಗಾ ನದಿಗಳ ನಡುವಿನ ಪ್ರದೇಶವಾಗಿದೆ. ಸಾ.ಶ. 1490ರಲ್ಲಿ ಫತಾ–ಉಲ್ಲಾ ಈ ಮನೆತನವನ್ನು ಸ್ಥಾಪಿಸಿದನು. ಇವರ ರಾಜಧಾನಿ ಎಲಿಚಪುರ. ಇಮಾದ್–ಉಲ್–ಮುಲ್ಕ್ ಎಂಬುದು ಫತಾ ಉಲ್ಲಾನ ಬಿರುದಾಗಿದೆ. ಸಾ.ಶ. 1504 ರಲ್ಲಿ ಈತನ ಮರಣಾ ನಂತರ ಇವನ ಮಗ ಅಲ್ಲಾ–ಉದ್–ದಿನ್ ಇಮಾದ್ ಷಾ ಅಧಿಕಾರಕ್ಕೆ ಬಂದನು. ಈತನು ಸಮರ್ಥ ಸುಲ್ತಾನನಾಗಿರಲಿಲ್ಲ. ನಂತರ ಇವನ ಮಗ ದರಿಯಾ ಇಮಾದ್ ಷಾ ಅಧಿಕಾರಕ್ಕೆ ಬಂದನು. ಈತನ ಅವಧಿಯಲ್ಲಿಯೂ ನೆರೆ ರಾಜ್ಯಗಳೊಂದಿಗೆ ಬೀರಾರ್ ಕದನ ನಡೆಸುತ್ತಲೇ ಬಂದಿತು.

ದರಿಯಾ ಇಮಾದ್‌ಷಾನ ಮರಣಾ ನಂತರ ಆತನ ಮಗನಾದ ಬಾಲಕ ಬುರ್‌ಹಾನ್ ಷಾ ಅಧಿಕಾರಕ್ಕೆ ಬಂದನು. ಇವನ ಕಾಲದಲ್ಲಿ ಅಧಿಕಾರವು ವಜೀರನಾದ ತುಫಾಲ್‌ಖಾನನ ಕೈ ಸೇರಿತು. ಮುಂದೆ ಬೀರಾರ್ ರಾಜ್ಯವು ವಿಜಯಪುರ ಸುಲ್ತಾನರ ವಶವಾಗುವ ಮೂಲಕ ಅಂತ್ಯಗೊಂಡಿತು.

## ಆದಿಲ್ ಷಾಹಿಗಳ ಕೊಡುಗೆಗಳು :

ವಿಜಯಪುರದ ಆದಿಲ್ ಷಾಹಿಗಳು ತಮ್ಮ ಸುಮಾರು 200 ವರ್ಷಗಳ ಆಳ್ವಿಕೆಯಲ್ಲಿ ಶಿಕ್ಷಣ, ಸಾಹಿತ್ಯ, ಸಂಗೀತ, ಚಿತ್ರಕಲೆ ಹಾಗೂ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ಅಮೂಲ್ಯ ಕಾಣಿಕೆಗಳನ್ನು ನೀಡಿದ್ದಾರೆ.

**ಶಿಕ್ಷಣ :** ಆದಿಲ್ ಷಾಹಿಗಳು ಶಿಕ್ಷಣ ಪ್ರೇಮಿಗಳು ಮತ್ತು ಪೋಷಕರೂ ಆಗಿದ್ದರು. ಇವರ ಶಿಕ್ಷಣ ನೀತಿಯು ಇಸ್ಲಾಂ ಸಂಸ್ಕೃತಿಯನ್ನು ಬೆಳೆಸುವುದಾಗಿತ್ತು. ಮುಕ್ತಬ್ (ಮಸೀದಿ) ಮದರಸಾ (ಕಾಲೇಜು) ಶಿಕ್ಷಣದ ಕೇಂದ್ರಗಳಾಗಿದ್ದವು. ಇಲ್ಲಿ ಜ್ಞಾನ, ಧರ್ಮ, ಕಾನೂನು. ಕಾವ್ಯ, ಅಲಂಕಾರಶಾಸ್ತ್ರಗಳನ್ನು ಬೋಧಿಸುತ್ತಿದ್ದರು. ಈ ಶಿಕ್ಷಣ ಸಂಸ್ಥೆಗಳು ರಾಜಾಶ್ರಯ ಪಡೆದಿದ್ದವು.

**ಸಾಹಿತ್ಯ :** ಆದಿಲ್ ಶಾಹಿಗಳು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯು ಮಹತ್ತರವಾಗಿದೆ. ಕೆಲವರು ಸ್ವತಃ ಕವಿಗಳಾಗಿದ್ದರಿಂದ ಸಾಹಿತ್ಯ ಕ್ಷೇತ್ರವು ಹೆಚ್ಚಿನ ಶ್ರೀಮಂತಿಕೆಯನ್ನು ಪಡೆಯಿತು. ಪರ್ಷಿಯನ್, ಅರೇಬಿಕ್, ಉರ್ದು, ಕನ್ನಡ ಭಾಷೆಗಳಲ್ಲಿ ಅನೇಕ ಕೃತಿಗಳು ರಚನೆಯಾದವು.

| | |
|---|---|
| **ಪರ್ಷಿಯನ್ ಕವಿ :** | **ಫೆರಿಸ್ತಾ: "ತಾರೀಖ್– ಇ–ಫೆರಿಸ್ತಾ" ಮತ್ತು "ಗುಲ್‌ಶನ್ –ಎ–ಇಬ್ರಾಹಿಂ"** |
| **ಉರ್ದು ಕವಿಗಳು :** | **ಅಬ್ದುಲ್‌ನ "ಇಬ್ರಾಹಿಂ ನಾಮಾ"** |
| **ಮುಲ್ಲಾ ನಸ್ರತಿ :** | **"ಅಲಿನಾಮ"** |
| **ಕನ್ನಡ ಕವಿ :** | **ತೊರವೆಯ ನರಹರಿ ಕವಿ: " ತೊರವೆ ರಾಮಾಯಣ"** |

**ಸಂಗೀತ :** ಯೂಸೂಫ್ ಆದಿಲ್‌ಷಾ ಮತ್ತು ಎರಡನೇ ಇಬ್ರಾಹಿಂ ಆದಿಲ್‌ಷಾರು ಮಹಾನ್ ಸಂಗೀತ ವಿದ್ವಾಂಸರಾಗಿದ್ದರು. ಇಬ್ರಾಹಿಂ ಆದಿಲ್‌ಷಾನ **"ಕಿತಾಬ್–ಇ–ನವರಸ"** ಕೃತಿಯು ಸಂಗೀತ ಕ್ಷೇತ್ರದ ಶ್ರೇಷ್ಠ ಕೃತಿಯಾಗಿದೆ. ಈತನು ಸಂಗೀತ ಶಾಲೆಯನ್ನು ಸ್ಥಾಪಿಸಿದನು. ರಾಜ ವಂಶದ ಮತ್ತು ಶ್ರೀಮಂತವರ್ಗದ ಸ್ತ್ರೀಯರು ಸಂಗೀತದಲ್ಲಿ ಆಸಕ್ತರಾಗಿದ್ದರು.

**ವರ್ಣ ಚಿತ್ರಕಲೆ :** ಎರಡನೆಯ ಇಬ್ರಾಹಿಂನು ಚಿತ್ರಕಲಾವಿದನೂ ಆಗಿದ್ದನು. ಈತನ ಆಸ್ಥಾನವು ಅನೇಕ ಪರ್ಷಿಯನ್ ಕಲಾವಿದರನ್ನು ಒಳಗೊಂಡಿತ್ತು. ಇವರ ಅರಮನೆ, ಮಸೀದಿಗಳ ಗೋಡೆ, ಮೇಲ್ಛಾವಣಿಗಳ ಮೇಲೆ ಹೂ, ಗಿಡ, ಬಳ್ಳಿ ಮುಂತಾದ ನಿಸರ್ಗದ ಚಿತ್ರಗಳನ್ನು ಸುಂದರವಾಗಿ ಚಿತ್ರಿಸಲಾಗಿದೆ. ಈ ವರ್ಣಚಿತ್ರಗಳು ಅಂದಿನ ಜನರ ಆಸೆ, ಅಭಿರುಚಿ, ಸಂಪ್ರದಾಯಗಳನ್ನು ಅರಿಯಲು ಸಹಾಯಕವಾಗಿವೆ.


**ಕಲೆ ಮತ್ತು ವಾಸ್ತುಶಿಲ್ಪ :** ಕರ್ನಾಟಕದ ವಾಸ್ತುಶಿಲ್ಪದ ಇತಿಹಾಸದಲ್ಲಿ ವಿಜಯಪುರದ ಆದಿಲ್‌ಷಾಹಿಗಳ ನಿರ್ಮಾಣಗಳಿಗೆ ಮಹತ್ವದ ಸ್ಥಾನವಿದೆ. ಅವರ ನಿರ್ಮಾಣಗಳೆಂದರೆ ಕೋಟೆ, ಅರಮನೆ, ಮಸೀದಿ ಮತ್ತು ಸಮಾಧಿಗಳು. ಅವರು ನಿರ್ಮಿಸಿದ ಸ್ಮಾರಕಗಳು ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿವೆ.

**ಎ) ಕೋಟೆ :** ವಿಜಯಪುರದ ಕೋಟೆ ಭಾರೀ ರಚನೆಯಾಗಿದ್ದು 96 ಕೊತ್ತಲ(ಕೋಟೆಯ ಪ್ರಾಕಾರದ ಮೇಲೆ ಕಟ್ಟುವ ಗುಮ್ಮಟ) ಹಾಗೂ 6 ಮಹಾದ್ವಾರಗಳನ್ನು ಹೊಂದಿದೆ.

**ಬ) ಅರಮನೆಗಳು :**

**ಗಗನ್ ಮಹಲ್ :** ಸಾ.ಶ. 1620ರಲ್ಲಿ ಇಬ್ರಾಹಿಂ ಆದಿಲ್‌ಷಾ ಕಟ್ಟಿಸಿದನು. ಇದು 3 ಅಂತಸ್ತುಗಳ ಗೋಪುರವನ್ನು ಒಳಗೊಂಡಿದೆ.

**ಮೆಹತರ್ ಮಹಲ್ :** ಇದು ಕೂಡ 3 ಅಂತಸ್ತಿನ ಅರಮನೆಯಾಗಿದೆ. ಇದನ್ನು ಸಹ ಎರಡನೇ ಇಬ್ರಾಹಿಂ ಆದಿಲ್ ಷಾ ನಿರ್ಮಿಸಿದನು. ಇದು ಅತಿ ಸೂಕ್ಷ್ಮ ಅಲಂಕಾರದಿಂದ ಪ್ರಖ್ಯಾತಿ ಹೊಂದಿದೆ. ಇದರ ಜೊತೆಗೆ ಅಸಾರ್ ಮಹಲ್‌ನಲ್ಲಿ ವರ್ಣರಂಜಿತ ಚಿತ್ರಗಳಿರುವ ಕೊಠಡಿಗಳಿವೆ.



ಅಸಾರ್‌ಮಹಲ್, ವಿಜಯಪುರ



ಗಗನಮಹಲ್, ವಿಜಯಪುರ




**ಕ) ಮಸೀದಿಗಳು :**

**ಜಾಮೀ ಮಸೀದಿ:** ಇದನ್ನು ಅಲಿ ಆದಿಲ್‌ಷಾನು ನಿರ್ಮಾಣ ಮಾಡಿದನು. ಇದು ಭವ್ಯವಾದ ಪ್ರಾರ್ಥನಾ ಭವನಕ್ಕೆ ಹೆಸರುವಾಸಿಯಾಗಿದೆ. ಈ ಭವ್ಯ ಕಟ್ಟಡವು ಅಲಂಕಾರವಿಲ್ಲದೆ ಬಹಳ ಸರಳತೆಯಿಂದ ಕೂಡಿದೆ. ಇದು ಕಲಾ ಸ್ಮಾರಕಗಳಲ್ಲಿ ತನ್ನ ನೂತನ ಶೈಲಿಯನ್ನು ಹೊಂದಿದೆ.

**ಇಬ್ರಾಹಿಂ ರೋಜಾ :** ಇದನ್ನು ವಿಜಯಪುರದಲ್ಲಿ ಎರಡನೇ ಇಬ್ರಾಹಿಂ ಆದಿಲ್‌ಷಾಹ ತನ್ನ ಪತ್ನಿ ತಾಜ್‌ಬೇಗಂಳ ನೆನಪಿಗಾಗಿ ನಿರ್ಮಿಸಿದನು. ಇದರಲ್ಲಿ ಇಬ್ರಾಹಿಂ ಮತ್ತು ಆತನ ಕುಟುಂಬ ಸದಸ್ಯರ ಸಮಾಧಿಗಳಿವೆ. ಇದು ಭಾರತದಲ್ಲಿರುವ ಏಕೈಕ ರೋಜಾ ಆಗಿರುತ್ತದೆ. ಇದನ್ನು "ದಕ್ಷಿಣ ಭಾರತದ ತಾಜ್‌ಮಹಲ್" ಎಂದು ವರ್ಣಿಸಲಾಗಿದೆ.

ಒಂದು ಎತ್ತರವಾದ ಕಟ್ಟೆಯ ಮೇಲೆ ಗೋರಿ ಮತ್ತು ಮಸೀದಿಯನ್ನು ಕಟ್ಟಿದ್ದು, ಸುತ್ತಲೂ ಉದ್ಯಾನವನ ಹಾಗೂ ಆವರಣ ಗೋಡೆಯನ್ನು ಒಳಗೊಂಡಿರುವುದಕ್ಕೆ ರೋಜಾ ಎಂದು ಕರೆಯುತ್ತಾರೆ.

**ಗೋಲಗುಮ್ಮಟ :** ರೋಜಾಕ್ಕೂ ಮೀರಿದ ಕಟ್ಟಡವನ್ನು ರಚಿಸಬೇಕೆಂದು ಮಹಮದ್‌ನು ವಿಜಯಪುರದಲ್ಲಿ ಗೋಲಗುಮ್ಮಟ ಎಂಬ ಸಮಾಧಿ ಮಂದಿರವನ್ನು ಸಾ.ಶ. 1656ರಲ್ಲಿ ನಿರ್ಮಿಸಿದನು. ಇದರ ಕೇಂದ್ರದಲ್ಲಿ ವಿಶಾಲವಾದ ಗುಮ್ಮಟವಿದೆ. ಗುಮ್ಮಟದ ಒಳಭಾಗದಲ್ಲಿ 'ಪಿಸುಗುಟ್ಟುವ' ಮೊಗಸಾಲೆ ಇದೆ. ಇದು ಅಂದಿನ ತಾಂತ್ರಿಕ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಗೋಲಗುಮ್ಮಟವು ಜಗತ್ತಿನ ಎರಡನೆಯ ದೊಡ್ಡ ಗುಮ್ಮಟವಾದರೆ, ಭಾರತದ ಅತಿ ದೊಡ್ಡ ಗುಮ್ಮಟವಾಗಿದೆ.



ಗೋಲಗುಮ್ಮಟ, ವಿಜಯಪುರ



ಮಾಲಿಕ್–ಇ–ಮೈದಾನ್ ಫಿರಂಗಿ, ವಿಜಯಪುರ



ಜುಮ್ಮಾ ಮಸೀದಿ, ವಿಜಯಪುರ

**ಇತರ ಪ್ರಮುಖ ಸ್ಮಾರಕಗಳು :** ಬಾರಾ ಕಮಾನ್, ಬಡೇ ಕಮಾನ್, ಆನಂದಮಹಲ್ ಉಪ್ಲಿ ಬುರುಜು, ತಾಜ್‌ಬಾವ್ಡಿ, ಚಾಂದ ಬಾವ್ಡಿ ಮುಂತಾದವು ಇತರ ಪ್ರಮುಖ ಸ್ಮಾರಕಗಳಾಗಿವೆ.

## ಚಟುವಟಿಕೆಗಳು.

1 ಬಹಮನ್ ಷಾಹಿ ಮತ್ತು ಆದಿಲ್ ಷಾಹಿಗಳ ವಾಸ್ತುಶಿಲ್ಪಗಳ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ ಆಲ್ಬಂ ತಯಾರಿಸಿ.

2 ಭಾರತದಲ್ಲಿರುವ ಹಿಂದೂ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಸಂಸ್ಕೃತಿಯ ಕುರುಹುಗಳಾದ ದೇವಸ್ಥಾನಗಳು, ಚರ್ಚುಗಳು ಮತ್ತು ಮಸೀದಿಗಳು ಹಾಗೂ ಇತರ ಸ್ಮಾರಕಗಳ ಚಿತ್ರಗಳನ್ನು ಸಂಗ್ರಹಿಸಿ ಒಂದು ಆಲ್ಬಂ ತಯಾರಿಸಿ.

## ಕಾಲ ಗಣನೆ (ಸಾ.ಶ.)

- ಬಹಮನಿ ರಾಜ್ಯದ ಆಳ್ವಿಕೆಯ ಕಾಲ : 1347 ರಿಂದ 1527
- ಬೀದರ್‌ನಲ್ಲಿ ಮದರಸಾ ಸ್ಥಾಪನೆ : 1461
- ಆದಿಲ್‌ಷಾಹಿಗಳ ಆಳ್ವಿಕೆಯ ಕಾಲ : 1489 ರಿಂದ 1672
- ಇಬ್ರಾಹಿಂ ರೋಜಾ ರಚನೆ : 1626
- ಗೋಲಗುಮ್ಮಟದ ರಚನೆ : 1656



## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಬಹಮನಿ ಸಾಮ್ರಾಜ್ಯವು__________ ರಲ್ಲಿ ಸ್ಥಾಪನೆಯಾಯಿತು.
2. ಕಲಬುರಗಿ__________ ಸುಲ್ತಾನರ ರಾಜಧಾನಿಯಾಗಿತ್ತು.
3. ಫಿರೋಜ್ ಷಾ ಸುಲ್ತಾನನು ಭೀಮಾ ನದಿಯ ದಂಡೆಯ ಮೇಲೆ ________ ನಗರವನ್ನು ನಿರ್ಮಿಸಿದನು.
4. ಮಹಮದ್ ಗವಾನನು__________ ಅಲ್ಲಿ ಮದರಸವನ್ನು ಕಟ್ಟಿಸಿದನು.
5. ಬರೀದ್ ಷಾಹಿ ಮನೆತನದ ಸ್ಥಾಪಕ__________
6. ಗೋಲ್ಕಂಡದ ಕುತುಬ್ ಷಾಹಿ ರಾಜ್ಯದ ಸ್ಥಾಪಕ__________
7. ಇಮಾದ್ ಷಾಹಿ ಮನೆತನದ ಸ್ಥಾಪಕ__________

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಬಹಮನಿ ಮನೆತನದ ಸ್ಥಾಪಕನು ಯಾರು?
2. ಮಹಮದ್ ಗವಾನ್ ಯಾರು?
3. ಸೋಲಾಖಾಂಬ್ ಮಸೀದಿ ಎಲ್ಲಿದೆ?

4. ಆದಿಲ್‌ಷಾಹಿ ಸುಲ್ತಾನರಲ್ಲಿ ಗಣ್ಯನು ಯಾರು?
5. ದಕ್ಷಿಣ ಭಾರತದ ತಾಜ್‌ಮಹಲ್ ಎಂದು ಯಾವ ಸ್ಮಾರಕವನ್ನು ಕರೆಯುತ್ತಾರೆ?
6. ಗೋಲಗುಮ್ಮಟ ಏಕೆ ಪ್ರಸಿದ್ಧವಾಗಿದೆ?
7. ಜಗದ್ಗುರು ಬಾದಾಷಾ ಎಂಬ ಬಿರುದು ಯಾರಿಗಿತ್ತು?

**III ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಮಹಮದ್ ಗವಾನನ ಸಾಧನೆಗಳನ್ನು ತಿಳಿಸಿರಿ.
2. ಐದು ಷಾಹಿ ಮನೆತನಗಳನ್ನು ಹೆಸರಿಸಿರಿ.
3. ಎರಡನೇ ಇಬ್ರಾಹಿಂ ಆದಿಲ್ ಷಾ ಧರ್ಮ ಸಹಿಷ್ಣು ಸುಲ್ತಾನನಾಗಿದ್ದನು ಎಂಬುದನ್ನು ಚರ್ಚಿಸಿ.

**IV ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| 1. ಆದಿಲ್ ಷಾಹಿ | ಅ) ಅಹಮದ್‌ನಗರ |
| 2. ಕುತಬ್ ಷಾಹಿ | ಆ) ಬೀರಾರ್ |
| 3. ನಿಜಾಮ್ ಷಾಹಿ | ಇ) ವಿಜಯಪುರ |
| 4. ಇಮಾದ್ ಷಾಹಿ | ಈ) ಬೀದರ್ |
| 5. ಬರೀದ್ ಷಾಹಿ | ಉ) ಗೋಲ್ಕಂಡ |

★ ★ ★

| ಪಾಠ 3 | ಭಕ್ತಿ ಪಂಥ ಹಾಗೂ ಸೂಫಿ ಪರಂಪರೆ |
| --- | --- |

G7V1Y4

### ಪಾಠದ ಪರಿಚಯ

ದಕ್ಷಿಣ ಮತ್ತು ಉತ್ತರ ಭಾರತದಲ್ಲಿ ಆಳ್ವಾರರು, ದಾಸರು ಮತ್ತು ಉತ್ತರ ಭಾರತದಲ್ಲಿ ಸಂತರು, ಸೂಫಿಗಳು ಭಕ್ತಿ ಪಂಥದ ಮೂಲಕ ಸಮಾಜವನ್ನು ಜಾಗೃತಿಗೊಳಿಸಿದರು. ಈ ಪಾಠದಲ್ಲಿ ಭಕ್ತಿ ಪಂಥದ ಆಶಯ, ಅರ್ಥ ಮತ್ತು ಲಕ್ಷಣಗಳನ್ನು ಹೇಳಲಾಗಿದೆ. ದಕ್ಷಿಣ ಭಾರತದಲ್ಲಿನ ಆಂಡಾಳ್, ಅಕ್ಕಮಹಾದೇವಿ, ಕನಕದಾಸರು, ಪುರಂದರದಾಸರು, ಶಿಶುನಾಳ ಶರೀಫರನ್ನು ಪರಿಚಯಿಸಲಾಗಿದೆ. ಅದರಂತೆ ಉತ್ತರ ಭಾರತದಲ್ಲಿನ ಕಬೀರದಾಸ, ಗುರುನಾನಕ್, ತುಳಸೀದಾಸ, ಮೀರಾಬಾಯಿ, ಶ್ರೀಚೈತನ್ಯ ಹಾಗೂ ಸೂಫಿ ಸಂತರನ್ನು ಪರಿಚಯಿಸಲಾಗಿದೆ. ಜೊತೆಗೆ ಭಕ್ತಿಪಂಥವು ವಿಭಿನ್ನ ಧರ್ಮೀಯರ ನಡುವೆ ಸಾಧಿಸಿದ ಸಾಮರಸ್ಯವನ್ನು ಹಾಗೂ ಸ್ಥಳೀಯ ಭಾಷೆಗಳ ಸಂಪನ್ನತೆಗೆ ನೀಡಿದ ಕೊಡುಗೆಗಳನ್ನು ವಿವರಿಸಲಾಗಿದೆ.

### ಸಾಮರ್ಥ್ಯಗಳು

1] ಭಕ್ತಿ ಪಂಥದ ಬೋಧನೆಗಳು ಸಾಮಾಜಿಕ ಸಾಮರಸ್ಯಕ್ಕೆ ನೀಡಿದ ಕೊಡುಗೆಗಳನ್ನು ಅರ್ಥೈಸಿಕೊಳ್ಳುವುದು.

2] ದಾಸರ ಮತ್ತು ಸಂತರ ಬೋಧನೆಗಳನ್ನು ಅರಿತು ಮೈಗೂಡಿಸಿಕೊಳ್ಳುವುದು.

3] ಸೂಫಿಗಳು ಬೋಧಿಸಿದ ವಿಶಿಷ್ಟವಾದ ತತ್ವಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು.



ಭಾರತ ಬಹು ಸಂಸ್ಕೃತಿಗಳ ಸಮಾಜವನ್ನು ಒಳಗೊಂಡಿರುವ ದೇಶ. ಈ ಸಮಾಜದಲ್ಲಿ ಜಾತಿ ವ್ಯವಸ್ಥೆ, ಮೌಢ್ಯ, ಕಂದಾಚಾರಗಳು ಮನೆ ಮಾಡಿದ್ದವು. ಜನಸಾಮಾನ್ಯರಿಗೆ 'ಮೋಕ್ಷ' ಎಂಬುದು ಮರೀಚಿಕೆಯಾಗಿತ್ತು. ಅದಕ್ಕೆ ಅವರು ಅರ್ಹರಲ್ಲ ಎಂಬ ಭಾವನೆ ಮಧ್ಯಯುಗದ ಸಮಾಜದಲ್ಲಿತ್ತು. ಅಂತಹ ಸಂದರ್ಭದಲ್ಲಿ ಉದಯಿಸಿದ ಕೆಲವು ಭಕ್ತಿ ಪಂಥ ಮತ್ತು ಸೂಫಿ ಪರಂಪರೆಯ ಸಂತರು ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗೆ ಮುಂದಾದರು.

ಅವರು ವಿಶ್ವ ಸಹೋದರತೆಗೆ ಮಹತ್ವ ನೀಡಿ, ಮೋಕ್ಷ ಸಾಧನೆಗೆ ಭಕ್ತಿಯು ಉತ್ತಮ ಮಾರ್ಗವೆಂದು ಸಾರಿದರು. ಈ ಸಂಪ್ರದಾಯವನ್ನು ಭಕ್ತಿ ಪಂಥ ಎನ್ನುವರು.

> ಭಕ್ತಿ ಎಂಬ ಸಂಸ್ಕೃತ ಪದವು ಭುಜ್ ಎಂಬ ಮೂಲದಿಂದ ಬಂದಿದೆ. ಭುಜ್ ಎಂದರೆ ಜ್ಞಾನ ಎಂದು ಅರ್ಥವಾಗುತ್ತದೆ.

### ಭಕ್ತಿ ಪಂಥದ ಸಾರ

1) ಭಕ್ತಿ ಪಂಥವು ಮೇಲು ಕೀಳು ಎಂಬ ಭೇದಭಾವವನ್ನು ಖಂಡಿಸಿತು. ಸಮಾನತೆಯನ್ನು ಸಾರಿತು.

2) ಭಕ್ತಿಪಂಥದ ಸಂತರು ಕಂದಾಚಾರವನ್ನು ವಿರೋಧಿಸಿ ಅದನ್ನು ಖಂಡಿಸಿದರು.

3) ಇವರು ಜನರ ಹೃದಯವನ್ನು ಬೆಸೆಯುವ ಕಾರ್ಯ ಮಾಡಿದರು.

4) ಸೂಫಿ ಸಂತರು ಧರ್ಮವೆಂದರೆ ಪ್ರೇಮ ಹಾಗೂ ಮಾನವ ಸೇವೆ ಎಂದು ಸಾರಿದರು. ದೇವರು ಒಬ್ಬನೇ ಎಂದು, ಹಲವಾರು ದೇವರುಗಳು ಇಲ್ಲ ಎಂದು ಸಾರಿದರು.

## ದಕ್ಷಿಣ ಭಾರತದ ಭಕ್ತಿ ಪರಂಪರೆ

### ಆಂಡಾಳ್


ಆಂಡಾಳ್

ತಮಿಳುನಾಡಿನ ವಿಷ್ಣುಭಕ್ತರಾದ 12 ಮಂದಿ ಆಳ್ವಾರಲ್ಲಿ 'ಆಂಡಾಳ್' ಕೂಡಾ ಒಬ್ಬರು. ಇವರು ವಿಷ್ಣುಚಿತ್ತರ ಸಾಕುಮಗಳು. ವಿಷ್ಣುಚಿತ್ತರೂ ಒಬ್ಬ ಆಳ್ವಾರ್. ಇವರನ್ನು ಪೆರಿಯಾಳ್ವಾರ್ ಎಂಬ ಹೆಸರಿನಿಂದ ಕರೆಯುತ್ತಾರೆ. ಆಂಡಾಳ್‌ರ ಮೂಲ ಹೆಸರು ಗೋದಾದೇವಿ. ಇವರು ಕೃಷ್ಣನ ಭಕ್ತರು. ಶ್ರೀವಿಲ್ಲಿಪುತ್ತೂರಿನಲ್ಲಿರುವ ಕೃಷ್ಣದೇವಸ್ಥಾನಕ್ಕೆ ಇವರ ತಂದೆ ಹೂಮಾಲೆ ಮಾಡಿ ದೇವರಿಗೆ ಮುಡಿಸುತ್ತಿದ್ದರು. ಆಂಡಾಳ್‌ರವರು ಕೃಷ್ಣನನ್ನೇ ಪ್ರೇಮಿಸಿ, ಆತನೇ ತನ್ನ ಗಂಡನೆಂದು ಹೇಳುತ್ತಿದ್ದರು. ಇವರು 'ತಿರುಪ್ಪಾವೈ' ಎಂಬ ಗ್ರಂಥ ರಚಿಸಿ ದೇವರಿಗೆ ಸಮರ್ಪಿಸಿದರು. ತಮಿಳುನಾಡಿನಲ್ಲಿ ಈ 'ತಿರುಪ್ಪಾವೈ' ವ್ರತಾಚರಣೆಗೆ ತುಂಬಾ ಪ್ರಸಿದ್ಧಿ ಹೊಂದಿದೆ.

ಆಳ್ವಾರರ ಪ್ರಕಾರ ವಿಷ್ಣುಭಕ್ತರಾದವರೆಲ್ಲರೂ ಸಮಾನರು, ಅವರ ಹುಟ್ಟನ್ನು ಯಾರೂ ಕೇಳಬಾರದು. ಜಾತಿ ಭಾವನೆ ಘೋರಪಾಪವೆಂದು ಇವರು ಭಾವಿಸಿದ್ದರು.



### ಅಕ್ಕಮಹಾದೇವಿ


ಅಕ್ಕಮಹಾದೇವಿ

12ನೇ ಶತಮಾನದಲ್ಲಿ ವಚನ ಚಳವಳಿಯಲ್ಲಿ ಭಾಗವಹಿಸಿದ ದಿಟ್ಟ ಮಹಿಳೆ ಅಕ್ಕಮಹಾದೇವಿ. ಕನ್ನಡ ವಚನ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವಾಗಿದೆ. ಶಿವಮೊಗ್ಗ ಜಿಲ್ಲೆಯ ಉಡುತಡಿಯಲ್ಲಿ ಅಕ್ಕಮಹಾದೇವಿ ಜನಿಸಿದರು. ಇವರ ತಂದೆ ನಿರ್ಮಲಶೆಟ್ಟಿ. ತಾಯಿ ಸುಮತಿ. ಬಾಲ್ಯದಿಂದಲೇ ಶಿವಭಕ್ತಿಯಲ್ಲಿ ಮುಳುಗಿರುತ್ತಿದ್ದರು. ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡ ಎಂದು ಸಾರಿ ಹೇಳುತ್ತಿದ್ದರು. ಇವರ ತಂದೆ-ತಾಯಿಯರು ಬಲವಂತವಾಗಿ ರಾಜನಾದ ಕೌಶಿಕನೊಂದಿಗೆ ಮದುವೆ ಮಾಡುತ್ತಾರೆ. ತನ್ನ ಗುರು, ಲಿಂಗ, ಜಂಗಮ ಸೇವೆಗೆ ಅಡ್ಡಿಯಾದ್ದರಿಂದ ಅಕ್ಕಮಹಾದೇವಿ ಅರಮನೆ ತ್ಯಜಿಸುತ್ತಾರೆ. ತೊಟ್ಟ ವಸ್ತ್ರಗಳನ್ನು ಬಿಟ್ಟು ಹೊರ ಬರುತ್ತಾರೆ. ನಂತರ ಕಲ್ಯಾಣಕ್ಕೆ ತೆರಳಿ ಬಸವೇಶ್ವರರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಕೆಲವು ಕಾಲ ತಂಗುತ್ತಾರೆ. ಅಲ್ಲಿ 'ಚನ್ನಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಅನೇಕ ವಚನಗಳನ್ನು ರಚಿಸುತ್ತಾರೆ. ಎಲ್ಲ ಶಿವಶರಣರಿಗೂ ಅಕ್ಕಮಹಾದೇವಿಯ ಬಗೆಗೆ ಅಪಾರ ಗೌರವವಿತ್ತು. ಕೊನೆಯ ದಿನಗಳಲ್ಲಿ ಕಲ್ಯಾಣದಿಂದ ಶ್ರೀಶೈಲಕ್ಕೆ ತೆರಳುತ್ತಾರೆ. ಅಂತಿಮವಾಗಿ ಅಲ್ಲಿನ ಕದಳೀ ವನದಲ್ಲಿ ಶಿವೈಕ್ಯರಾಗುತ್ತಾರೆ.

**ಪುರಂದರದಾಸರು (ಸಾ.ಶ. 1480–1564)**



ಪುರಂದರದಾಸರು

ಇವರು ಕನ್ನಡ ದಾಸ ಸಾಹಿತ್ಯದ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದಾರೆ. ಪುರಂದರ ದಾಸರು ಪುರಂದರಗಡದಲ್ಲಿ ಜನಿಸಿದರು. ಇವರ ಮೂಲ ಹೆಸರು ಶ್ರೀನಿವಾಸ ನಾಯಕ. ತಂದೆ ವರದಪ್ಪ ನಾಯಕರು ಮತ್ತು ತಾಯಿ ಲೀಲಾವತಿ. ಇವರ ಪತ್ನಿ ಲಕ್ಷ್ಮೀಬಾಯಿ ಧರ್ಮನಿಷ್ಠ ಸ್ತ್ರೀಯಾಗಿದ್ದಳು.

ಜಿಪುಣನೂ, ನಾಸ್ತಿಕನೂ ಆದ ಶ್ರೀನಿವಾಸ ನಾಯಕ ಭಗವಂತನ ಪರೀಕ್ಷೆಯಲ್ಲಿ ಸೋತು ತನ್ನೆಲ್ಲ ಸಂಪತ್ತನ್ನು ತ್ಯಾಗ ಮಾಡಿ ಪರಮಾತ್ಮನ ನಾಮ ಸ್ಮರಣೆಯಲ್ಲಿ ತೊಡಗಿದರು. ಇವರು ಕೀರ್ತನೆಗಳನ್ನು ಹಾಡುತ್ತ ಅನೇಕ ಊರುಗಳನ್ನು ಸುತ್ತಿ ಕೃಷ್ಣದೇವರಾಯನ ಆಸ್ಥಾನವನ್ನು ಸೇರಿದರು. ಅಲ್ಲಿ ವ್ಯಾಸರಾಯರು ಇವರಿಗೆ ದೀಕ್ಷೆಯನ್ನು ಕೊಟ್ಟು "ಪುರಂದರ" ಎಂದು ನಾಮಕರಣ ಮಾಡಿದರು. ಹೀಗೆ ಪುರಂದರದಾಸರಾದರು. ಪುರಂದರದಾಸರ ಪದಗಳಲ್ಲಿ ಮಾನವೀಯ ಮೌಲ್ಯಗಳು ಅಡಗಿವೆ. ಇವರು ತಮ್ಮ ಕೀರ್ತನೆಗಳಲ್ಲಿ ಮಡಿವಂತಿಕೆಯನ್ನು ಖಂಡಿಸಿದ್ದಾರೆ. ಇವುಗಳಲ್ಲಿ ತತ್ವ, ನೀತಿ ಮತ್ತು ಸಂಗೀತದ ಸಂಗಮವನ್ನು ಕಾಣುತ್ತೇವೆ. ಇವರನ್ನು "ಕರ್ನಾಟಕ ಸಂಗೀತ ಪಿತಾಮಹ" ಎಂದು ಕರೆಯುತ್ತಾರೆ. 'ಪುರಂದರ ವಿಠ್ಠಲ' ಎಂಬ ಅಂಕಿತದಿಂದ ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. "ದಾಸರೆಂದರೆ ಪುರಂದರ ದಾಸರಯ್ಯಾ" ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದ ಹೊಗಳಿಸಿಕೊಂಡಿದ್ದಾರೆ.

**ಕನಕದಾಸರು (ಸುಮಾರು ಸಾ.ಶ. 1508 – 1606)**



ಕನಕದಾಸರು

ದಾಸ ಸಾಹಿತ್ಯದ ಒಬ್ಬ ಪ್ರಮುಖ ಕೀರ್ತನಕಾರರಾಗಿದ್ದ ಕನಕದಾಸರು ಸುಮಾರು ಸಾ.ಶ. 1508ರಲ್ಲಿ ಹಾವೇರಿ ಜಿಲ್ಲೆಯ ಬಂಕಾಪುರ ತಾಲೂಕಿನ ಬಾಡ ಗ್ರಾಮದಲ್ಲಿ ಜನಿಸಿದರು. ಇವರ ಮೂಲ ಹೆಸರು ತಿಮ್ಮಪ್ಪ. ಬೀರಪ್ಪ ಮತ್ತು ಬಚ್ಚಮ್ಮ ಇವರ ತಂದೆ–ತಾಯಿಗಳು. ಇವರು ಕಲಿಯೂ ಹೌದು, ಕವಿಯೂ ಹೌದು. ಬಾಡಗ್ರಾಮದ ಸುತ್ತಲಿನ 78 ಗ್ರಾಮಗಳಿಗೆ ನಾಡಗೌಡ ಹಾಗೂ ಢಣಾಯಕರಾಗಿದ್ದರು. ಕೊಪ್ಪರಿಗೆ ತುಂಬಿದ ಕನಕ ದೊರೆಯಲಾಗಿ ಕನಕನಾಯಕ ಆದರೆಂದು ಪ್ರತೀತಿ. ಕೌಟುಂಬಿಕ ಜೀವನದಲ್ಲಿ ವೈರಾಗ್ಯ ಉದಯಿಸಿ, ವ್ಯಾಸರಾಯರ ಶಿಷ್ಯರಾದರು. ಮುಂದೆ ಕನಕದಾಸರೆಂದೆನಿಸಿದರು. ಇವರು ಅನೇಕ ಕೀರ್ತನೆಗಳನ್ನೂ ರಚಿಸಿದ್ದಾರೆ. 'ಆದಿಕೇಶವ' ಇವರ ಅಂಕಿತನಾಮವಾಗಿದೆ. ಕಾಗಿನೆಲೆಯ ಆದಿಕೇಶವ ಇವರ ಇಷ್ಟದೈವ. ಇವರು ತಮ್ಮ ಹಾಡುಗಳಲ್ಲಿ ಸಮಾಜದ ಮೂಢನಂಬಿಕೆಗಳನ್ನು ಖಂಡಿಸಿ ಭಗವಂತನನ್ನು ಸೇರುವ ಸರಳ ಮಾರ್ಗವನ್ನು ಬೋಧಿಸಿದ್ದಾರೆ. ಇವರು ತಮ್ಮ ಕೀರ್ತನೆಯಲ್ಲಿ ಜಾತಿ ಪದ್ಧತಿಯನ್ನು ವಿಡಂಬನೆ ಮಾಡಿದ್ದಾರೆ.

**ಕನಕನ ಕಿಂಡಿ : ಉಡುಪಿಯ ದೇವಾಲಯದ ಒಳಗೆ ಕನಕದಾಸರಿಗೆ ಪ್ರವೇಶವನ್ನು ಅಲ್ಲಿನ ಪುರೋಹಿತರು ನಿರಾಕರಿಸುತ್ತಾರೆ. ಆಗ ಕನಕದಾಸರ ಭಕ್ತಿಗೆ ಮೆಚ್ಚಿದ ಶ್ರೀಕೃಷ್ಣನು ಪಶ್ಚಿಮಾಭಿಮುಖನಾಗಿ ತಿರುಗಿ ಕಿಂಡಿಯ ಮೂಲಕ ದರ್ಶನ ಕೊಟ್ಟನೆಂದು ಐತಿಹ್ಯವಿದೆ.**

**ಕನಕದಾಸರು ಹರಿಭಕ್ತಿಸಾರ, ನಳಚರಿತ್ರೆ, ರಾಮಧಾನ್ಯ ಚರಿತೆ ಎಂಬ ಷಟ್ಪದಿ ಕಾವ್ಯಗಳನ್ನೂ, ಮೋಹನ ತರಂಗಿಣಿ ಎಂಬ ಸಾಂಗತ್ಯ ಕೃತಿಯನ್ನೂ, ರಚಿಸಿದ್ದಾರೆ.**

### ಶಿಶುನಾಳ ಶರೀಫ

ಶಿಶುನಾಳ ಶರೀಫರು ಕನ್ನಡದ ಮೊದಲ ಮುಸ್ಲಿಂ ಅನುಭಾವಿ ಕವಿ. ಇವರನ್ನು 'ಕರ್ನಾಟಕದ ಕಬೀರ' ಎಂದು ಕರೆಯುತ್ತಾರೆ. ಶಿಶುನಾಳ ಎಂಬ ಗ್ರಾಮದಲ್ಲಿ 1819ರಲ್ಲಿ ಜನಿಸಿದರು. ಇವರ ತಂದೆ ಇಮಾಮ್ ಸಾಹೇಬ, ತಾಯಿ ಹಜ್ಜಮಾ. ಶರೀಫರು ಬಾಲಕನಿರುವಾಗಲೇ ಹಿಂದೂ-ಮುಸ್ಲಿಂ ಎರಡೂ ಧರ್ಮಗಳ ಬಗ್ಗೆ ಅರಿತುಕೊಂಡಿದ್ದರು. ನಂತರ ಮುಲ್ಕಿ ಪರೀಕ್ಷೆ ಪಾಸು ಮಾಡಿ ಶರೀಫರು ಕೆಲವು ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಗುರು ಗೋವಿಂದ ಭಟ್ಟರಿಂದ ದೀಕ್ಷೆ ತೆಗೆದುಕೊಂಡು ಅನೇಕ ತತ್ವಪದಗಳನ್ನು ರಚಿಸಿದರು. ಇವರ ಪದಗಳಲ್ಲಿ ರಿವಾಯತ್(ಮೊಹರಂ ಪದ) ಇವೆ. ಅವುಗಳಲ್ಲಿ ಕಾಳಗ ಪದ, ಧಾರ್ಮಿಕ ನೀತಿಪದ, ಅಲಾವಿಪದ, ಸವಾಲ್ ಜವಾಬ್ ಪದಗಳು ಇವೆ. ಶಿಶುನಾಳದಲ್ಲಿ ಇವರ ಸಮಾಧಿ ಇದೆ. ಹಿಂದೂ-ಮುಸ್ಲಿಮರಿಬ್ಬರೂ ಇವರನ್ನು ಆರಾಧಿಸುತ್ತಾರೆ. ಜಾತಿ ಮತ್ತು ಧರ್ಮಗಳ ಗಡಿಮೀರಿ ಇವರು ಮಾನವೀಯ ಮೌಲ್ಯಗಳನ್ನು ಬಿತ್ತಿದರು.




ಶಿಶುನಾಳ ಶರೀಫರು

## ಉತ್ತರ ಭಾರತದ ಭಕ್ತಿ ಪರಂಪರೆ

### ಕಬೀರದಾಸ್ (ಸಾ.ಶ. 1398-1518)

ಭಕ್ತಿಪಂಥದ ಪ್ರಸಿದ್ಧ ಸಂತರಾದ ಕಬೀರ್ ರಾಮಾನಂದರ ಶಿಷ್ಯರು. ಇವರು ಹಿಂದೂ-ಮುಸ್ಲಿಂ ಧರ್ಮಗಳ ನಡುವೆ ಸಾಮರಸ್ಯವನ್ನು ತರಲು ಪ್ರಯತ್ನಿಸಿದರು. ಇವರು ವಾರಣಾಸಿಯಲ್ಲಿನ ನೇಕಾರ ಮುಸ್ಲಿಂ ದಂಪತಿಗಳಾದ ನೀರು ಮತ್ತು ನಿಮಾ ರ ಸಾಕು ಮಗ. ಜಾತಿ ಪದ್ಧತಿ, ಆಡಂಬರದ ಜೀವನ, ಜಾತಿ ಶ್ರೇಷ್ಠತೆ, ಧಾರ್ಮಿಕ ಅಸಮಾನತೆ ಇವುಗಳನ್ನು ಖಂಡಿಸಿದರು. ಅಲ್ಲಾ ಮತ್ತು ರಾಮ ಎಂಬುದು ಒಂದೇ ದೇವರ ಎರಡು ಹೆಸರುಗಳು. ಹಿಂದೂ ಮತ್ತು ಮುಸ್ಲಿಮರು ಒಂದು ಮಣ್ಣಿನಿಂದ ತಯಾರಿಸಿದ ಮಡಿಕೆಗಳು ಎಂದು ಬಣ್ಣಿಸಿದರು.



ಕಬೀರದಾಸ್

ಕಬೀರರು ತಾನು ರಾಮ ಮತ್ತು ಅಲ್ಲಾಹನ ಮಗನೆಂದು ಸಾರಿದರು. ದೇಹ ದಂಡನೆ, ಉಪವಾಸ, ತೀರ್ಥಯಾತ್ರೆ, ಪವಿತ್ರ ಸ್ಥಾನದಿಂದ ದೇವರನ್ನು ಕಾಣಲು ಸಾಧ್ಯವಿಲ್ಲ. ಆದರೆ ಪವಿತ್ರವಾದ ಭಕ್ತಿಮಾರ್ಗದಿಂದ ಮಾತ್ರ ದೇವರನ್ನು ಕಾಣಲು ಸಾಧ್ಯ ಎಂದು ಹೇಳಿದರು. ಕಬೀರರು ತಮ್ಮ ತತ್ವಗಳನ್ನು ಜನರಿಗೆ, ಅರ್ಥವಾಗುವಂತೆ **'ದೋಹ'** (ಎರಡು ಸಾಲಿನ ಪದ್ಯ) ಗಳೆಂಬ ಸಣ್ಣ ಕಾವ್ಯಗಳಲ್ಲಿ ಬೋಧಿಸಿದರು. ಇವರ ಅನುಯಾಯಿಗಳನ್ನು ಕಬೀರ್ ಪಂಥಿಗಳೆಂದು ಕರೆಯುತ್ತಾರೆ.

### ಗುರುನಾನಕರು (ಸಾ.ಶ.1469 – 1539)




ಗುರುನಾನಕರು

ಗುರುನಾನಕರು ಸಿಖ್ ಧರ್ಮದ ಸಂಸ್ಥಾಪಕರು. ಇವರು ಈಗಿನ ಪಾಕಿಸ್ತಾನದಲ್ಲಿರುವ ಪಂಜಾಬಿನ **ತಲವಾಂಡಿ** ಗ್ರಾಮದಲ್ಲಿ 1469ರಲ್ಲಿ ಜನಿಸಿದರು. ಮೆಹ್ತಕೌಲ ಮತ್ತು ತೃಪ್ತಾ ಇವರ ತಂದೆ–ತಾಯಿಗಳು. ಅವರು ಹಿಂದೂ–ಮುಸ್ಲಿಂ ಮತಗಳ ಸಮಾನ ಅಂಶಗಳನ್ನು ಒತ್ತಿ ಹೇಳಿದರು. "ಗ್ರಂಥ ಸಾಹಿಬ್" ಎಂಬ ಸಿಖ್ಖರ ಪವಿತ್ರ ಗ್ರಂಥದಲ್ಲಿ ಅವರ ಜಪಜಿಗಳು ಎಂದು ಕರೆಯಲಾಗುವ ಹಾಡುಗಳಿವೆ. ದೇವರ ನಾಮವನ್ನು ಜಪಿಸುವುದು ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕೆ ಸಿಖ್ ಪಂಥ ಮಹತ್ವ ನೀಡಿದೆ. ಸ್ತ್ರೀ–ಪುರುಷರ ಸಮಾನತೆಯನ್ನು ಅದು ಒತ್ತಿ ಹೇಳಿದೆ. ಗುರುನಾನಕರು ದೇವರ ಅಸ್ತಿತ್ವದಲ್ಲಿ ಅಚಲ ನಂಬಿಕೆಯನ್ನು ಹೊಂದಿದ್ದರು. ವಿಶ್ವಕ್ಕೆ ದೇವರು ಒಬ್ಬನೆ, ಅವನು ಸತ್ಯ ನಿತ್ಯನೆಂದು ಸಾರಿದರು. ಜೀವನದಲ್ಲಿ ಮೋಸ, ವಂಚನೆ, ಕಳ್ಳತನ, ಹಿಂಸೆ ಮಾಡಬಾರದು, ಗುರುವಿನಿಂದ ಭಕ್ತಿಯನ್ನು, ಭಕ್ತಿಯಿಂದ ಮುಕ್ತಿಯನ್ನು ಪಡೆಯಬಹುದು ಎಂದು ಹೇಳಿದರು. ಸಾಮಾಜಿಕ ಅನಿಷ್ಟಗಳಾದ ಮೂರ್ತಿಪೂಜೆ, ಜಾತಿಪದ್ಧತಿ, ಸತಿಪದ್ಧತಿ, ಮುಂತಾದವುಗಳನ್ನು ವಿರೋಧಿಸಿದರು. ತಮ್ಮ ದೇಶ ಸಂಚಾರದಲ್ಲಿ ನಾನಕರು ಕರ್ನಾಟಕಕ್ಕೂ ಬಂದಿದ್ದರು. ಅವರು ಬೀದರಿನಲ್ಲಿ ತಂಗಿದ್ದ ಸ್ಥಳವನ್ನು "ನಾನಕ್ ಝರಾ" (ಸಿಹಿ ನೀರಿನ ಬುಗ್ಗೆ) ಎಂದು ಕರೆಯುತ್ತಾರೆ.

### ತುಳಸೀದಾಸರು (ಸಾ.ಶ. 1532 – 1623)

ಉತ್ತರ ಭಾರತದ ಭಕ್ತಿ ಮಾರ್ಗದ ಪ್ರತಿಪಾದಕರಲ್ಲಿ ತುಳಸೀದಾಸರು ಅಗ್ರಗಣ್ಯರಾಗಿದ್ದಾರೆ. ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವರು ಹಿಂದೀ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಪಾರವಾಗಿದೆ. ಇವರು "ರಾಮಚರಿತ ಮಾನಸ" ಎಂಬ ಗ್ರಂಥವನ್ನು ಬರೆದರು. ಇದು ಹಿಂದೀ ಸಾಹಿತ್ಯದ ಶ್ರೇಷ್ಠ ಕೃತಿಯಾಗಿದೆ. ಉತ್ತರದಲ್ಲಿ ಇದು 'ತುಳಸೀ ರಾಮಾಯಣ' ಎಂದು ಜನಪ್ರಿಯವಾಗಿದೆ. ರಾಮಭಕ್ತರಾದ ಇವರು ದೈವಭಕ್ತಿ, ಪರಿಶುದ್ಧ ಜೀವನ, ಪ್ರೀತಿ, ಪ್ರೇಮ, ಸಹನೆ, ಔದಾರ್ಯಗಳನ್ನು ಜನಮನದಲ್ಲಿ ಬಿತ್ತಿದರು.



ತುಳಸೀದಾಸರು

## ಮೀರಾಬಾಯಿ ( ಸಾ.ಶ. 1498 – 1569)


ಮೀರಾಬಾಯಿ

"ಕಲಿಯುಗದ ರಾಧ" ಎಂದು ಕರೆಯಲಾಗುವ ಸಂತ ಮೀರಾಬಾಯಿ ಭಾರತದ ಮಹಾನ್ ಕೀರ್ತನಕಾರ್ತಿ ಆಗಿದ್ದರು. ಇವರು ರಾಜಸ್ಥಾನದಲ್ಲಿ ರಜಪೂತ ರಾಜಮನೆತನದಲ್ಲಿ ಜನಿಸಿದರು. ಮೀರಾಬಾಯಿ ಅವರು ರಾಜಾರತನಸಿಂಗನ ಮಗಳು. ಮೇವಾಡದ ರಾಜಕುಮಾರನೊಂದಿಗೆ ಇವರ ವಿವಾಹವಾಯಿತು. ಬಾಲ್ಯದಿಂದಲೂ ಆಧ್ಯಾತ್ಮದ ಕಡೆಗೆ ಒಲವು ಇದ್ದುದರಿಂದ ತನ್ನೆಲ್ಲ ಸಮಯವನ್ನು ಭಗವಂತನ ಪೂಜೆ, ಧ್ಯಾನ ಮತ್ತು ಕೀರ್ತನೆಯಲ್ಲಿ ಕಳೆಯುತ್ತಿದ್ದರು. ಇವರ ಕೃಷ್ಣನ ಆರಾಧನೆಯನ್ನು ಅತ್ತೆ ಕಟುವಾಗಿ ವಿರೋಧಿಸಿದಳು. ಇದನ್ನು ಸಹಿಸಲಾಗದೆ ಮೀರಾಬಾಯಿ ಅರಮನೆ ಬಿಟ್ಟು ಶ್ರೀ ಕೃಷ್ಣನ ಕ್ಷೇತ್ರವಾದ ಬೃಂದಾವನಕ್ಕೆ ಹೋದರು. ಅವರು ರಚಿಸಿದ ಕೀರ್ತನೆಗಳಲ್ಲಿ ಭಕ್ತಿ, ಪ್ರೇಮ ತುಂಬಿ ತುಳುಕಿದೆ. **ಗಿರಿಧರ ಗೋಪಾಲ** ಇವರ ಆರಾಧ್ಯದೈವ. ತನ್ನ ನೂರಾರು ಭಜನೆಗಳಿಂದ ಮೀರಾಬಾಯಿ ಅವರು ಇಂದಿಗೂ ಜನಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ.

## ಚೈತನ್ಯರು (ಸಾ.ಶ. 1485–1533)


ಚೈತನ್ಯರು

ಚೈತನ್ಯರು ಪಶ್ಚಿಮ ಬಂಗಾಳದ ನವದ್ವೀಪ (ನಾಡಿಯಾ) ದಲ್ಲಿ ಸಾ.ಶ.1485ರಲ್ಲಿ ಜನಿಸಿದರು. ಜಗನ್ನಾಥ ಮಿಶ್ರಾ ಮತ್ತು ಶಚಿದೇವಿ ಇವರ ತಂದೆ–ತಾಯಿಗಳು. **ವಿಶ್ವಂಭರ** ಎಂಬುದು ಚೈತನ್ಯರ ಮೊದಲ ಹೆಸರು. ಈಶ್ವರಿಪುರಿ ಇವರ ಗುರುಗಳಾಗಿದ್ದರು. ಚೈತನ್ಯರು ತಮ್ಮ 25ನೇ ವರ್ಷದಲ್ಲಿ ಸಂಸಾರವನ್ನು ತ್ಯಜಿಸಿ ಸನ್ಯಾಸವನ್ನು ಸ್ವೀಕರಿಸಿದರು. ಇವರು ಜಾತಿಭೇದವನ್ನು ಅಲ್ಲಗಳೆದರು. ಮುಕ್ತಿಗೆ ಭಕ್ತಿಯೊಂದೇ ದಾರಿಯೆಂದರು. ವಿಶ್ವಪ್ರೇಮವೇ ದೇವರ ಪ್ರೀತಿಗಳಿಸುವ ಪ್ರಥಮ ಹೆಜ್ಜೆ ಎಂದು ಬೋಧಿಸಿದರು. ಚೈತನ್ಯರು ಭಾರತದ ಎಲ್ಲಾ ಕಡೆ ತೀರ್ಥಯಾತ್ರೆ ಕೈಗೊಂಡು ಪ್ರೇಮದ ಸಂದೇಶ ಸಾರಿದರು. ಆದ್ದರಿಂದ ಪ್ರೇಮ, ಸಹೋದರಭಾವ ಮತ್ತು ದಾನಶೀಲತೆ ಇವು ಅವರ ಬೋಧನೆಯ ತಿರುಳು ಆಗಿತ್ತು. ಇಂದಿನ ಹರೇಕೃಷ್ಣ ಪಂಥ ಇವರಿಂದ ಪ್ರಭಾವಿತವಾಗಿದೆ. ಚೈತನ್ಯರನ್ನು ಶ್ರೀಕೃಷ್ಣನ ಅವತಾರವೆಂದು ಪರಿಗಣಿಸುವ ಬಂಗಾಳದ ಜನತೆ ಅವರನ್ನು "ಚೈತನ್ಯ ಮಹಾಪ್ರಭು" ಎಂದು ಕರೆದಿದ್ದಾರೆ.

### ಭಕ್ತಿಪಂಥದ ಪರಿಣಾಮಗಳು

- ಭಕ್ತಿಸಂತರು ಹಿಂದೂ–ಮುಸ್ಲಿಂ ಸಾಮರಸ್ಯ ಸಾಧಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.
- ಭಕ್ತಿ ಸಂತರು ಜನರಾಡುವ ಸ್ಥಳೀಯ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದರು. ಇದರಿಂದಾಗಿ ಭಾರತೀಯ ದೇಶಿ ಭಾಷೆಗಳು ಶ್ರೀಮಂತಗೊಂಡವು.

## ಸೂಫಿ ಪರಂಪರೆ

ಹಿಂದೂಗಳಲ್ಲಿ ಕಬೀರರು, ಕನಕದಾಸರು, ಚೈತನ್ಯರು ಮುಂತಾದವರು ಧರ್ಮ ಜಾಗೃತಿಯನ್ನು ಉಂಟು ಮಾಡಿದಂತೆ, ಮುಸ್ಲಿಮರಲ್ಲಿ ಸೂಫಿ ಸಂತರು ಧರ್ಮ ಜಾಗೃತಿಯನ್ನು ಉಂಟು ಮಾಡಿದರು. ಹಿಂದೂ-ಮುಸ್ಲಿಮರ ಏಕತೆಗಾಗಿ ಶ್ರಮಿಸಿದರು. ಸೂಫಿ ಪಂಥವು ಅರೇಬಿಯಾದಲ್ಲಿ ಉದಯಿಸಿ ಭಾರತವನ್ನು ಪ್ರವೇಶಿಸಿತು.

ಸೂಫಿ ಎಂಬ ಪದವು 'ಸಾಫ್' ಎಂಬ ಪದದಿಂದ ಬಂದಿದೆ. ಸಾಫ್ ಎಂದರೆ ಶುದ್ಧಿ ಅಥವಾ ಶುಚಿ ಎಂದು ಅರ್ಥ ಬರುತ್ತದೆ. ಸೂಫಿ ಸಂತರು ಮುಸ್ಲಿಂ ಅನುಭಾವಿಗಳಾಗಿದ್ದು ಸಾದಾ ಉಣ್ಣೆಯ ಅಂಗಿಯನ್ನು ತೊಡುತ್ತಾರೆ.

## ಸೂಫಿ ಪಂಥದ ಸಾರ

1) ದೇವರು ಒಬ್ಬನೇ , ಆತನು ಸರ್ವಶಕ್ತನಾಗಿದ್ದಾನೆ. ನಾವೆಲ್ಲರೂ ಆತನ ಮಕ್ಕಳು ಎಂದು ಪ್ರತಿಪಾದಿಸಿತು.

2) ಉತ್ತಮ ಕಾಯಕ (ಕೆಲಸ)ಕ್ಕೆ ಮಹತ್ವ ನೀಡಿತು.

3) ಎಲ್ಲಾ ಮಾನವರು ಸಮಾನರು ಎಂದು ಸಾರಿತು.

4) ಜಾತಿಪದ್ಧತಿಯನ್ನು ವಿರೋಧಿಸಿತು.

ಕಾಲಕ್ರಮೇಣ ಯೋಗ, ವೇದಾಂತ ಮತ್ತು ಬೌದ್ಧ ಮತದ ಚಿಂತನೆಗಳಿಂದ ಸೂಫಿಗಳು ಪ್ರಭಾವಿತರಾದರು. ಧರ್ಮವೆಂದರೆ ಪ್ರೇಮ, ಮಾನವನ ಸೇವೆ ಎಂಬುದೇ ಸೂಫಿಗಳ ಮೂಲ ತತ್ವವಾಗಿದೆ.

## ನಿಜಾಮುದ್ದೀನ್ ಔಲಿಯ

ಇವರು ಭಾರತದ ಪ್ರಮುಖ ಸೂಫಿ ಸಂತರು. ಇವರು ದಿಲ್ಲಿಯಲ್ಲಿ ನೆಲೆಸಿ ಬಡತನದ ಜೀವನ ನಡೆಸಿದರು. ಹುಲ್ಲು ಮಾಡಿನ ಮಸೀದಿ ಇವರ ಚಟುವಟಿಕೆಯ ಕೇಂದ್ರವಾಗಿತ್ತು. ದಿಲ್ಲಿಯ ಸುಲ್ತಾನ ದಾನವಾಗಿ ನೀಡಿದ್ದ ಗ್ರಾಮವೊಂದನ್ನು ಇವರು ತಿರಸ್ಕರಿಸಿದರು. ತಮ್ಮನ್ನು ಕಾಣಲು ಬರುತ್ತಿದ್ದ ಭಕ್ತರಿಗೆ ಸದ್ಗುಣ (ಒಳ್ಳೆಯ ಗುಣ) ಕರುಣೆಯ ಸಂದೇಶ ನೀಡುತ್ತಿದ್ದರು.



## ಖ್ವಾಜಾ ಬಂದೇನವಾಜ್

ಬಂದೇನವಾಜ್‌ರು ಪ್ರಸಿದ್ಧ ಚಿಸ್ತಿ ಸೂಫಿ ಸಂತರು. ಇವರು ದೆಹಲಿಯ ನಾಸಿರುದ್ದೀನನ ಶಿಷ್ಯರು. ಬಂದೇನವಾಜ್ ಎಂದರೆ 'ಮೊರೆಹೊಕ್ಕವರನ್ನು ಪೊರೆಯುವವರು' ಎಂದು ಅರ್ಥ. ಇವರಿಗೆ ಗೇಸುದರಾಜ್ ಎಂದು ಇನ್ನೊಂದು ಹೆಸರು. ಗೇಸುದರಾಜ್ ಎಂದರೆ 'ಉದ್ದ ಕೂದಲಿನವನು' ಎಂದರ್ಥ. ಇವರ ಮೂಲ ಹೆಸರು ಸೈಯದ್ ಮಹಮದ್ ಹುಸೈನಿ. ಇವರಿಗೆ ಸಂಸ್ಕೃತ, ಅರಬೀ, ಪಾರಸಿ, ದಖನಿ (ಉರ್ದು) ಹೀಗೆ ಅನೇಕ ಭಾಷೆಗಳು ಬರುತ್ತಿದ್ದವು. ಇವರು ಕಲಬುರಗಿಗೆ ಬಂದು ನೆಲೆಸಿದರು. ದೊರೆ ಫಿರೋಜ್ ಷಾ ಇವರಿಗೆ ತುಂಬಾ ಗೌರವ ನೀಡುತ್ತಿದ್ದನು. ಇವರು ದಖನಿ ಭಾಷೆಯಲ್ಲಿ ಸಾಹಿತ್ಯ ರಚಿಸಿದ್ದಾರೆ. ಈಗಲೂ ಕಲಬುರಗಿಯ ಇವರ ದರ್ಗಾದಲ್ಲಿನ ಸಾಹಿತ್ಯ ಭಂಡಾರದಲ್ಲಿ ನೋಡಬಹುದು. ಕಲಬುರಗಿಯಲ್ಲಿ ಪ್ರತಿವರ್ಷ ಇವರ ಉರುಸು ನಡೆಯುತ್ತದೆ.

## ಚಿಸ್ತಿ ಪಂಥ

ಸೂಫಿ ಪಂಥದಲ್ಲಿ ಚಿಸ್ತಿ ಪಂಗಡ ಪ್ರಮುಖವಾದುದು. ಇದರ ಸ್ಥಾಪಕ ಮುಯಿನಿದ್ದೀನ್ ಚಿಸ್ತಿ. ಇವರು ಅಜ್ಮೀರಕ್ಕೆ ಬಂದು ನೆಲೆಸಿದರು. ದೈವಭಕ್ತಿ, ಗುರುಸೇವೆ, ಸನ್ಮಾರ್ಗದಲ್ಲಿ ನಡೆಯುವುದು ಚಿಸ್ತಿ ಅನುಯಾಯಿಗಳ ಲಕ್ಷಣವಾಗಿತ್ತು. ಚಿಸ್ತಿಗಳಿಗೆ ಹಿಂದೂ–ಮುಸ್ಲಿಂ ಸಾಮರಸ್ಯದ ಬಗ್ಗೆ ಕಾಳಜಿಯಿತ್ತು. ಇವರು ಜನ ಬಳಕೆಯ ದಖನ್(ಉರ್ದು) ಭಾಷೆಯಲ್ಲಿ ಕೃತಿ ಬರೆದರು. ಫತೇಪುರ ಸಿಕ್ರಿ ಎಂಬಲ್ಲಿನ ಸಲೀಮ್ ಚಿಸ್ತಿ ಪ್ರಸಿದ್ಧರಾಗಿದ್ದರು.





ಸಲೀಮ್ ಚಿಸ್ತಿಯಾ ಗೋರಿ, ಆಗ್ರಾ

| | | |
|---|---|---|
| ಲಾಹೋರ (ಈಗಿನ ಪಾಕಿಸ್ತಾನ) | : | ಶೇಖ್ ಇಸ್ಮಾಯಿಲ್ |
| ಅಜ್ಮೀರ | : | ಖ್ವಾಜಾ ಮೊಯಿನುದ್ದೀನ್ ಚಿಸ್ತಿ |
| ದೆಹಲಿ | : | ನಿಜಾಮುದ್ದೀನ್ ಔಲಿಯಾ |
| ಅರ್ಕಾಟ್ | : | ಟಿಪ್ಪು ಮಸ್ತಾರ ಔಲಿಯಾ |
| ಕಲಬುರಗಿ | : | ಖ್ವಾಜಾ ಬಂದೇನವಾಜ. |

**ಕಾಲಗಣನೆ (ಸಾ.ಶ)**

| | |
|---|---|
| ನಿಜಾಮುದ್ದಿನ್ ಔಲಿಯ | 1238 ರಿಂದ 1325 |
| ಕಬೀರದಾಸರು | 1440 ರಿಂದ 1518 |
| ಗುರುನಾನಕ್ | 1469 ರಿಂದ 1539 |
| ಪುರಂದರದಾಸರು | 1480 ರಿಂದ 1564 |
| ಚೈತನ್ಯರು | 1485 ರಿಂದ 1533 |
| ಮೀರಾಬಾಯಿ | 1498 ರಿಂದ 1569 |
| ಕನಕದಾಸರು | 1508 ರಿಂದ 1606 |
| ತುಳಸೀದಾಸರು | 1532 ರಿಂದ 1623 |

## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಅಕ್ಕಮಹಾದೇವಿಯವರ ವಚನದ ಅಂಕಿತನಾಮ_________
2. ಪುರಂದರದಾಸರು_________ ಆಸ್ಥಾನದಲ್ಲಿ ಇದ್ದರು.
3. ‘ಆದಿಕೇಶವ’ ಎಂಬುದು_________ ಅಂಕಿತನಾಮ.
4. ಕರ್ನಾಟಕದ ಕಬೀರ ಎಂದು_________ ಅವರನ್ನು ಕರೆಯುತ್ತಾರೆ.
5. ಚೈತನ್ಯರ ಮೊದಲ ಹೆಸರು_________
6. ಸೂಫಿ ಸಂತ ಖ್ವಾಜ ಬಂದೇನವಾಜರಿಗಿದ್ದ ಇನ್ನೊಂದು ಹೆಸರು_______

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಆಂಡಾಳ್‌ರ ಮೂಲ ಹೆಸರೇನು?
2. ಅಕ್ಕಮಹಾದೇವಿ ಎಲ್ಲಿ ಜನಿಸಿದರು?
3. ಕರ್ನಾಟಕ ಸಂಗೀತದ ಪಿತಾಮಹ ಯಾರು?
4. ಕನಕದಾಸರ ತಂದೆ-ತಾಯಿಗಳನ್ನು ಹೆಸರಿಸಿರಿ.
5. ಕನ್ನಡದ ಮೊದಲ ಮುಸ್ಲಿಂ ಕವಿ ಯಾರು?
6. ಸಿಖ್ಖರ ಪವಿತ್ರ ಗ್ರಂಥ ಯಾವುದು?
7. ಕಲಿಯುಗದ ರಾಧಾ ಎಂದು ಯಾರನ್ನು ಕರೆಯುತ್ತಿದ್ದರು?
8. ಸೂಫಿ ಪದದ ಅರ್ಥವೇನು?

9. ಭಾರತದ ಸೂಫಿ ಸಂತರು ಯಾರ್‍ಯಾರು?
10. ಚಿಸ್ತಿ ಪಂಗಡದ ಸ್ಥಾಪಕ ಯಾರು?

## III ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕಬೀರ್‌ದಾಸರು ನೀಡಿದ ಸಂದೇಶಗಳನ್ನು ತಿಳಿಸಿ.
2. ಗುರುನಾನಕರ ಬೋಧನೆಗಳೇನು?
3. ಭಕ್ತಿ ಪಂಥದ ಪರಿಣಾಮಗಳು ಯಾವುವು?
4. ಸೂಫಿ ಪಂಥದ ಸಾರವನ್ನು ಸಂಗ್ರಹಿಸಿ ಬರೆಯಿರಿ.

## IV ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.

| ಎ | ಬಿ |
|---|---|
| 1. ಗುರುನಾನಕ್ | ಅ) ಸೂಫಿಸಂತ |
| 2. ಚೈತನ್ಯ | ಆ) ಸಿಖ್‌ಧರ್ಮ |
| 3. ನಿಜಾಮುದ್ದಿನ್ ಔಲಿಯ | ಇ) ಕಲಿಯುಗದ ರಾಧ |
| 4. ಮೀರಾಬಾಯಿ | ಈ) ಹರೇಕೃಷ್ಣ ಪಂಥ |

### ಚರ್ಚಿಸಿ

ಭಕ್ತಿಸಂತರ ಬೋಧನೆಗಳ ಪ್ರಸ್ತುತತೆ ಕುರಿತು ಚರ್ಚಿಸಿ.

### ಚಟುವಟಿಕೆಗಳು

1 ಭಕ್ತಿಸಂತರ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

2 ಶ್ರೀಚೈತನ್ಯ, ಗುರುನಾನಕ್, ಮೀರಾಬಾಯಿ, ತುಲಸೀದಾಸ್, ಕಬೀರ್, ಸೂರ್‌ದಾಸ್ ಮತ್ತು ಸೂಫಿಸಂತರ ಜೀವನ ಚರಿತ್ರೆಯನ್ನು ಓದಿ.

3 ಮೀರಾ ಭಜನೆಗಳನ್ನು ಆಲಿಸಿ.

4 ಸೂಫಿ ಪಂಥದ ವಿಚಾರವಾಗಿ ಇನ್ನಷ್ಟು ವಿವರಗಳನ್ನು ಸಂಗ್ರಹಿಸಿ, ಭಾರತದ ಬಹುಧರ್ಮೀಯ ಸಮಾಜದ ಮೇಲೆ ಅವರ ಪ್ರಭಾವ ಹಾಗೂ ಇಂದಿನ ಸನ್ನಿವೇಶದಲ್ಲಿ ಅವರ ಪ್ರಸ್ತುತತೆಯ ವಿಚಾರದ ಕುರಿತು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

☆ ☆ ☆

| ಪಾಠ 4 | ನಾಯಕರು, ಪಾಳೆಯಗಾರರು ಮತ್ತು ನಾಡ ಪ್ರಭುಗಳು |
|---|---|

H6B8N6

**ಪಾಠದ ಪರಿಚಯ**

ವಿಜಯನಗರದ ಪತನದನಂತರ ಕೆಲವೇ ದಶಕಗಳಲ್ಲಿ ಕರ್ನಾಟಕವು ಮುಖ್ಯವಾಗಿ ಮೂರು ಆಡಳಿತ ವ್ಯವಸ್ಥೆಗೆ ಒಳಪಟ್ಟಿತು. ಅವುಗಳೆಂದರೆ ವಿಜಯಪುರ (ಬಿಜಾಪುರ), ಕೆಳದಿ ಮತ್ತು ಮೈಸೂರು. ಬಿಜಾಪುರ ರಾಜ್ಯ ಕೊನೆಗೊಂಡ ಬಳಿಕ ಕರ್ನಾಟಕದ ಬಹುಭಾಗದಲ್ಲಿ ಮೊಗಲ್ ಮತ್ತು ಮರಾಠ ಆಡಳಿತ ನಡೆಯಿತು. ಇವರ ಮೇಲಾಟದ ನಡುವೆಯೂ ತಮ್ಮ ರಾಜ್ಯಗಳನ್ನು ಸ್ವತಂತ್ರವಾಗಿ ಉಳಿಸಿಕೊಂಡ ಕೆಳದಿ ಮತ್ತು ಮೈಸೂರು ರಾಜ್ಯಗಳು ವಿಜಯನಗರದ ಪರಂಪರೆಯನ್ನು ತಮ್ಮ ಪ್ರದೇಶದಲ್ಲಿ ಮುಂದುವರೆಸಿಕೊಂಡು ಬಂದವು. ಇವಲ್ಲದೆ ಚಿತ್ರದುರ್ಗ, ಸುರಪುರ, ಯಲಹಂಕ (ಬೆಂಗಳೂರು) ಮುಂತಾದ ಹಲವು ಪಾಳೆಯಪಟ್ಟುಗಳು ಬೆಳೆದವು.

**ಈ ಪಾಠದಲ್ಲಿ ಕೆಳದಿ ನಾಯಕರು, ಚಿತ್ರದುರ್ಗದ ಪಾಳೆಯಗಾರರು, ಸುರಪುರ ನಾಯಕರು ಹಾಗೂ ಯಲಹಂಕ ನಾಡಪ್ರಭುಗಳ ಸಾಧನೆಗಳನ್ನು ನಿರೂಪಿಸಲಾಗಿದೆ.**

**ಸಾಮರ್ಥ್ಯಗಳು**

1] ಹಿರಿಯ ವೆಂಕಟಪ್ಪ ನಾಯಕ ಮತ್ತು ಶಿವಪ್ಪ ನಾಯಕನ ಸಾಧನೆಗಳನ್ನು ಅರ್ಥೈಸಿಕೊಳ್ಳುವುದು.

2] ರಾಣಿ ಚನ್ನಮ್ಮಾಜಿಯ ವೀರಗಾಥೆಯನ್ನು ಅರಿತುಕೊಳ್ಳುವುದು.

3] ಕೆಳದಿಯ ನಾಯಕರ ಪರಧರ್ಮ ಸಹಿಷ್ಣುತೆಯನ್ನು ಗುರುತಿಸುವುದು.

4] ಚಿತ್ರದುರ್ಗದ ರಾಜವೀರ ಮದಕರಿ ನಾಯಕನ ಶೌರ್ಯ ಮತ್ತು ಸಾಧನೆಗಳನ್ನು ಮೆಚ್ಚುವುದು.

5] ಸುರಪುರದ ನಾಲ್ವಡಿ ವೆಂಕಟಪ್ಪ ನಾಯಕನ ಸಾಧನೆಗಳನ್ನು ಅರ್ಥೈಸಿಕೊಳ್ಳುವುದು.

6] ಸುರಪುರ ನಾಯಕರು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಪ್ರಶಂಸಿಸುವುದು.

7] ಯಲಹಂಕ ನಾಡಪ್ರಭುಗಳಾದ ಒಂದನೆಯ ಕೆಂಪೇಗೌಡ ಮತ್ತು ಎರಡನೆಯ ಕೆಂಪೇಗೌಡ ಮತ್ತು ಇತರರ ಸಾಧನೆಗಳನ್ನು ತಿಳಿದುಕೊಳ್ಳುವುದು.



## ಕೆಳದಿಯ ನಾಯಕರು (ಸಾ.ಶ. 1499–1763)

**ನಾಯಕರು :** ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಅನೇಕ ಚಿಕ್ಕಪುಟ್ಟ ಅರಸರಿದ್ದರು. ಇವರೇ ನಾಯಕರು ಅಥವಾ ಪಾಳೆಯಗಾರರು. ಪಾಳೆಯಗಾರರ ವಶವಿದ್ದ ಸೀಮೆಯನ್ನು 'ಪಾಳೆಯಪಟ್ಟು' ಎನ್ನುತ್ತಿದ್ದರು. ನಾಯಕರಲ್ಲಿ ಕೆಳದಿ ಮತ್ತು ಚಿತ್ರದುರ್ಗದ ನಾಯಕರು ಪ್ರಸಿದ್ಧರು.

ವಿಜಯನಗರ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೆಳದಿ ರಾಜ್ಯವು ಸಾ.ಶ. 1499 ರಲ್ಲಿ ಸ್ಥಾಪನೆಗೊಂಡು ಮುಂದೆ ಅದು ಸ್ವತಂತ್ರಗೊಂಡಿತು. ಕೆಳದಿಯ ನಾಯಕರು ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಪ್ರದೇಶಗಳನ್ನು ಆಳುತ್ತಿದ್ದರು.

ಕೆಳದಿ ಸಂಸ್ಥಾನವು ವಿಶಾಲ ಹಾಗೂ ಸಂಪದ್ಭರಿತವಾಗಿತ್ತು. ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಕಾಸರಗೂಡು (ಕೇರಳ), ಕೊಡಗು, ಹಾಸನ, ತುಮಕೂರು, ಚಿತ್ರದುರ್ಗ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಭಾಗಗಳನ್ನು ಕೆಳದಿ ರಾಜ್ಯ ಒಳಗೊಂಡಿತ್ತು.

ಹಿರಿಯ ವೆಂಕಟಪ್ಪ ನಾಯಕ (ಸಾ.ಶ. 1582–1629) : ವೆಂಕಟಪ್ಪ ನಾಯಕನು ಕೆಳದಿ ಅರಸರಲ್ಲೇ ಅತ್ಯಂತ ಪ್ರಖ್ಯಾತನಾಗಿದ್ದನು. ಇವನ ಕಾಲದಲ್ಲಿ ಕೆಳದಿ ರಾಜ್ಯವು ಪೂರ್ಣ ಸ್ವತಂತ್ರವಾಯಿತು. ಈತನು ಕರಾವಳಿಯಲ್ಲಿ ಚಂದ್ರಗಿರಿ ನದಿಯವರೆಗೆ ವಿಜಯಯಾತ್ರೆ ಮಾಡಿದನು. ಉಳ್ಳಾಲದ ರಾಣಿ ಅಬ್ಬಕ್ಕಳ ನೆರವಿನಿಂದ ಪೋರ್ಚುಗೀಸರನ್ನು ಮಂಗಳೂರಿನಲ್ಲಿ ಈತನು ಸೋಲಿಸಿದನು. ವಿಜಯಪುರದ ಆದಿಲ್‌ಷಾಹಿ ಸೇನೆಯನ್ನು ಸೋಲಿಸಿ ಹಾನಗಲ್‌ನಲ್ಲಿ ವಿಜಯಸ್ತಂಭ ಸ್ಥಾಪಿಸಿದನು. ಎಲ್ಲಾ ಧರ್ಮಗಳಿಗೂ ಈತನು ಪ್ರೋತ್ಸಾಹ ನೀಡಿದನು.

### ಶಿವಪ್ಪ ನಾಯಕ (ಸಾ.ಶ. 1645–1660)

ಶಿವಪ್ಪ ನಾಯಕ ಕೆಳದಿಯ ಪ್ರಸಿದ್ಧ ಅರಸನಾಗಿದ್ದನು. ಇವನು ಕರಾವಳಿಯ ಪೋರ್ಚುಗೀಸರ ಕೋಟೆಗಳನ್ನು ವಶಪಡಿಸಿಕೊಂಡು 'ಪಡುಗಡಲೊಡೆಯ' ಎನಿಸಿದನು. ರಾಜ್ಯದ ರಕ್ಷಣೆಗಾಗಿ ಬೇಕಲ್ ಮತ್ತು ಚಂದ್ರಗಿರಿ (ಕೇರಳ) ಹಾಗೂ ಮಂಗಳೂರು ಮುಂತಾದೆಡೆಗಳಲ್ಲಿ ಭದ್ರವಾದ ಕೋಟೆಗಳನ್ನು ಕಟ್ಟಿಸಿದನು. ಶಿವಪ್ಪ ನಾಯಕನು ಧರ್ಮ ಶ್ರದ್ಧೆಯುಳ್ಳವನಾಗಿದ್ದನು.

ವ್ಯಾಪಾರದ ಅಭಿವೃದ್ಧಿಗಾಗಿ ಗೋವೆಯ ವ್ಯಾಪಾರಿ ವರ್ಗದವರಿಗೆ ತನ್ನ ರಾಜ್ಯದಲ್ಲಿ ಬಂದು ನೆಲೆಸಲು ಪ್ರೋತ್ಸಾಹ ನೀಡಿದನು. ಗೋವೆಯ ಕ್ರೈಸ್ತರು ಕೃಷಿಯಲ್ಲಿ ನಿಪುಣರಾದುದರಿಂದ ಅವರಿಗೂ ತನ್ನ ರಾಜ್ಯಕ್ಕೆ ವಲಸೆ ಬರಲು ಪ್ರೋತ್ಸಾಹಿಸಿ, ಭೂಮಿ ಹಾಗೂ ಇನ್ನಿತರ ಕಾಣಿಕೆಗಳನ್ನು ಕೊಟ್ಟನು. ಅವನು ತನ್ನ ರಾಜ್ಯದಲ್ಲಿ ಪಾದ್ರಿಗಳು ಮಾತ್ರ ಸ್ಥಳೀಯರೇ ಇರಬೇಕೆಂದು ಕಟ್ಟಳೆ ಮಾಡಿದ್ದನು.

**ಶಿವಪ್ಪ ನಾಯಕನ ಸಿಸ್ತು :** ಶಿವಪ್ಪ ನಾಯಕನು ಅಳವಡಿಸಿದ ಕಂದಾಯ ವ್ಯವಸ್ಥೆಯನ್ನು 'ಸಿಸ್ತು' ಎಂದು ಕರೆಯಲಾಗಿದೆ. ಈ ಪದ್ಧತಿಯಂತೆ ಭೂಕಂದಾಯವನ್ನು ನಿಗದಿಪಡಿಸಲು ಭೂಮಿಯನ್ನು ಫಲವತ್ತತೆಯ ಆಧಾರದ ಮೇಲೆ ವರ್ಗೀಕರಿಸಲಾಗುತ್ತಿತ್ತು. ಬೆಳೆಯ 1/3 ಭಾಗವನ್ನು ಕಂದಾಯ ರೂಪದಲ್ಲಿ ಸಂಗ್ರಹಿಸಲಾಗುತ್ತಿತ್ತು. ಇಂಥ ಕ್ರಮಬದ್ಧ ಕಂದಾಯ ಪದ್ಧತಿಯನ್ನು 'ಶಿವಪ್ಪ ನಾಯಕನ ಸಿಸ್ತು' ಎನ್ನುವರು. ಸಿಸ್ತು ಮಲೆನಾಡಿನ ಸಮೃದ್ಧಿಗೆ ಕಾರಣವಾಯಿತು.

**ರಾಣಿ ಚನ್ನಮ್ಮಾಜಿ (1671–1696) :** ಶಿವಪ್ಪ ನಾಯಕನ ಅನಂತರ ಅವನ ಸೊಸೆ ರಾಣಿ ಚನ್ನಮ್ಮಾಜಿ ರಾಜ್ಯವಾಳಿದಳು. ಈಕೆಯು ಮೊಗಲರ ಸೈನ್ಯವನ್ನು ಹಿಮ್ಮೆಟ್ಟಿಸಿ ಶಿವಾಜಿಯ ಮಗ ಛತ್ರಪತಿ ರಾಜರಾಮನಿಗೆ ರಕ್ಷಣೆ ನೀಡಿದಳು. ಕನ್ನಡ ನಾಡಿನ ಶೌರ್ಯ, ತ್ಯಾಗಕ್ಕೆ ಸಂಕೇತವಾಗಿದ್ದ ಚನ್ನಮ್ಮ ಮೈಸೂರಿನ ಸೈನ್ಯದೊಂದಿಗೂ ಸೆಣಸಾಡಿದಳು.

ಕೆಳದಿ ಅರಸರು ದೇವಸ್ಥಾನಗಳು, ಅಗ್ರಹಾರಗಳು ಮತ್ತು ವೀರಶೈವ ಮಠಗಳನ್ನು ಸ್ಥಾಪಿಸಿದರು. ಇಕ್ಕೇರಿಯ ಅಘೋರೇಶ್ವರ ದೇವಾಲಯ ಶಿಲ್ಪಕಲೆಗೆ ಪ್ರಸಿದ್ಧವಾಗಿದೆ. ಮಠಗಳು ದಾಸೋಹ ಹಾಗೂ ಶಿಕ್ಷಣದ ಕೇಂದ್ರಗಳಾಗಿದ್ದವು. ಸಕಲ ಧರ್ಮಗಳಿಗೆ ಅಪಾರ ದತ್ತಿದಾನ ನೀಡಿದರು. ಚನ್ನಮ್ಮಾಜಿಯು ಮಂಗಳೂರಿನಲ್ಲಿ ಕ್ರೈಸ್ತ ದೇವಾಲಯವೊಂದಕ್ಕೆ ನಿವೇಶನವಿತ್ತಳು.

ಮೈಸೂರಿನ ಜೊತೆ ಸತತ ಸ್ಪರ್ಧೆ ಹಾಗೂ ಆಂತರಿಕ ಯುದ್ಧಗಳಿಂದಾಗಿ ಕೆಳದಿ ರಾಜ್ಯ ದುರ್ಬಲವಾಯಿತು. ಮುಂದೆ ಹೈದರಾಲಿಯು ಕೆಳದಿ ಸಂಸ್ಥಾನವನ್ನು ವಶಪಡಿಸಿಕೊಂಡನು.

**ಕಾಲಗಣನೆ (ಸಾ.ಶ.)**

| | |
|---|---|
| ಕೆಳದಿ ರಾಜ್ಯದ ಆಳ್ವಿಕೆಯ ಕಾಲ | – 1499–1763 |
| ಹಿರಿಯ ವೆಂಕಟಪ್ಪ ನಾಯಕ | – 1586–1629 |
| ಶಿವಪ್ಪ ನಾಯಕ | – 1645–1660 |
| ರಾಣಿ ಚನ್ನಮ್ಮಾಜಿ | – 1671–1696 |
| ಹೈದರಾಲಿ ಕೆಳದಿಯನ್ನು ಪರಾಭವಗೊಳಿಸಿದ್ದು | – 1763 |

## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಪೋರ್ಚುಗೀಸರನ್ನು ಸೋಲಿಸಲು ಹಿರಿಯ ವೆಂಕಟಪ್ಪ ನಾಯಕನಿಗೆ ನೆರವಾದ ಉಳ್ಳಾಲದ ರಾಣಿ__________
2. ರಾಣಿ ಚನ್ನಮ್ಮಾಜಿಯು ಮೊಗಲರನ್ನು ಹಿಮ್ಮೆಟ್ಟಿಸಿ__________ ಗೆ ರಕ್ಷಣೆ ನೀಡಿದಳು.

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕೆಳದಿಯ ಇತಿಹಾಸದಲ್ಲಿ ಪಡುಗಡಲೊಡೆಯ ಎಂಬುದಾಗಿ ಯಾರನ್ನು ಕರೆಯಲಾಗುತ್ತದೆ?
2. ಗೋವೆಯ ಕ್ರೈಸ್ತರನ್ನು ಶಿವಪ್ಪ ನಾಯಕನು ಹೇಗೆ ಪ್ರೋತ್ಸಾಹಿಸಿದನು?
3. 'ಸಿಸ್ತು' ಎಂದರೇನು?
4. ರಾಣಿ ಚನ್ನಮ್ಮಾಜಿ ಯಾರು?

**III ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಹಿರಿಯ ವೆಂಕಟಪ್ಪ ನಾಯಕನ ಸಾಧನೆಗಳು ಯಾವುವು?
2. ಕೆಳದಿಯ ನಾಯಕರು ಮಾಡಿರುವ ಮುಖ್ಯ ಸಾಧನೆಗಳನ್ನು ಕುರಿತು ಬರೆಯಿರಿ.

## ಚಿತ್ರದುರ್ಗದ ನಾಯಕರು

ಚಿತ್ರದುರ್ಗದ ನಾಯಕರಿಗೆ ಕರ್ನಾಟಕದ ಇತಿಹಾಸದಲ್ಲಿ ಗಣ್ಯ ಸ್ಥಾನವಿದೆ. ಇವರು 16 ರಿಂದ 18 ನೇ ಶತಮಾನಗಳವರೆಗೆ ಪಾಳೆಗಾರರಾಗಿ ಆಳ್ವಿಕೆ ನಡೆಸಿದರು.

13 ಜನ ನಾಯಕರು 211 ವರ್ಷಗಳ ಕಾಲ ಈ ಸಂಸ್ಥಾನವನ್ನು ಆಳಿದರು. ಮತ್ತಿ ತಿಮ್ಮಣ್ಣನಾಯಕ (ಸಾ.ಶ. 1568–1589) ಈ ಸಂಸ್ಥಾನದ ಮೊದಲ ಅರಸ. ಒಂದನೇ ಕಸ್ತೂರಿ ರಂಗಪ್ಪ ನಾಯಕ (ಸಾ.ಶ. 1603–1652), ಕಸ್ತೂರಿ ಚಿಕ್ಕಣ್ಣ ನಾಯಕ (ಸಾ.ಶ. 1675–1686), ಬಿಚ್ಚುಗತ್ತಿ ಭರಮಣ್ಣ ನಾಯಕ (ಸಾ.ಶ. 1689–1721), ಹಿರೇ ಮದಕರಿ ನಾಯಕ (ಸಾ.ಶ. 1721–1749) ಮೊದಲಾದವರು ಪ್ರಸಿದ್ಧ ರಾಜರಾಗಿದ್ದರು.

### ರಾಜಾವೀರ ಮದಕರಿ ನಾಯಕ (ಸಾ.ಶ. 1754–1779) :

ಈತನು ಚಿತ್ರದುರ್ಗದ ನಾಯಕರಲ್ಲಿ ಅತ್ಯಂತ ಪ್ರಬಲ ಹಾಗೂ ಪ್ರಸಿದ್ಧನಾದವನು. ಕೇವಲ ಹನ್ನೆರಡು ವರ್ಷದವನಾಗಿದ್ದಾಗಲೇ ಸಿಂಹಾಸನವನ್ನೇರಿದನು. ಮದಕರಿಯು ಹೈದರಾಲಿಗೆ ಹಲವಾರು ಯುದ್ಧಗಳಲ್ಲಿ ಸಹಾಯ ಮಾಡಿದನು. ಆದರೆ ಮದಕರಿಯ ಸಾಹಸವನ್ನು ಮನಗಂಡ ಹೈದರಾಲಿ ಒಳಗೊಳಗೆ ಮತ್ಸರಪಟ್ಟನು. ಈತನನ್ನು ಹತ್ತಿಕ್ಕಲು ಚಿತ್ರದುರ್ಗದ ಏಳು ಸುತ್ತಿನ ಕೋಟೆಗೆ ಮುತ್ತಿಗೆ ಹಾಕಿದನು. ಆದರೆ ಅಭೇದ್ಯವಾದ ಕೋಟೆಯನ್ನು ವಶಪಡಿಸಿಕೊಳ್ಳುವುದು ಅಸಾಧ್ಯದ ಮಾತಾಗಿತ್ತು. ಆದುದರಿಂದ ಆತನ ಸೈನಿಕರು ಕೋಟೆಯ ರಹಸ್ಯದಾರಿಯನ್ನು ಪತ್ತೆಮಾಡಿ, ಕಾವಲುಗಾರನಿಲ್ಲದ ವೇಳೆ ಕಳ್ಳಗಿಂಡಿಯಿಂದ ಕೋಟೆ ಪ್ರವೇಶಿಸಲು ಯತ್ನಿಸಿದರು. ಆ ವೇಳೆಗೆ ಕಾವಲುಗಾರನ ಹೆಂಡತಿ ಓಬವ್ವ ತನ್ನ ಒನಕೆಯಿಂದ ಅನೇಕ ಶತ್ರುಗಳನ್ನು ಕೊಂದು ಹಾಕಿದಳು. ಇಂದಿಗೂ ಚಿತ್ರದುರ್ಗದ ಕೋಟೆಯ ಪಶ್ಚಿಮದಲ್ಲಿ ವೀರವನಿತೆ 'ಓಬವ್ವನ ಕಿಂಡಿ' ಇದೆ.

ಸೋಲನ್ನೊಪ್ಪದ ಹೈದರಾಲಿಯು ಚಿತ್ರದುರ್ಗಕ್ಕೆ ಮತ್ತೊಮ್ಮೆ ಮುತ್ತಿಗೆಹಾಕಿದನು. ಭೀಕರ ಯುದ್ಧವೊಂದು ನಡೆದು ಮದಕರಿಗೆ ಸೋಲಾಯಿತು. ಮದಕರಿಯ ಆಳ್ವಿಕೆಯ ನಂತರ ಚಿತ್ರದುರ್ಗದ ನಾಯಕರ ವಂಶ ಅಳಿಯಿತು.

ಚಿತ್ರದುರ್ಗವು ಒಂದು ಆಕರ್ಷಕವಾದ ಗಿರಿದುರ್ಗವಾಗಿದ್ದು ಏಳು ಸುತ್ತಿನ ಕೋಟೆಯನ್ನು ಹೊಂದಿದೆ. ಇದರ ಒಳಗಿನ ನಿವೇಶನದಲ್ಲಿ ಹಲವು ದೇವಾಲಯಗಳೂ ಕೆರೆಗಳೂ ಇವೆ. ಚಿತ್ರದುರ್ಗದ ನಾಯಕರು ಹಲವಾರು ದೇವಾಲಯಗಳನ್ನು ಕಟ್ಟಿಸಿದರು. ಭರಮಸಾಗರ ಮತ್ತು ಭೀಮಸಮುದ್ರ ಜಲಾಶಯಗಳು ಇವರ ಕೊಡುಗೆಗಳಾಗಿವೆ. ತಮ್ಮ ಶೌರ್ಯ, ಸಾಹಸಗಳಿಗೆ ಚಿತ್ರದುರ್ಗದ ನಾಯಕರು ಖ್ಯಾತರಾಗಿದ್ದಾರೆ.

### ಕಾಲಗಣನೆ (ಸಾ.ಶ.)

| | | |
|---|---|---|
| ಮತ್ತಿ ತಿಮ್ಮಣ್ಣ ನಾಯಕ | – | 1568–1589 |
| ಬಿಚ್ಚುಗತ್ತಿ ಭರಮಣ್ಣ ನಾಯಕ | – | 1689–1721 |
| ಹಿರೇ ಮದಕರಿ ನಾಯಕ | – | 1721–1749 |
| ರಾಜಾವೀರ ಮದಕರಿ ನಾಯಕ | – | 1754–1779 |

## I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಮತ್ತಿ ತಿಮ್ಮಣ್ಣನಾಯಕ ಯಾರು?
2. ರಾಜವೀರ ಮದಕರಿನಾಯಕನನ್ನು ಕುರಿತು ಟಿಪ್ಪಣಿ ಬರೆಯಿರಿ.
3. ಒನಕೆ ಓಬವ್ವಳನ್ನು ನಾವು ಇಂದಿಗೂ ಏಕೆ ನೆನೆಯುತ್ತೇವೆ?
4. ಚಿತ್ರದುರ್ಗ ನಾಯಕರು ಕಟ್ಟಿಸಿದ ಕೆರೆಗಳನ್ನು ಹೆಸರಿಸಿ.

## ಸುರಪುರ ನಾಯಕರು

ಯಾದಗಿರಿ ಜಿಲ್ಲೆಯ ಸುರಪುರವು ಕೃಷ್ಣಾ ಹಾಗೂ ಭೀಮಾ ನದಿಗಳ ಮಧ್ಯದಲ್ಲಿದೆ. ಸಾ.ಶ 1636 ರಿಂದ 1858 ರ ವರೆಗೆ ಹನ್ನೆರಡು ಜನ ನಾಯಕ ಅರಸರು ಆಳ್ವಿಕೆ ಮಾಡಿದ್ದಾರೆ. ಗಡ್ಡಿಪಿಡ್ಡನಾಯಕನು ಈ ಮನೆತನದ ಸ್ಥಾಪಕ. ಇವರ ಪೂರ್ವಜರು ವಿಜಯನಗರದ ಸೈನ್ಯದಲ್ಲಿದ್ದವರು. ವಿಜಯನಗರದ ಅವನತಿಯಾದ ಮೇಲೆ ಬೇರೆ ಬೇರೆ ಕಡೆ ಚದುರಿದ ಗುಂಪುಗಳಲ್ಲಿ ಇವರೂ ಒಬ್ಬರು. ಅನಂತರ ಬಿಜಾಪುರದ ಆದಿಲ್‌ಷಾಹಿಗಳಿಂದ ಸರದೇಶಗತಿಯನ್ನು ಪಡೆದು ವಾಗಿನಗೇರಿಯಲ್ಲಿ ಆಡಳಿತ ಪ್ರಾರಂಭಿಸಿದರು. ಪೀತಾಂಬರಿ ಬಹರಿಪಿಡ್ಡನಾಯಕ (ಸಾ.ಶ. 1687–1726)ನು ಸಾ.ಶ. 1707ರಲ್ಲಿ ಸುರಪುರವನ್ನು ನಿರ್ಮಿಸುವ ಮೂಲಕ ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.

ನಂತರ ಬ್ರಿಟಿಷರು ಮತ್ತು ಹೈದರಾಬಾದ್‌ನ ನಿಜಾಮನ ಒಪ್ಪಂದದಂತೆ ಈ ಸಂಸ್ಥಾನವು ಅವರ ಅಧೀನಕ್ಕೆ ಬಂದಿತು. ರಾಜಾ ಕೃಷ್ಣಪ್ಪ ನಾಯಕನ ನಂತರ ಆತನ ಮಗನಾದ ರಾಜಾ ನಾಲ್ವಡಿ ವೆಂಕಟಪ್ಪ ನಾಯಕನು (ಸಾ.ಶ. 1843–1858) ಅಧಿಕಾರಕ್ಕೆ ಬಂದನು. ಅದೇ ವೇಳೆಯಲ್ಲಿ ಉತ್ತರ ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (ಸಾ.ಶ 1857) ದ ಕಾವು ಸುರಪುರವನ್ನು ತಟ್ಟಿತು. ನಾಲ್ವಡಿ ವೆಂಕಟಪ್ಪ ನಾಯಕನು ದಕ್ಷಿಣ ಭಾರತದ ರಾಜರನ್ನೆಲ್ಲಾ ಒಂದುಗೂಡಿಸಿ ಬ್ರಿಟಿಷರ ವಿರುದ್ಧ ಸಮರ ಸಾರಲು ಹವಣಿಕೆಯಲ್ಲಿದ್ದನು. ಅರಬ್, ರೋಹಿಲ್ಲರನ್ನು ಸೈನ್ಯದಲ್ಲಿ ಸೇರಿಸಿಕೊಂಡನು ಅಲ್ಲದೇ ಸೈನ್ಯವನ್ನು ತರಬೇತಿಗೊಳಿಸಲು ಪ್ರಾರಂಭಿಸಿದನು. ಇದೆಲ್ಲದರ ಮಾಹಿತಿಯನ್ನು ಪಡೆದ ಬ್ರಿಟಿಷ್ ಅಧಿಕಾರಿ ಥಾರ್ನ್‌ಹಿಲ್‌ನು 24ನೆಯ ಡಿಸೆಂಬರ್ 1857ರಂದು ಕ್ಯಾಪ್ಟನ್ ಕ್ಯಾಂಬಲ್‌ನಿಗೆ ಪತ್ರ ಬರೆದು ಕ್ಷಿಪ್ರ ಕಾರ್ಯಾಚರಣೆಯನ್ನು ಕೈಗೊಳ್ಳಲು ಆದೇಶಿಸಿದನು.

ಬ್ರಿಟಿಷರ ಬಣವು 1858ರಲ್ಲಿ ಸುರಪುರದ ಮೇಲೆ ನುಗ್ಗಿತು. ಎರಡೂ ಬಣಗಳ ನಡುವೆ ಗುಂಡಿನ ಚಕಮಕಿ ನಡೆಯಿತು. ರೊಚ್ಚಿಗೆದ್ದ ಸುರಪುರ ಸೈನ್ಯವು ಸ್ಟೂಆರ್ಟ್‌ನ ಮೂಳೆ ಮುರಿಯಿತು. ನ್ಯೂಬೆರಿ ನೆಲಕ್ಕುರುಳಿದ. ಇತ್ತ, ನಾಲ್ವಡಿ ವೆಂಕಟಪ್ಪ ನಾಯಕ ವಿಶೇಷ ಅರಬ್, ರೋಹಿಲ್‌ರ ಸೈನ್ಯವನ್ನು ತರಲು ಹೈದರಾಬಾದ್‌ಗೆ ಪ್ರಯಾಣ ಬೆಳೆಸಿದನು. ಅತ್ತ, ಬ್ರಿಟಿಷ್ ಪಡೆಯು ಸುರಪುರದೊಳಗೆ ನುಗ್ಗಿತು. ಸುರಪುರವು ಪತನವಾಯಿತು. ಹೈದರಾಬಾದ್‌ನಲ್ಲಿ ಸುತ್ತಾಡುತ್ತಿದ್ದ ನಾಲ್ವಡಿ ವೆಂಕಟಪ್ಪ ನಾಯಕನನ್ನು ನೋಡಿದ ವನಪರ್ತಿ ರಾಜನಿಂದ ಸುದ್ದಿಯನ್ನು ತಿಳಿದ ಹೈದರಾಬಾದ್ ನಿಜಾಮನ ಪ್ರಧಾನಮಂತ್ರಿ ಸಾಲಾರಜಂಗನು, ಬ್ರಿಟಿಷರಿಂದ ತನಗೇನಾದರು ಲಾಭ ಸಿಗಬಹುದೆಂದು ತಿಳಿದು ಆತನನ್ನು ಬ್ರಿಟಿಷರಿಗೆ ಒಪ್ಪಿಸಿದನು. ಬ್ರಿಟಿಷರು ನಾಲ್ವಡಿ ವೆಂಕಟಪ್ಪ ನಾಯಕನನ್ನು ಸಿಕಂದರಾಬಾದ್‌ನಲ್ಲಿ ಬಂಧಿಸಿಟ್ಟರು. ನಂತರ ವಿಚಾರಣೆಗೊಳಪಡಿಸಿದರು. ಮರಣ ದಂಡನೆಯ ಶಿಕ್ಷೆಯನ್ನು ವಿಧಿಸಿದಂತೆ ನಾಟಕವಾಡಿದರು.

ಬ್ರಿಟಿಷ್ ಮೆಡೋಸ್ ಟೇಲರ್‌ನ ಕೋರಿಕೆಯಂತೆ ಉನ್ನತ ಅಧಿಕಾರ ಹೊಂದಿದ ಗೌರ್ನರ್ ಜನರಲ್ ರಾಜನ ಮರಣ ದಂಡನೆಯನ್ನು ಕೈಬಿಟ್ಟು 4 ವರ್ಷ ಗಡಿಪಾರು ಶಿಕ್ಷೆಯನ್ನು ವಿಧಿಸಿದರು. ರಾಜನನ್ನು ಮದ್ರಾಸ್ ಸಮೀಪ ಚಂಗಲ್‌ಪೇಟೆ ದುರ್ಗದಲ್ಲಿಡಲು ಹೋಗುತ್ತಿದ್ದಾಗ ದಾರಿಯಲ್ಲಿ ವಿಶ್ರಾಂತಿಗೆಂದು ತಂಗಿದ್ದಾಗ ನಾಲ್ವಡಿ ವೆಂಕಟಪ್ಪ ನಾಯಕನನ್ನು ಬ್ರಿಟಿಷರು ಮೋಸದಿಂದ ಗುಂಡಿ-ಟ್ಟು ಕೊಂದರು. ಆತ್ಮಹತ್ಯೆ ಮಾಡಿಕೊಂಡನೆಂದು ಸುಳ್ಳು ಸುದ್ದಿ ಹಬ್ಬಿಸಿದರು.

ನಂತರ ಸುರಪುರವನ್ನು ಬ್ರಿಟಿಷರು ಹೈದರಾಬಾದ್ ನಿಜಾಮನಿಗೆ ಕಾಣಿಕೆಯಾಗಿ ನೀಡಿದರು. ಮುಂದಿನ ಸಂಸ್ಥಾನಿಕರು ನಿಜಾಮನ ಅಧೀನದಲ್ಲಿಯೇ ಕಾಲಕಳೆದರು. ಕೊನೆಗೆ 1948 ಸೆಪ್ಟೆಂಬರ್ 17ರಂದು ಹೈದರಾಬಾದ್ ನಿಜಾಮ ಸಂಸ್ಥಾನವು ಭಾರತದ ಒಕ್ಕೂಟವನ್ನು ಸೇರಿದ ಮೇಲೆ ಸುರಪುರವೂ ಭಾರತದ ಒಕ್ಕೂಟವನ್ನು ಸೇರಿತು.

ಸುರಪುರ ನಾಯಕರ ರಾಜಕೀಯ ಚರಿತ್ರೆಯಂತೆಯೇ ಅವರ ಸಾಂಸ್ಕೃತಿಕ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರು ಅನೇಕ ಜನಪರ ಕಾರ್ಯಗಳನ್ನು ಕೈಗೊಂಡು ಇಂದಿಗೂ ಜನಮಾನಸದಲ್ಲಿದ್ದಾರೆ. ಕೆರೆ, ಬಾವಿ, ದೇವಾಲಯ, ಅರಮನೆ, ಕೋಟೆ-ಕೊತ್ತಲುಗಳನ್ನು ಕಟ್ಟಿಸಿದ್ದಾರೆ. ಅನೇಕರಿಗೆ ಜಹಗೀರುಗಳನ್ನು ನೀಡಿದ್ದಾರೆ. ಅಲ್ಲದೆ ಇವರ ಕುಲದೇವರಾದ ತಿರುಪತಿ ವೆಂಕಟರಮಣ ಮತ್ತು ಗೋಪಾಲಸ್ವಾಮಿಯ ನಿತ್ಯ ಪೂಜೆಗಾಗಿ ಹಾಗೂ ಉತ್ಸವಗಳಿಗಾಗಿ ಜಹಗೀರು, ಇನಾಮು ಭೂಮಿಯನ್ನು ನೀಡಿದ್ದಾರೆ. ಇವರ ಆಸ್ಥಾನದಲ್ಲಿ ಅನೇಕ ಕಲಾಕಾರರು, ಗಾಯಕರು, ಚಿತ್ರಕಾರರು, ಶಿಲ್ಪಿಗಳು, ಸಾಹಿತಿಗಳು ಆಶ್ರಯಿತರಾಗಿದ್ದರು. ಅನೇಕ ಮೌಲ್ಯಯುತ ಸಾಹಿತ್ಯ ಕೃತಿಗಳು ಹೊರಬಂದಿವೆ. ಸರ್ವಧರ್ಮ ಸಹಿಷ್ಣುಗಳಾಗಿದ್ದರು.

ಚಿತ್ರಕಲೆಯಲ್ಲಿ ಸುರಪುರ ನಾಯಕ ಅರಸು ಮನೆತನಕ್ಕೆ ಅಗ್ರಸ್ಥಾನವಿತ್ತು. ಅಲ್ಲಿಯ ಚಿತ್ರಗಳ ತಂತ್ರ ಮತ್ತು ವಿನ್ಯಾಸ ಉನ್ನತ ಸ್ಥಾನ ಪಡೆದಿವೆ. ಮೈಸೂರಿನ ಸಾಂಪ್ರದಾಯಿಕ ಕಲಾಕೃತಿಗಳು, ವಿಜಯನಗರ ಶೈಲಿಯ ಚಿತ್ರಗಳು, ಬಿಜಾಪುರದ ಆದಿಲ್‌ಶಾಹಿ ಮನೆತನದವರಿಂದ ಮೂಡಿ ಬಂದ ಕಲಾಕೃತಿಗಳಿಗಿಂತ ಸುರಪುರ ನಾಯಕ ಅರಸರ ಕಲಾಕೃತಿಗಳು ತಮ್ಮದೇ ಆದ ವಿಶಿಷ್ಟತೆಯನ್ನು ಪಡೆದಿವೆ.

ಲಂಡನ್ನಿನ ಕಲಾ ಸಂಗ್ರಹಾಲಯ, ಇಂಗ್ಲೆಂಡಿನ ವಿವಿಧ ನಗರಗಳಲ್ಲಿ, ದೆಹಲಿ, ಮುಂಬೈ, ಹೈದರಾಬಾದ್‌ನ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಸಾಲಾರಜಂಗ ವಸ್ತುಸಂಗ್ರಹಾಲಯದಲ್ಲಿ ಇಂತಹ ಕಲಾಕೃತಿಗಳನ್ನು ನೋಡಬಹುದು.

**ಕಾಲಗಣನೆ (ಸಾ.ಶ)**

1. ಸುರಪುರ ನಾಯಕರ ಆಳ್ವಿಕೆಯ ಕಾಲ – 1636–1858
2. ಪೀತಾಂಬರಿ ಬಹರಿಪಿಡ್ಡನಾಯಕ – 1687–1726
3. ನಾಲ್ವಡಿ ವೆಂಕಟಪ್ಪ ನಾಯಕ – 1843–1858
4. ಸುರಪುರ ಪತನ – ಫೆಬ್ರವರಿ 9, 1858
5. ಸುರಪುರ ಸಂಸ್ಥಾನ ಭಾರತದ ಒಕ್ಕೂಟ ಸೇರಿದುದು – ಸೆಪ್ಟೆಂಬರ್ 17, 1948.

**I** **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಸುರಪುರ ಸಂಸ್ಥಾನದ ಸ್ಥಾಪಕ ಯಾರು?
2. ಸುರಪುರ ರಾಜಧಾನಿಯನ್ನು ನಿರ್ಮಿಸಿದ ಅರಸನ ಹೆಸರೇನು?

**II** **ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿರಿ.**

1. ನಾಲ್ವಡಿ ವೆಂಕಟಪ್ಪ ನಾಯಕನ ಸಾಧನೆಯ ಕುರಿತು ಟಿಪ್ಪಣಿ ಬರೆಯಿರಿ.
2. ಸುರಪುರ ನಾಯಕರ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿರಿ.

## ಯಲಹಂಕ ನಾಡಪ್ರಭುಗಳು

ಯಲಹಂಕ ನಾಡಪ್ರಭುಗಳ ಮನೆತನದ ಸ್ಥಾಪಕ ರಣಭೈರೇಗೌಡ. ರಣಭೈರೇಗೌಡನ ನಂತರ ಜಯಗೌಡ, ಗಿಡ್ಡೇಗೌಡ, ಕೆಂಪನಂಜೇಗೌಡ ಮೊದಲಾದವರು ಆಳ್ವಿಕೆ ನಡೆಸುತ್ತಾರೆ. ಈ ಮನೆತನದ ಅತ್ಯಂತ ಜನಪ್ರಿಯ ವ್ಯಕ್ತಿ ಹಿರಿಯ ಕೆಂಪೇಗೌಡ. ಆದ್ದರಿಂದ ಯಲಹಂಕ ನಾಡಪ್ರಭುಗಳು ಕೆಂಪೇಗೌಡ ಮನೆತನದವರೆಂದೇ ಪ್ರಸಿದ್ಧರು. ಇವರು ವಿಜಯನಗರದ ಅರಸರಲ್ಲಿ ನಾಡಪ್ರಭುಗಳಾಗಿದ್ದರು. ಇವರು 16–18ನೇ ಶತಮಾನಗಳ ಕಾಲಾವಧಿಯಲ್ಲಿ ಬೆಂಗಳೂರು, ರಾಮನಗರ, ತುಮಕೂರು ಮತ್ತು ಅವಿಭಜಿತ ಕೋಲಾರ ಜಿಲ್ಲೆಗಳ ಕೆಲವು ಭಾಗಗಳನ್ನು ಆಳಿದರು. ಬೆಂಗಳೂರಿಗೆ ಮೊದಲು ಯಲಹಂಕ ಇವರ ರಾಜಧಾನಿಯಾದ್ದರಿಂದ ಯಲಹಂಕ ನಾಡಪ್ರಭುಗಳು ಎಂದು ಕರೆಸಿಕೊಂಡರು. ನಂತರ ಬೆಂಗಳೂರು ಮತ್ತು ಮಾಗಡಿ ಇವರ ರಾಜಧಾನಿಯಾಗಿದ್ದವು.

**ಹಿರಿಯ ಕೆಂಪೇಗೌಡ (ಸುಮಾರು ಸಾ.ಶ. 1532–1597) :** ಹಿರಿಯ ಕೆಂಪೇಗೌಡ ಬೆಂಗಳೂರು ನಗರವನ್ನು ಸಾ.ಶ 1537ರಲ್ಲಿ ಸ್ಥಾಪಿಸಿದನು. ಈತನು ಬೆಂಗಳೂರಿನಲ್ಲಿ ಕೋಟೆಯೊಂದನ್ನು ಕಟ್ಟಿ ಅಲ್ಲಿಂದ ಆಳ್ವಿಕೆ ನಡೆಸಿದ. ಬೆಂಗಳೂರಿನ ಬಸವನಗುಡಿಯ ಬಸವನ ದೇವಾಲಯ, ಹಲಸೂರಿನ ಸೋಮೇಶ್ವರ ದೇವಾಲಯಗಳ ರಚನೆ ಹಾಗೂ ಗವಿಗಂಗಾಧರೇಶ್ವರ ದೇವಾಲಯದವಿಸ್ತರಣೆ ಈತನ ಸಾಧನೆಯಾಗಿದೆ. ಬೆಂಗಳೂರಿನಲ್ಲಿ ಅನೇಕ ಕೆರೆಗಳನ್ನು ನಿರ್ಮಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಅವುಗಳಲ್ಲಿ ಕೆಂಪಾಂಬುಧಿ ಕೆರೆ, ಧರ್ಮಾಂಬುಧಿ ಕೆರೆ, ಹಲಸೂರು ಕೆರೆ ಹಾಗೂ ಸಂಪಂಗಿ ಕೆರೆ ಪ್ರಮುಖವಾದವುಗಳು. ಶಿವಗಂಗೆಯ ಗಂಗಾಧರೇಶ್ವರನ ಪರಮ ಭಕ್ತನಾದ ಹಿರಿಯ ಕೆಂಪೇಗೌಡನು ಅನೇಕ ಛತ್ರ ಮತ್ತು ಅಗ್ರಹಾರಗಳನ್ನು ಕಟ್ಟಿಸಿದನು. ಧರ್ಮಪ್ರಭುವಾಗಿ ಆಳಿದ ಇವನಿಗೆ 'ಪ್ರಜಾವತ್ಸಲ' ಎಂಬ ಬಿರುದಿತ್ತು.

**ಇಮ್ಮಡಿ ಕೆಂಪೇಗೌಡ (ಸುಮಾರು ಸಾ.ಶ. 1597–1641) :** ಇಮ್ಮಡಿ ಕೆಂಪೇಗೌಡನು ಹಿರಿಯ ಕೆಂಪೇಗೌಡನ ಮಗ. ಇವನ ಕಾಲದಲ್ಲಿ ವಿಜಯಪುರದ ಆದಿಲ್ ಷಾಹಿಗಳ ದಂಡನಾಯಕನಾದ ರಣದುಲ್ಲಾಖಾನ್ ಸಾ.ಶ 1638ರಲ್ಲಿ ಬೆಂಗಳೂರನ್ನು ವಶಪಡಿಸಿಕೊಂಡನು. ಅನಂತರ ಇಮ್ಮಡಿ ಕೆಂಪೇಗೌಡನು ಮಾಗಡಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಮಾಗಡಿ ಮತ್ತು ಕುಣಿಗಲ್ ಸೀಮೆಗಳನ್ನು ಆಳತೊಡಗಿದನು. ಹೀಗಾಗಿ ಈ ಮನೆತನದ ದೊರೆಗಳನ್ನು ಮಾಗಡಿ ಕೆಂಪೇಗೌಡರೆಂದು ಕರೆಯುವ ವಾಡಿಕೆಯಿದೆ. ಎರಡನೇ ಕೆಂಪೇಗೌಡನು ಬೆಂಗಳೂರು ನಗರದ ಎಲ್ಲೆಕಟ್ಟುಗಳನ್ನು ಗುರುತಿಸಿ ನಾಲ್ಕು ಕಾವಲು ಗೋಪುರಗಳನ್ನು ಕಟ್ಟಿಸಿದನು. ಇವನ ಕಾಲದಲ್ಲಿ ಬೆಂಗಳೂರು ನೇಯ್ಗೆಯ ದೊಡ್ಡ ಕೇಂದ್ರವಾಗಿ ಬೆಳೆಯಿತು. ಮಾಗಡಿ, ಸಾವನದುರ್ಗ, ಹುಲಿಯೂರುದುರ್ಗ, ಹುತ್ರಿದುರ್ಗ ಮೊದಲಾದ ಕೋಟೆಗಳನ್ನು ಕಟ್ಟಿಸಿದನು. ತನ್ನ ತಂದೆಯಂತೆ ಇವನು ಕೂಡ ಹೊಸ ಹಳ್ಳಿಗಳು, ದೇವಾಲಯಗಳು ಮತ್ತು ಕೆರೆಗಳನ್ನು ನಿರ್ಮಾಣ ಮಾಡಿಸಿದನು.

ಇಮ್ಮಡಿ ಕೆಂಪೇಗೌಡನು ತನ್ನ ಮಕ್ಕಳಾದ ಮುಮ್ಮಡಿ ಕೆಂಪೇಗೌಡನಿಗೆ ಮಾಗಡಿ ಸೀಮೆಯನ್ನು, ಇಮ್ಮಡಿ ಹಿರಿಯ ಕೆಂಪೇಗೌಡನಿಗೆ ಕುಣಿಗಲ್ ಸೀಮೆಯನ್ನು ವಹಿಸಿಕೊಟ್ಟನು. ಮುಮ್ಮಡಿ ಕೆಂಪೇಗೌಡನು (ಸುಮಾರು ಸಾ.ಶ. 1641–1674) ನಾಡಿಗೆ ಬರಗಾಲ ಬಂದಿತೆಂದು ಕೆಂಪಸಾಗರ ಎಂಬ ಕೆರೆಯನ್ನು ನಿರ್ಮಾಣ ಮಾಡಿಸಿದನು. ಇಮ್ಮಡಿ ಹಿರಿಯ ಕೆಂಪೇಗೌಡನು (ಸುಮಾರು ಸಾ.ಶ. 1641–1662) ವೀರನು ಮಾತ್ರವಲ್ಲ, ಬಹುಭಾಷಾ ಪಂಡಿತನಾಗಿದ್ದನು. ಇವನಿಗೆ 'ನವ ಕವಿತಾ ಗುಂಭಪುಂಭವಾಣಿ' ಎಂಬ ಬಿರುದಿತ್ತು. ಇವನ ರಾಣಿಯರು ಕುಣಿಗಲ್ ಮತ್ತು ಹುಲಿಯೂರು ದುರ್ಗಗಳಲ್ಲಿ ಅಗ್ರಹಾರ, ಕೆರೆ, ದೇವಾಲಯಗಳನ್ನು ಕಟ್ಟಿಸಿದರು.

ಮುಂದೆ, ಯಲಹಂಕ ನಾಡಪ್ರಭುಗಳ ಆಳ್ವಿಕೆಯ ಪ್ರದೇಶಗಳು ಮೈಸೂರು ಸಂಸ್ಥಾನದೊಂದಿಗೆ ಸೇರ್ಪಡೆಯಾಯಿತು.

**ಕಾಲಗಣನೆ (ಸಾ.ಶ)**

| | | |
|---|---|---|
| ಹಿರಿಯ ಕೆಂಪೇಗೌಡ | – | ಸುಮಾರು ಸಾ.ಶ. 1532–1597 |
| ಇಮ್ಮಡಿ ಕೆಂಪೇಗೌಡ | – | ಸುಮಾರು ಸಾ.ಶ. 1597–1641 |
| ಮುಮ್ಮಡಿ ಕೆಂಪೇಗೌಡ | – | ಸುಮಾರು ಸಾ.ಶ. 1641–1674 |
| ಇಮ್ಮಡಿ ಹಿರಿಯ ಕೆಂಪೇಗೌಡ | – | ಸುಮಾರು ಸಾ.ಶ. 1641–1662 |

**ನಿಮಗೆ ತಿಳಿದಿರಲಿ**

ಇಮ್ಮಡಿ ಕೆಂಪೇಗೌಡನು ಕಟ್ಟಿಸಿದ ಕಾವಲು ಗೋಪುರಗಳು ಇಲ್ಲಿವೆ:
ಉತ್ತರದಲ್ಲಿ–ಮೇಖ್ರಿವೃತ್ತ; ದಕ್ಷಿಣದಲ್ಲಿ–ಲಾಲ್‌ಬಾಗ್; ಪೂರ್ವದಲ್ಲಿ–ಅಲಸೂರು; ಮತ್ತು ಪಶ್ಚಿಮದಲ್ಲಿ–ಗವಿಗಂಗಾಧರೇಶ್ವರ.

**I ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಯಲಹಂಕ ನಾಡಪ್ರಭುಗಳ ಮನೆತನದ ಸ್ಥಾಪಕ ಯಾರು?
2. ಬೆಂಗಳೂರು ನಗರದ ಸ್ಥಾಪಕ ಯಾರು?
3. ಯಲಹಂಕ ನಾಡ ಪ್ರಭುಗಳ ರಾಜಧಾನಿಗಳನ್ನು ಹೆಸರಿಸಿ.
4. ಇಮ್ಮಡಿ ಹಿರಿಯ ಕೆಂಪೇಗೌಡನಿಗಿದ್ದ ಬಿರುದು ಯಾವುದು?

**II ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿರಿ.**

1. ಹಿರಿಯ ಕೆಂಪೇಗೌಡನ ಸಾಧನೆಗಳು ಯಾವುವು?
2. ಇಮ್ಮಡಿ ಕೆಂಪೇಗೌಡನನ್ನು ಕುರಿತು ಟಿಪ್ಪಣಿ ಬರೆಯಿರಿ.

**ಚಟುವಟಿಕೆ:** ಯಲಹಂಕ ನಾಡಪ್ರಭುಗಳು ಬೆಂಗಳೂರು ಹಾಗೂ ಸುತ್ತಮುತ್ತ ಅನೇಕ ಕೆರೆಗಳನ್ನು ನಿರ್ಮಿಸಿದರು. ಇಂದು ಹೆಚ್ಚಿನ ಕೆರೆಗಳು ಮಾಯವಾಗಿವೆ ಇದರ ಪರಿಣಾಮವೇನೆಂಬ ವಿಚಾರ ಚರ್ಚಿಸಿ ಸರ್ಕಾರಕ್ಕೆ ಕಳುಹಿಸಲು ಒಂದು ವರದಿ ತಯಾರಿಸಿ.

☆ ☆ ☆

| ಪಾಠ 5 | ಮೈಸೂರು ಒಡೆಯರು |
|---|---|

F3I5T3

**ಪಾಠದ ಪರಿಚಯ**

ಮೈಸೂರು ಒಡೆಯರ ರಾಜಮನೆತನವನ್ನು ಪರಿಚಯಿಸುವುದು. ಅನಂತರ ಹೈದರಾಲಿ ಮತ್ತು ಟಿಪ್ಪುಸುಲ್ತಾನರನ್ನು ಪರಿಚಯಿಸುವುದು. ನಾಲ್ವಡಿ ಕೃಷ್ಣರಾಜ ಒಡೆಯರು ಸೇರಿದಂತೆ ಪ್ರಮುಖ ಒಡೆಯರನ್ನು ಪರಿಚಯಿಸುವುದು. ಹಾಗೆಯೇ ಪ್ರಮುಖ ದಿವಾನರುಗಳನ್ನು ಪರಿಚಯಿಸುವುದು.

ಮೈಸೂರು ಒಡೆಯರು ವಿಜಯನಗರ ಅರಸು ಮನೆತನದ ಪರಂಪರೆಯನ್ನು ಮುಂದುವರೆಸಿ, ಸಮಾಜ – ಸಂಸ್ಕೃತಿಗೆ ಅಪಾರ ಸೇವೆ ಸಲ್ಲಿಸಿದರು. ಸುದೀರ್ಘಕಾಲ ಆಳ್ವಿಕೆ ನಡೆಸಿ ನಾಡಿನ ಜನರ ಪ್ರೀತಿ ಗೌರವಗಳಿಗೆ ಪಾತ್ರರಾದರು.

**ಸಾಮರ್ಥ್ಯಗಳು**

1) ಚಿಕ್ಕದೇವರಾಜನ ಜನಮುಖಿ ಸಾಧನೆಗಳನ್ನು ಮೆಚ್ಚುವುದು.
2) ಬ್ರಿಟಿಷರ ವಿರುದ್ಧ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ನಡೆಸಿದ ಹೋರಾಟಗಳ ಕಾರಣ ಮತ್ತು ಪರಿಣಾಮಗಳನ್ನು ಅರ್ಥೈಸಿಕೊಳ್ಳುವುದು.
3) ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ಅವರ ಸಾಧನೆಗಳನ್ನು ತಿಳಿಯುವುದು.
4) ನಾಲ್ವಡಿ ಕೃಷ್ಣರಾಜ ಒಡೆಯರ ಸಮಾಜಮುಖಿ ಸಾಧನೆಗಳನ್ನು ಅರಿಯುವುದು.
5) ಭೂಪಟದಲ್ಲಿ ಮೈಸೂರು ರಾಜ್ಯದ ಚಾರಿತ್ರಿಕ ಸ್ಥಳಗಳನ್ನು ಗುರುತಿಸುವುದು.



## ಪ್ರಮುಖ ಮೈಸೂರು ಒಡೆಯರು

ಯದುರಾಯ ಮೈಸೂರು ಒಡೆಯರ ಮೊದಲ ದೊರೆ (ಸಾ.ಶ. 1399–1423). ರಾಜ್ಯದ ಲಾಂಛನ ಗಂಡಭೇರುಂಡ. ಒಡೆಯರ ಆರಂಭಿಕ ರಾಜಧಾನಿ ಶ್ರೀರಂಗಪಟ್ಟಣವಾಗಿತ್ತು.

### ಚಿಕ್ಕದೇವರಾಜ ಒಡೆಯರು (ಸಾ.ಶ. 1673–1704)


ಚಿಕ್ಕದೇವರಾಜ ಒಡೆಯರು

ಆರಂಭಿಕ ಅರಸರಲ್ಲಿ ಚಿಕ್ಕದೇವರಾಜ ಒಡೆಯರು ಪ್ರಮುಖರು. ಇವರು ಜನಮುಖಿ ಸಾಧನೆಗಳನ್ನು ಮಾಡಿದರು. ಚಿಕ್ಕದೇವರಾಜ ಒಡೆಯರು ಹದಿನೆಂಟು ಶಾಖೆಗಳುಳ್ಳ 'ಅಠಾರ' ಕಛೇರಿಯನ್ನು ತೆರೆದರು. ಶ್ರೀರಂಗಪಟ್ಟಣದ ಬಳಿ ಪಶ್ಚಿಮದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿ ಕೃಷಿಗೆ ನೀರು

ಒದಗಿಸಿದರು. ಇವರು ಆಡಳಿತದಲ್ಲಿ ಮಿತವ್ಯಯ ಜಾರಿಗೆ ತಂದು, ರಾಜ್ಯದ ಭಂಡಾರವನ್ನು ಶ್ರೀಮಂತಗೊಳಿಸಿ 'ನವಕೋಟಿ ನಾರಾಯಣ' ಎಂಬ ಬಿರುದಿಗೆ ಪಾತ್ರರಾದರು.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಮೈಸೂರು ಸಂಪದ್ಭರಿತ ರಾಜ್ಯವಾಗಿತ್ತು. ಇವರ ಮರಣ ನಂತರ ದುರ್ಬಲ ಅರಸರು ಆಳಿದರು. ಇದರಿಂದಾಗಿ ದಳವಾಯಿಗಳೆಂಬ ಅಧಿಕಾರಿಗಳು ಆಡಳಿತವನ್ನು ರಾಜನ ಹೆಸರಿನಲ್ಲಿ ನಡೆಸಿದರು.



ಅಠಾರಾ ಕಛೇರಿ, ಮೈಸೂರು



## ಹೈದರಾಲಿ ಮತ್ತು ಟಿಪ್ಪು ಸುಲ್ತಾನ್

### ಹೈದರಾಲಿ (ಸಾ.ಶ. 1761 –1782)



ಹೈದರಾಲಿ

ಹೈದರಾಲಿಯು ದಳವಾಯಿ ನಂಜರಾಜಯ್ಯನ ಸೇನೆಯಲ್ಲಿದ್ದ ಸಮರ್ಥ ಸೇನಾನಿಯಾಗಿದ್ದನು. ಶೂರನೂ, ಸಾಹಸಿಯೂ ಆಗಿದ್ದನು. ಯುದ್ಧಗಳಲ್ಲಿ ಜಯಗಳಿಸಿ ಹಂತಹಂತವಾಗಿ ತನ್ನ ಸೇನಾಬಲ ಮತ್ತು ಧನಬಲವನ್ನು ಹೆಚ್ಚಿಸಿಕೊಂಡನು. ಹೀಗೆ ರಾಜನ ಗೌರವಕ್ಕೆ ಪಾತ್ರನಾದನು. ಅಲ್ಲದೆ, ಮೈಸೂರು ರಾಜ್ಯವನ್ನು ಸಂದಿಗ್ಧ ರಾಜಕೀಯದಿಂದ ಪಾರುಮಾಡಿದನು. ರಾಜಧಾನಿಯಲ್ಲಿ ಸೈನಿಕ ಬಂಡಾಯ ಕಾಣಿಸಿಕೊಂಡಾಗ ಹೈದರಾಲಿ ದಳವಾಯಿ ನಂಜರಾಜನನ್ನು ನಿವೃತ್ತಿಗೊಳಿಸಿ ರಾಜ್ಯಾಧಿಕಾರವನ್ನು ಕೈಗೆತ್ತಿಕೊಂಡನು. ರಾಜ್ಯದ ಕಾರ್ಯಕರ್ತನೆಂದು ಕರೆದುಕೊಂಡು ಎರಡನೆಯ ಕೃಷ್ಣರಾಜ ಒಡೆಯರನ್ನು ಬದಿಗೊತ್ತಿದನು.

ಅಧಿಕಾರ ವಹಿಸಿಕೊಂಡ ಒಡನೆಯೇ ಹೈದರಾಲಿಯು ರಾಜ್ಯದ ವಿಸ್ತರಣೆಯಲ್ಲಿ ತೊಡಗಿದನು. ಕೆಳದಿ ರಾಜರನ್ನು ಸೋಲಿಸಿದನು. ಅಲ್ಲಿನ ಅಪಾರವಾದ ಧನಕನಕಾದಿಗಳನ್ನು

ವಶಪಡಿಸಿಕೊಂಡು ತನ್ನ ಧನಬಲವನ್ನು ಇನ್ನಷ್ಟು ಹೆಚ್ಚಿಸಿಕೊಂಡನು. ಚಿತ್ರದುರ್ಗ ಕೋಟೆಯನ್ನು ಪ್ರಯಾಸದಿಂದ ವಶಪಡಿಸಿಕೊಂಡನು.

**ಬ್ರಿಟಿಷರೊಂದಿಗೆ ಹೋರಾಟ :** ವ್ಯಾಪಾರಿಗಳಾಗಿ ಭಾರತಕ್ಕೆ ಬಂದಿದ್ದ ಬ್ರಿಟಿಷರು ಕ್ರಮೇಣ ರಾಜಕೀಯ ಶಕ್ತಿಯಾಗಿ ಎದ್ದುನಿಂತರು. ಹೈದರಾಲಿ ದಕ್ಷಿಣ ಭಾರತದಲ್ಲಿ ರಾಜ್ಯ ವಿಸ್ತರಣೆ ಮಾಡುವುದನ್ನು ಅವರು ಸಹಿಸದಾದರು. ಹೀಗಾಗಿ ಹೈದರಾಲಿ ಮತ್ತು ಬ್ರಿಟಿಷರ ನಡುವೆ ಸಂಘರ್ಷ ಅನಿವಾರ್ಯವಾಯಿತು.

ಹೈದರಾಲಿ ಮತ್ತು ಅವನ ಮಗನಾದ ಟಿಪ್ಪು ಸುಲ್ತಾನ್ ಬ್ರಿಟಿಷರೊಡನೆ ಮಾಡಿದ ನಾಲ್ಕು ಯುದ್ಧಗಳನ್ನು 'ಆಂಗ್ಲೋ ಮೈಸೂರು ಯುದ್ಧಗಳು' ಅಥವಾ 'ಮೈಸೂರು ಯುದ್ಧಗಳು' ಎನ್ನುವರು.

ಮೊದಲನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಹೈದರಾಲಿಯ ಆಕ್ರಮಣದಿಂದ ಬ್ರಿಟಿಷರು ಅಪಾರ ಹಾನಿಗೊಳಗಾದರು. ಅನಿವಾರ್ಯವಾಗಿ ಬ್ರಿಟಿಷರು ಮದ್ರಾಸ್ ಒಪ್ಪಂದಕ್ಕೆ ಮುಂದಾದರು. ಮದ್ರಾಸ್ ಒಪ್ಪಂದದ ಮುಖ್ಯ ತಿರುಳೆಂದರೆ, ಹೈದರಾಲಿ ಅಥವಾ ಬ್ರಿಟಿಷರ ಮೇಲೆ ಯಾವುದೇ ಶತ್ರು ರಾಜ್ಯ ಆಕ್ರಮಣ ಮಾಡಿದಲ್ಲಿ ಪರಸ್ಪರ ರಾಜ್ಯಗಳು ನೆರವಿಗೆ ಧಾವಿಸಬೇಕು ಎಂಬುದಾಗಿತ್ತು. ಈ ಒಪ್ಪಂದವು ಹೈದರಾಲಿಯ ಘನತೆಯನ್ನು ಹೆಚ್ಚಿಸಿತು.

ಕೆಲವು ವರ್ಷಗಳ ನಂತರ ಮರಾಠರು ಮೈಸೂರಿನ ಮೇಲೆ ಆಕ್ರಮಣ ಮಾಡಿದರು. ಆ ಸಂದರ್ಭದಲ್ಲಿ ಮದ್ರಾಸ್ ಒಪ್ಪಂದದಂತೆ ಬ್ರಿಟಿಷರು ಹೈದರಾಲಿಯ ಸಹಾಯಕ್ಕೆ ಧಾವಿಸದೆ ತಟಸ್ಥರಾದರು. ಇದರಿಂದ ಹೈದರಾಲಿ ಸಿಡಿಮಿಡಿಗೊಂಡು ಬ್ರಿಟಿಷರನ್ನು ಯುದ್ಧಕ್ಕೆಳೆದನು. ಈ ಯುದ್ಧವೇ ಎರಡನೇ ಆಂಗ್ಲೋ ಮೈಸೂರು ಯುದ್ಧ. ಯುದ್ಧ ನಡೆಯುತ್ತಿದ್ದಾಗಲೇ ಹೈದರಾಲಿಯು ಅನಾರೋಗ್ಯದಿಂದ ಮರಣವನ್ನಪ್ಪಿದನು. ಯುದ್ಧವನ್ನು ಟಿಪ್ಪು ಸುಲ್ತಾನ್‌ನು ಮುಂದುವರೆಸಿದನು.

**ಹೈದರಾಲಿಯ ಸಾಧನೆಗಳು:** ಹೈದರಾಲಿ ಸಮಕಾಲೀನ ರಾಜಕೀಯವನ್ನು ಚೆನ್ನಾಗಿ ತಿಳಿದುಕೊಂಡಿದ್ದನು. ಇವನಿಗೆ ಓದುಬರಹ ಬರುತ್ತಿರಲಿಲ್ಲವಾದರೂ ಕನ್ನಡ ಸೇರಿದಂತೆ ಹಲವು ಭಾಷೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದನು. ಇವನು ಮೈಸೂರು ರಾಜ್ಯದ ವಿಸ್ತಾರವನ್ನು ಇಮ್ಮಡಿಗೊಳಿಸಿದನು. ಶೂರ ಯೋಧನೂ ದಕ್ಷ ಆಡಳಿತಗಾರನೂ ಆಗಿದ್ದನು. ಹೈದರಾಲಿಗೆ ಕರ್ನಾಟಕ ಇತಿಹಾಸದಲ್ಲಿ ಪ್ರಮುಖ ಸ್ಥಾನವಿದೆ. ಬೆಂಗಳೂರಿನ ಸುಂದರ ಉದ್ಯಾನವನ ಲಾಲ್‌ಬಾಗ್ ಇವನಿಂದಲೇ ಆರಂಭವಾಯಿತು.

## ಟಿಪ್ಪು ಸುಲ್ತಾನ್ (ಸಾ.ಶ. 1782–1799)


ಹೈದರಾಲಿಯ ಮಗನೇ ಟಿಪ್ಪು ಸುಲ್ತಾನ್. ತನ್ನ ತಂದೆಯ ಕಾಲದ ಯುದ್ಧಗಳಲ್ಲಿ ಪಾಲ್ಗೊಂಡು ವಿಜಯವನ್ನು ಗಳಿಸಿದ ಟಿಪ್ಪು ಸುಲ್ತಾನ್ ಧೀರ ತರುಣನಾಗಿದ್ದನು. ತನ್ನನ್ನು ಸುಲ್ತಾನನೆಂದು ಘೋಷಿಸಿಕೊಂಡನು.

ತಂದೆಯ ಮರಣಾನಂತರ ಆಗ ನಡೆಯುತ್ತಿದ್ದ ಎರಡನೇ ಆಂಗ್ಲೋ ಮೈಸೂರು ಯುದ್ಧವನ್ನು ಟಿಪ್ಪು ಮುಂದುವರೆಸಿದನು. ಆತನ ಸಹಾಯಕ್ಕೆ ಯಾರೂ ಬರಲಿಲ್ಲ. ಟಿಪ್ಪು ಏಕಾಂಗಿಯಾಗಿ ಬ್ರಿಟಿಷರನ್ನು ಎದುರಿಸಿದನು. ಅಂತಿಮವಾಗಿ ಬ್ರಿಟಿಷರು 'ಮಂಗಳೂರು ಶಾಂತಿ ಒಪ್ಪಂದ' ಮಾಡಿಕೊಂಡರು. ಮಂಗಳೂರು ಒಪ್ಪಂದ ಉಭಯ ಪಕ್ಷದವರಿಗೂ ಹಿತಕರವಾಗಿದ್ದಿತು. ಇಬ್ಬರೂ ಗೆದ್ದಿದ್ದ ಪ್ರದೇಶಗಳನ್ನು ಬಿಟ್ಟುಕೊಟ್ಟು ಯುದ್ಧ ಖೈದಿಗಳನ್ನು ಹಿಂತಿರುಗಿಸಿದರು. ಇದು ಟಿಪ್ಪುವಿನ ಘನತೆಯನ್ನು ಹೆಚ್ಚಿಸಿತು.


ಟಿಪ್ಪು ಸುಲ್ತಾನ್

ಅಲ್ಪಕಾಲದಲ್ಲಿಯೇ ಟಿಪ್ಪು ಮತ್ತು ಬ್ರಿಟಿಷರ ನಡುವೆ ಇನ್ನೆರಡು ಯುದ್ಧಗಳು ನಡೆದವು. ಟಿಪ್ಪು ಮತ್ತು ಬ್ರಿಟಿಷರ ನಡುವಣ ಪರಸ್ಪರ ದ್ವೇಷ ಮತ್ತು ಅಪನಂಬಿಕೆಯೇ ಈ ಯುದ್ಧಗಳಿಗೆ ಮೂಲ ಕಾರಣವಾಗಿತ್ತು.

ಮೂರನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಬ್ರಿಟಿಷರು ಆಕ್ರಮಣ ಮಾಡುತ್ತಾ ರಾಜಧಾನಿಯಾದ ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಿದರು. ಬೇರೆ ಮಾರ್ಗ ತೋಚದೆ ಟಿಪ್ಪು ಬ್ರಿಟಿಷರೊಡನೆ ಶ್ರೀರಂಗಪಟ್ಟಣ ಶಾಂತಿ ಒಪ್ಪಂದ ಮಾಡಿಕೊಂಡನು. ಶಾಂತಿ ಒಪ್ಪಂದದಂತೆ ಇವನು ತನ್ನ ಅರ್ಧರಾಜ್ಯವನ್ನು ಬ್ರಿಟಿಷರಿಗೆ ಒಪ್ಪಿಸಿದನು. ಯುದ್ಧ ನಷ್ಟವಾಗಿ 330 ಲಕ್ಷ ರೂಪಾಯಿ ಪರಿಹಾರ ಧನವನ್ನು ಅವರಿಗೆ ನೀಡಬೇಕಾಯಿತು. ಅದನ್ನು ಕೊಡುವವರೆಗೆ ತನ್ನಿಬ್ಬರು ಮಕ್ಕಳನ್ನು ಬ್ರಿಟಿಷರಿಗೆ ಒತ್ತೆಯಾಳಾಗಿ ಕೊಡಬೇಕಾಯಿತು.




ಯುದ್ಧದ ಪರಿಣಾಮವಾಗಿ ಟಿಪ್ಪು ಅವಮಾನಗೊಂಡನು. ಬ್ರಿಟಿಷರನ್ನು ಭಾರತದಿಂದ ಹೊರದಬ್ಬಲು ದೃಢಸಂಕಲ್ಪ ಮಾಡಿದನು. ಇದು ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧಕ್ಕೆನಾಂದಿಯಾಯಿತು. ಯುದ್ಧದಲ್ಲಿ ಶ್ರೀರಂಗಪಟ್ಟಣವು ಮುತ್ತಿಗೆಗೊಳಗಾಯಿತು. ಟಿಪ್ಪು ವೀರಾವೇಶದಿಂದ ಹೋರಾಡುತ್ತಲೇ 1799ರಲ್ಲಿ ಅಸುನೀಗಿದನು. ಟಿಪ್ಪುವು 'ಮೈಸೂರಿನ ಹುಲಿ'ಯೆಂದು ಪ್ರಸಿದ್ಧನಾಗಿದ್ದಾನೆ.

ಟಿಪ್ಪು ಸುಲ್ತಾನನ ಮರಣಾನಂತರ ಮೈಸೂರು ರಾಜ್ಯ ಬ್ರಿಟಿಷರ ವಶವಾಯಿತು. ಬ್ರಿಟಿಷರು ಒಡೆಯರ್ ರಾಜವಂಶದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯವನ್ನು ಹಸ್ತಾಂತರಿಸಿದರು. ಆದರೆ ಮೈಸೂರು ರಾಜ್ಯ ಬ್ರಿಟಿಷರ ಆಶ್ರಿತ ರಾಜ್ಯವಾಯಿತು.

## ಟಿಪ್ಪುವಿನ ವ್ಯಕ್ತಿತ್ವ ಮತ್ತು ಸಾಧನೆಗಳು

• ವಿಜ್ಞಾನ ಕ್ಷೇತ್ರದ ಸಾಧನೆಗಳ ಬಗ್ಗೆ ಅವನಿಗೆ ಉತ್ತಮ ತಿಳುವಳಿಕೆ ಇತ್ತು. ಅವನು ಒಳ್ಳೆಯ ಗ್ರಂಥಾಲಯವನ್ನು

ಹೊಂದಿದ್ದನು. ಬೆಂಗಳೂರಿನ ಅರಮನೆ, ಶ್ರೀರಂಗಪಟ್ಟಣದ ಬೇಸಿಗೆ ಅರಮನೆ (ದರಿಯಾ ದೌಲತ್) ನಿರ್ಮಾಣವನ್ನು ಟಿಪ್ಪು ಮಾಡಿಸಿದನು. ಬೇಸಿಗೆ ಅರಮನೆಯ ಗೋಡೆ, ಚಾವಣಿ ಮತ್ತು ಕಂಬಗಳ ಮೇಲೆ ಚಾರಿತ್ರಿಕ ಸಂಗತಿಗಳನ್ನು ಆಕರ್ಷಕವಾಗಿ ಚಿತ್ರಿಸಲಾಗಿದೆ.



ಬೆಂಗಳೂರು ಅರಮನೆ



ದರಿಯಾ ದೌಲತ್, ಶ್ರೀರಂಗಪಟ್ಟಣ

- ಟಿಪ್ಪು ರಾಜ್ಯದ ಸಮೃದ್ಧಿಗಾಗಿ ಬಹಳವಾಗಿ ಶ್ರಮಿಸಿದನು. ರೇಷ್ಮೆ ವ್ಯವಸಾಯವನ್ನು ರಾಜ್ಯದಲ್ಲಿ ವ್ಯಾಪಕವಾಗಿ ಜನಪ್ರಿಯಗೊಳಿಸಿದ್ದು ಅವನ ಮುಖ್ಯ ಸಾಧನೆಯಾಗಿದೆ. ಫ್ರೆಂಚ್ ಅಧಿಕಾರಿಗಳ

ನೆರವಿನಿಂದ ತನ್ನ ಸೈನ್ಯವನ್ನು ಆಧುನಿಕವಾಗಿ ಸಜ್ಜುಗೊಳಿಸಿದನು. ಶ್ರೀರಂಗಪಟ್ಟಣದಲ್ಲಿ ಫಿರಂಗಿಗಳನ್ನು ಎರಕ ಹೊಯ್ಯುತ್ತಿದ್ದರು. ಟಿಪ್ಪು ರಾಕೆಟ್ ಬಳಸುವ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡದ್ದು ಒಂದು ವಿಶೇಷ.

- ಟಿಪ್ಪು ಕೆಲವು ಹಿಂದೂ ದೇವಾಲಯಗಳಿಗೆ ದಾನದತ್ತಿಯನ್ನೂ ಶೃಂಗೇರಿ ಮಠಕ್ಕೆ ದೇಣಿಗೆಯನ್ನೂ ನೀಡಿದನು. ಅವನು ಭೂಹಿಡುವಳಿಯಲ್ಲಿ ಸುಧಾರಣೆ ಮಾಡಿ ರೈತರಿಗೆ ಸುಲಭ ಕಂತಿನ ಸಾಲ ಒದಗಿಸುವುದನ್ನು ಒಳಗೊಂಡಂತೆ ಅನೇಕ ಸೌಲಭ್ಯಗಳನ್ನು ಒದಗಿಸಿದನು.
- ಶ್ರೀರಂಗಪಟ್ಟಣದಲ್ಲಿರುವ ಹೈದರಾಲಿಯ ಸಮಾಧಿ ಮತ್ತು ಜುಮ್ಮಾ ಮಸೀದಿ ಟಿಪ್ಪುವಿನ ಭವ್ಯ ನಿರ್ಮಾಣಗಳು. ಮಸೀದಿಯ ಉನ್ನತವಾದ ಮಿನಾರುಗಳು ಆಕರ್ಷಕವಾಗಿವೆ. ಶ್ರೀರಂಗಪಟ್ಟಣ ಮತ್ತು ಬೆಂಗಳೂರಿನಲ್ಲಿ ಟಂಕಶಾಲೆಗಳನ್ನು ನಿರ್ಮಿಸಿದನು.



ಜುಮ್ಮಾ ಮಸೀದಿ, ಶ್ರೀರಂಗಪಟ್ಟಣ



## ಮುಮ್ಮಡಿ ಕೃಷ್ಣರಾಜ ಒಡೆಯರು (ಸಾ.ಶ. 1799–1831)

ಟಿಪ್ಪು ಸುಲ್ತಾನನ ಮರಣದೊಂದಿಗೆ ಮೈಸೂರು ಇತಿಹಾಸದಲ್ಲಿ ಹೋರಾಟದ ಯುಗವು ಮುಕ್ತಾಯಗೊಂಡಿತು. ಬ್ರಿಟಿಷರು ಮೈಸೂರು ಸಂಸ್ಥಾನವನ್ನು ವಶಪಡಿಸಿಕೊಂಡು ನಾಲ್ಕು ಭಾಗಗಳಾಗಿ ವಿಭಾಗಿಸಿ ಬ್ರಿಟಿಷರು ಮತ್ತು ಅವರ ಮಿತ್ರರಾದ ಮರಾಠರು ಹಾಗೂ ನಿಜಾಮರು ಮೂರು ಭಾಗಗಳನ್ನು ಹಂಚಿಕೊಂಡರು. ಉಳಿದ ಒಂದು ಭಾಗವನ್ನು ಮೈಸೂರಿನ ಒಡೆಯರಿಗೆ ಬಿಟ್ಟುಕೊಟ್ಟರು. ಅಲ್ಲದೆ, ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಅಧಿಕಾರಕ್ಕೆ ತಂದರು. ಕೃಷ್ಣರಾಜರು ಇನ್ನೂ ಐದು ವರ್ಷದ ಬಾಲಕನಾಗಿದ್ದರಿಂದ ಆಡಳಿತವನ್ನು ಪೂರ್ಣಯ್ಯನವರಿಗೆ ವಹಿಸಿ ದಿವಾನರನ್ನಾಗಿ ನೇಮಿಸಲಾಯಿತು.



ಮುಮ್ಮಡಿ ಕೃಷ್ಣರಾಜ ಒಡೆಯರು

ಮುಮ್ಮಡಿ ಕೃಷ್ಣರಾಜ ಒಡೆಯರು ಶಿವಮೊಗ್ಗ ಜಿಲ್ಲೆಯ ನಗರ (ಬಿದನೂರು) ಪ್ರದೇಶದಲ್ಲಿ ದಂಗೆಯನ್ನು ಸರಿಯಾಗಿ ಹತ್ತಿಕ್ಕಲಿಲ್ಲವೆಂಬ ಕಾರಣದಿಂದ ಬ್ರಿಟಿಷರು 1831 ರಲ್ಲಿ ಅವರನ್ನು ಅಧಿಕಾರದಿಂದ ಕೆಳಗಿಳಿಸಿದರು. ಮೈಸೂರು ಸಂಸ್ಥಾನದಲ್ಲಿ ಕಮೀಷನರ್ ಆಡಳಿತವನ್ನು ಜಾರಿಗೆ ತಂದರು.

## ಕಮೀಷನರುಗಳ ಆಡಳಿತ (ಸಾ.ಶ. 1831–1881)

### ಮಾರ್ಕ್‌ಕಬ್ಬನ್ (ಸಾ.ಶ. 1834–1861)




ಮಾರ್ಕ್‌ಕಬ್ಬನ್

ಮಾರ್ಕ್‌ಕಬ್ಬನ್ ರಾಜ್ಯದಲ್ಲಿ ಅನೇಕ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದರು. ಇವರು ರಾಜಧಾನಿಯನ್ನು ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಿದರು. ಮೈಸೂರನ್ನು ಅನೇಕ ಆಡಳಿತ ಘಟಕಗಳಾಗಿ ವಿಭಾಗಿಸಿ, ಅವುಗಳನ್ನು ಸೂಪರಿಂಟೆಂಡೆಂಟರ ಮೇಲ್ವಿಚಾರಣೆಯಲ್ಲಿರಿಸಲಾಯಿತು. ಆಡಳಿತ ಘಟಕಗಳನ್ನು ಜಿಲ್ಲೆಗಳು ಮತ್ತು ತಾಲೂಕುಗಳನ್ನಾಗಿ ವಿಭಜಿಸಲಾಗಿತ್ತು. ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಗಳನ್ನು ಉತ್ತಮವಾಗಿ ಸಂಘಟಿಸಲಾಯಿತು. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೊಳಿಸಲಾಯಿತು.

ಹೊಸ ರಸ್ತೆಗಳು ನಿರ್ಮಾಣಗೊಂಡವು. ಅದರ ಪರಿಣಾಮದಿಂದ ರಾಜ್ಯದ ಎಲ್ಲಾ ಪ್ರಮುಖ ಪಟ್ಟಣಗಳು ಬೆಂಗಳೂರಿನೊಂದಿಗೆ ನೇರ ಸಂಪರ್ಕಹೊಂದಿದವು. ಸೇತುವೆಗಳು ನಿರ್ಮಾಣವಾದವು ಮತ್ತು ಟೆಲಿಗ್ರಾಫ್ ತಂತಿಗಳನ್ನೂ ಹಾಕಲಾಯಿತು. ಸಾ.ಶ. 1859 ರಲ್ಲಿ ಬೆಂಗಳೂರು ಹಾಗೂ ಜೋಲಾರಪೇಟೆ ಮಧ್ಯೆ ರೈಲು ಮಾರ್ಗವನ್ನು ಹಾಕಲಾರಂಭಿಸಿದರು. ಇದು ಮೈಸೂರು ರಾಜ್ಯದ ಪ್ರಥಮ ರೈಲು ಮಾರ್ಗವಾಗಿತ್ತು. ಇವರು ಸಾ.ಶ. 1861ರಲ್ಲಿ ಕಮೀಷನರ್ ಹುದ್ದೆಗೆ ರಾಜೀನಾಮೆ ನೀಡಿದರು. ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಕಬ್ಬನ್ ಉದ್ಯಾನವನವಿದೆ.

### ಲೂಯಿ ಬೆಂಥಾಮ್ ಬೌರಿಂಗ್ (ಸಾ.ಶ. 1862–1870)



ಲೂಯಿ ಬೆಂಥಾಮ್ ಬೌರಿಂಗ್

ಲೂಯಿ ಬೆಂಥಾಮ್ ಬೌರಿಂಗ್ ಸಾ.ಶ. 1862 ರಲ್ಲಿ ಮುಖ್ಯ ಕಮೀಷನರಾಗಿ ಅಧಿಕಾರ ಸ್ವೀಕರಿಸಿದರು. ಇವರು ಮೈಸೂರು ರಾಜ್ಯದ ಸಮಗ್ರ ಆಡಳಿತವನ್ನು ಪುನರ್ ಸಂಘಟಿಸಿದರು. ನಂದಿದುರ್ಗ, ನಗರ ಮತ್ತು ಅಷ್ಟಗ್ರಾಮಗಳು ಆಡಳಿತದ ಘಟಕಗಳಾಗಿದ್ದವು. ಈ ಘಟಕಗಳ ಮೇಲ್ವಿಚಾರಣೆಯನ್ನು ಕಮೀಷನರರು ನೋಡಿಕೊಳ್ಳುತ್ತಿದ್ದರು. ಭೂ ಕಂದಾಯವನ್ನು ಸುಧಾರಿಸಲಾಯಿತು. ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಗಳನ್ನು ವ್ಯವಸ್ಥಿತವಾಗಿ ಸಂಘಟಿಸಲಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ಶಿಕ್ಷಣದಲ್ಲಿ ಸುಧಾರಣೆಗಳನ್ನು ಜಾರಿಗೊಳಿಸಲಾಯಿತು. ಸಾ.ಶ. 1870 ರಲ್ಲಿ ಬೌರಿಂಗರು ಕಮೀಷನರ್ ಹುದ್ದೆಗೆ ರಾಜೀನಾಮೆ ನೀಡಿದರು. ಕಮೀಷನರ್‌ಗಳು ಮೈಸೂರು ರಾಜ್ಯದ ಅಭಿವೃದ್ಧಿಗೆ ಭದ್ರಬುನಾದಿಯನ್ನು ಹಾಕಿದರು.

## ಹತ್ತನೆಯ ಚಾಮರಾಜ ಒಡೆಯರು (ಸಾ.ಶ. 1881–1894)


ಹತ್ತನೆಯ ಚಾಮರಾಜ ಒಡೆಯರು

ಸಾ.ಶ. 1881 ರಲ್ಲಿ ಹತ್ತನೆಯ ಚಾಮರಾಜ ಒಡೆಯರಿಗೆ ಬ್ರಿಟಿಷರು ರಾಜ್ಯವನ್ನು ಪುನಃ ವಹಿಸಿಕೊಟ್ಟರು. ಇದನ್ನು ಪುನರ್ದಾನ ಎನ್ನುವರು. ಹತ್ತನೆಯ ಚಾಮರಾಜ ಒಡೆಯರ ಕೈಕೆಳಗೆ ಸಿ. ರಂಗಾಚಾರ್ಲು ಹಾಗೂ ಕೆ. ಶೇಷಾದ್ರಿ ಐಯ್ಯರ್‌ರವರು ದಿವಾನರಾಗಿ ಆಡಳಿತ ನಿರ್ವಹಿಸಿದರು. ಹತ್ತನೆಯ ಚಾಮರಾಜರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯು (1881) ಆರಂಭವಾಯಿತು.

## ನಾಲ್ವಡಿ ಕೃಷ್ಣರಾಜ ಒಡೆಯರು (ಸಾ.ಶ. 1902–1940)

ಹತ್ತನೆಯ ಚಾಮರಾಜ ಒಡೆಯರ್ ಕಲ್ಕತ್ತಾಗೆ ತೆರಳಿದ್ದಾಗ ಅಲ್ಲಿಯೇ ಅನಾರೋಗ್ಯದಿಂದ ನಿಧನರಾದರು. ಅವರ ಉತ್ತರಾಧಿಕಾರಿಯಾದವರು ನಾಲ್ವಡಿ ಕೃಷ್ಣರಾಜ ಒಡೆಯರು. ಇವರು ಅಧಿಕಾರಕ್ಕೆ ಬಂದಾಗ (1895) ಕೇವಲ ಹನ್ನೊಂದು ವರ್ಷದ ಬಾಲಕರಾದ್ದರಿಂದ ತಾಯಿ ಕೆಂಪ ನಂಜಮ್ಮಣ್ಣಿಯವರು ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಸಾ.ಶ. 1902ರಿಂದ ನಾಲ್ವಡಿ ಅವರ ನೇರ ಆಳ್ವಿಕೆ ಆರಂಭವಾಗುತ್ತದೆ. ಉತ್ತಮ ಶಿಕ್ಷಣ ಪಡೆದ ಇವರು ಮೈಸೂರು ಸಂಸ್ಥಾನವನ್ನು ತಮ್ಮ ಸುದೀರ್ಘ ಆಳ್ವಿಕೆಯ ಕಾಲದಲ್ಲಿ ಮಾದರಿ ಸಂಸ್ಥಾನವಾಗಿ ರೂಪಿಸಿದರು. ದೂರದರ್ಶಿತ್ವವುಳ್ಳವರೂ, ದೀನದಲಿತರ ಬಗೆಗೆ ಕಳಕಳಿ ಹೊಂದಿದ್ದವರೂ ಆಗಿದ್ದರು. ಸಮಾಜದ ಎಲ್ಲಾ ವರ್ಗದವರಿಗೂ ಆಡಳಿತದಲ್ಲಿ ಅವಕಾಶ ಕಲ್ಪಿಸುವ ಸಲುವಾಗಿ ಶಿಫಾರಸ್ಸುಗಳನ್ನು ಪಡೆಯಲು ಮಿಲ್ಲರ್ ಆಯೋಗ ರಚಿಸಿದರು.


ನಾಲ್ವಡಿ ಕೃಷ್ಣರಾಜ ಒಡೆಯರು

## ನಾಲ್ವಡಿ ಕೃಷ್ಣರಾಜ ಒಡೆಯರ ಪ್ರಮುಖ ಸಾಧನೆಗಳು

ನಾಲ್ವಡಿ ಕೃಷ್ಣರಾಜ ಒಡೆಯರ ಪ್ರಮುಖ ಸಾಧನೆಗಳು ಈ ಕೆಳಕಂಡಂತಿವೆ:

- ಜೆ.ಎನ್. ಟಾಟಾ ಅವರು ಬೆಂಗಳೂರಿನಲ್ಲಿ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು 371 ಎಕರೆ ಭೂಮಿ ಹಾಗೂ ಐದು ಲಕ್ಷಕ್ಕೂ ಅಧಿಕ ಮೊತ್ತದ ಧನ ಸಹಾಯ ನೀಡಿದರು.
- ಸಾ.ಶ. 1907ರಲ್ಲಿ 'ನ್ಯಾಯ ವಿಧಾಯಕ ಸಭೆ'ಯನ್ನು ಸ್ಥಾಪಿಸಿ ಜನಪ್ರತಿನಿಧಿಗಳ ಮೂಲಕ ಜನರ ಸಮಸ್ಯೆಗಳನ್ನು ಚರ್ಚಿಸಲು ಅವಕಾಶ ಕಲ್ಪಿಸಿದರು.
- ಇಂದಿನ ಮೈಸೂರು ಅರಮನೆಯನ್ನು ಸಾ.ಶ. 1910ರಲ್ಲಿ ಪೂರ್ಣಗೊಳಿಸಿದರು.
- ಕೃಷ್ಣರಾಜಸಾಗರ (ಕೆ.ಆರ್.ಎಸ್) ಅಣೆಕಟ್ಟನ್ನು ನಿರ್ಮಾಣ ಮಾಡಿಸುವ ಮೂಲಕ ಸಂಸ್ಥಾನದಲ್ಲಿ ಕೃಷಿ ಅಭಿವೃದ್ಧಿಪಡಿಸಿದರು.
- ಸಾ.ಶ. 1911ರಲ್ಲಿ ಮೈಸೂರು ಸಂಪತ್ ಅಭ್ಯುದಯ ಪರಿಷತ್ತು (ದಿ ಮೈಸೂರು ಎಕನಾಮಿಕ್ ಕಾನ್ಫರೆನ್ಸ್) ಪ್ರಾರಂಭಿಸಿದರು.

- ಹಿಂದುಳಿದ ವರ್ಗಗಳಿಗೆ ಸರ್ಕಾರಿ ಸೇವೆಯಲ್ಲಿ ವಿಶೇಷ ಪ್ರಾತಿನಿಧ್ಯ ನೀಡುವ ಆಜ್ಞೆ ಹೊರಡಿಸಿದರು.
- ಮೊದಲ ಬಾರಿಗೆ ಸ್ತ್ರೀಯರಿಗೂ ಮತಾಧಿಕಾರ ನೀಡಲು ಅನುವು ಮಾಡಿದರು.

ಹೀಗೆ ನಾಲ್ವಡಿ ಅವರು ಶಿಕ್ಷಣ, ಕೈಗಾರಿಕೆ, ಬ್ಯಾಂಕ್ ಮೊದಲಾದ ಕ್ಷೇತ್ರಗಳಲ್ಲಿನ ಪ್ರಗತಿಗೆ ಮಾರ್ಗದರ್ಶಿಯಾಗಿ ಮತ್ತು ಪ್ರೇರಕ ಶಕ್ತಿಯಾಗಿ ನಿಂತರು. ಅವರ ದೂರದೃಷ್ಟಿಯ ಆಲೋಚನೆಗಳಿಗೆ ಕ್ರಿಯಾರೂಪವನ್ನು ಕೊಡುವ ಹಿನ್ನೆಲೆಯಲ್ಲಿ ರಾಜ್ಯದ ಪ್ರಗತಿಗೆ ನೆರವಾಗಬಲ್ಲ ಪ್ರತಿಭಾವಂತರನ್ನು ದಿವಾನರಾಗಿ ನೇಮಿಸಿಕೊಂಡರು. ಅವರಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಸರ್. ಮಿರ್ಜಾ ಇಸ್ಮಾಯಿಲ್ ಪ್ರಮುಖರು.

ನಾಲ್ವಡಿ ಅವರ ಮೈಸೂರು ಸಂಸ್ಥಾನವನ್ನು ಮಹಾತ್ಮ ಗಾಂಧೀಜಿ ಅವರು 'ರಾಮರಾಜ್ಯ'ವೆಂದು ಬಣ್ಣಿಸಿದರು. ನಾಲ್ವಡಿ ಅವರನ್ನು 'ರಾಜರ್ಷಿ' ಎಂದು ಕರೆದರು. 20ನೇ ಶತಮಾನದ ಪೂರ್ವಾರ್ಧದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರಂತಹ ಮತ್ತೊಬ್ಬ ಪ್ರಬುದ್ಧ ಸಂಸ್ಥಾನಿಕ ರಾಜ ಭಾರತದಲ್ಲಿಯೇ ಇರಲಿಲ್ಲ.

ಮೈಸೂರು ಅರಮನೆಯನ್ನು ಹೊಸದಾಗಿ ಸಾ.ಶ. 1910 ರಲ್ಲಿ ಕಟ್ಟಲಾಯಿತು. ಇದಕ್ಕೂ ಮೊದಲಿದ್ದ ಮರದ ಅರಮನೆ ಅಗ್ನಿಗೆ ಆಹುತಿಯಾಗಿ ಭಸ್ಮಗೊಂಡಿತು. ಹೊಸ ಅರಮನೆಯ ನಿರ್ಮಾಣಕಾರ್ಯಕ್ಕೆ ದೇಶವಿದೇಶಗಳಿಂದ ಕುಶಲಕರ್ಮಿಗಳು ಬಂದಿದ್ದರು. ಅರಮನೆಯ ಸಭಾಂಗಣವನ್ನು (ದರ್ಬಾರ್ ಹಾಲ್) ಪ್ರಸಿದ್ಧ ಚಿತ್ರಕಲಾಕಾರ ರಾಜಾರವಿವರ್ಮ ಶೃಂಗರಿಸಿದರು. ಕೃಷ್ಣರಾಜ ಸಾಗರ (ಕೆ.ಆರ್.ಎಸ್.) ಅಣೆಕಟ್ಟನ್ನು ನಿರ್ಮಿಸುವಾಗ ನಾಲ್ವಡಿ ಕೃಷ್ಣರಾಜರಿಗೆ ಹಣಕಾಸಿನ ಸಮಸ್ಯೆ ಉಂಟಾಯಿತು. ಆಗ ರಾಜಪರಿವಾರದವರ ಚಿನ್ನಾಭರಣಗಳನ್ನು ಬಾಂಬೆಯ ಚಿನಿವಾರ ಪೇಟೆಯಲ್ಲಿ ಮಾರಾಟ ಮಾಡಿ, ಬಂದ ಹಣದಲ್ಲಿ ಅಣೆಕಟ್ಟಿನ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿದರು.



ಮೈಸೂರು ಅರಮನೆ

### ಸರ್. ಎಂ. ವಿಶ್ವೇಶ್ವರಯ್ಯ (ಸಾ.ಶ. 1912–1918)

'ಆಧುನಿಕ ಮೈಸೂರಿನ ಶಿಲ್ಪಿ ಮತ್ತು ನಿರ್ಮಾತೃ' ಎಂದು ಪರಿಗಣಿಸಲ್ಪಟ್ಟವರು ಸರ್.ಎಂ. ವಿಶ್ವೇಶ್ವರಯ್ಯ. ಪ್ರತಿಭಾವಂತ ಇಂಜನಿಯರ್ ಆಗಿದ್ದ ಇವರು ಸಾ.ಶ.1909–1912ರವರೆಗೆ ಮೈಸೂರು

ಸಂಸ್ಥಾನದ ಮುಖ್ಯ ಇಂಜನಿಯರ್ ಆಗಿ ಕಾರ್ಯನಿರ್ವಹಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರು ಇವರನ್ನು ಸಾ.ಶ. 1912 ರಲ್ಲಿ ಮೈಸೂರಿನ ದಿವಾನರನ್ನಾಗಿ ನೇಮಿಸಿಕೊಂಡರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮುನ್ನೋಟಕ್ಕೆ ಅನುಗುಣವಾಗಿ ಇವರ ಕಾಲದಲ್ಲಿ ಮೈಸೂರು ಸರ್ವತೋಮುಖ ಅಭಿವೃದ್ಧಿಯನ್ನು ಕಂಡಿತು.



ಸರ್.ಎಂ. ವಿಶ್ವೇಶ್ವರಯ್ಯ

'ಕೈಗಾರಿಕೀಕರಣ ಇಲ್ಲವೆ ವಿನಾಶ' ಎಂಬುದು ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಸಿದ್ಧ ಘೋಷಣೆಯಾಗಿತ್ತು. ಭದ್ರಾವತಿಯಲ್ಲಿನ ಕಬ್ಬಿಣದ ಕಾರ್ಖಾನೆ, ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನಲ್ಲಿ ಸಾಬೂನು ಕಾರ್ಖಾನೆ, ಕೇಂದ್ರ ಕೈಗಾರಿಕಾ ಕಾರ್ಯಗಾರ, ಚರ್ಮ ಹದ ಮಾಡುವ ಕಾರ್ಖಾನೆ ಹಾಗೂ ಲೋಹದ ಕೈಗಾರಿಕೆಗಳನ್ನು ಆರಂಭಿಸಲಾಯಿತು. ವ್ಯಾಪಾರ ಹಾಗೂ ವಾಣಿಜ್ಯಕ್ಕೆ ಪ್ರೋತ್ಸಾಹ ನೀಡಲು ಬೆಂಗಳೂರಿನಲ್ಲಿ ಮೈಸೂರು ಛೇಂಬರ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರಿಯನ್ನು ಸ್ಥಾಪಿಸಲಾಯಿತು. ವ್ಯಾಪಾರ ಮತ್ತು ವಾಣಿಜ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಸಾ.ಶ. 1913 ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಲಾಯಿತು. ಪ್ರತಿಯೊಂದು ದೇಶದ ಪ್ರಗತಿಯು ಮುಖ್ಯವಾಗಿ ಜನರ ಶಿಕ್ಷಣದ ಮೇಲೆ ಅವಲಂಬಿತವಾಗಿರುತ್ತದೆ ಎಂದು ಸರ್.ಎಂ. ವಿಶ್ವೇಶ್ವರಯ್ಯನವರು ನಂಬಿದ್ದರು. ಇವರು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಿದರು. ತಾಂತ್ರಿಕ ಶಿಕ್ಷಣಕ್ಕೆ ಮಹತ್ವ ನೀಡಲಾಯಿತು. ಬೆಂಗಳೂರಿನ ಹೆಬ್ಬಾಳದಲ್ಲಿ ಕೃಷಿ ಶಾಲೆಯೊಂದನ್ನು ಸ್ಥಾಪಿಸಿದರು. ಸಾ.ಶ. 1916 ರಲ್ಲಿ ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾಲಯ ಶೈಕ್ಷಣಿಕ ಕ್ಷೇತ್ರದಲ್ಲಿ ಇವರ ಅತ್ಯಂತ ಮಹತ್ತರ ಸಾಧನೆಯಾಗಿದೆ. ಸಾ.ಶ. 1915 ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಲಾಯಿತು. ಕೃಷ್ಣರಾಜ ಸಾಗರ ಆಣೆಕಟ್ಟೆಯ ನಿರ್ಮಾಣ ಕಾರ್ಯ ಸರ್.ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಮುಂದುವರೆದು ಸಾ.ಶ. 1932ರ ಹೊತ್ತಿಗೆ ಪೂರ್ಣಗೊಂಡಿತು. ಮೈಸೂರು–ಅರಸೀಕೆರೆ ಮತ್ತು ಬೌರಿಂಗ್‌ಪೇಟೆ ಕೋಲಾರ ರೈಲ್ವೆ ಮಾರ್ಗಗಳನ್ನು ಹಾಕಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ ಹಲವು ದೂರದರ್ಶಿತ್ವದ ಯೋಜನೆಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಸಿದವರು ಸರ್.ಎಂ.ವಿಶ್ವೇಶ್ವರಯ್ಯನವರು. ಅಂತಿಮವಾಗಿ ಸಾ.ಶ. 1918ರಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ದಿವಾನ ಪದವಿಗೆ ರಾಜೀನಾಮೆ ನೀಡಿದರು. ಬ್ರಿಟಿಷ್ ಸರಕಾರವು ಇವರ ಸೇವೆಗಾಗಿ 'ಸರ್' ಎಂಬ ಬಿರುದನ್ನು ನೀಡಿತು. ಸಾ.ಶ. 1955 ರಲ್ಲಿ ಭಾರತ ಸರ್ಕಾರವು ಇವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಸರ್.ಎಂ. ವಿಶ್ವೇಶ್ವರಯ್ಯನವರು ಈ ಪ್ರಶಸ್ತಿ ಪಡೆದ ಮೊದಲ ಕನ್ನಡಿಗರು ಎಂಬುದು ಹೆಮ್ಮೆಯ ವಿಚಾರ.




ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು



ಸ್ಟೇಟ್ ಬ್ಯಾಂಕ್ ಆಫ್ ಮೈಸೂರು



ಕೃಷ್ಣರಾಜಸಾಗರ ಅಣೆಕಟ್ಟು



### ಸರ್. ಮಿರ್ಜಾ ಇಸ್ಮಾಯಿಲ್ (ಸಾ.ಶ. 1926–1941)



ಸರ್. ಮಿರ್ಜಾ ಇಸ್ಮಾಯಿಲ್

ದಿವಾನರಾಗಿ ಸೇವೆಗೈದ ಸರ್. ಮಿರ್ಜಾ ಇಸ್ಮಾಯಿಲ್‌ರನ್ನು ಸಹ ಆಧುನಿಕ ಮೈಸೂರಿನ ನಿರ್ಮಾಪಕರಲ್ಲೊಬ್ಬರೆಂದು ಪರಿಗಣಿಸಲಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಶಯದಂತೆ ಇವರು ಕೈಗಾರಿಕೆಗಳ ಅಭಿವೃದ್ಧಿಯನ್ನು ಪ್ರೋತ್ಸಾಹಿಸಿ ಹಲವಾರು ಕೈಗಾರಿಕೆಗಳನ್ನು ಆರಂಭಿಸಿದರು. ಬೆಂಗಳೂರಿನಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್, ಗಾಜಿನ ಕಾರ್ಖಾನೆ, ಪಿಂಗಾಣಿ ಪಾತ್ರೆ ಕಾರ್ಖಾನೆ, ಬೆಳಗೊಳದಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆ, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ, ಶಿವಮೊಗ್ಗದಲ್ಲಿ ಬೆಂಕಿಕಡ್ಡಿ ಕಾರ್ಖಾನೆ ಮತ್ತು ಭದ್ರಾವತಿಯಲ್ಲಿನ ಉಕ್ಕು ಹಾಗೂ ಕಾಗದ ಕಾರ್ಖಾನೆಗಳನ್ನು ಇವರು ಸ್ಥಾಪಿಸಿದರು. ಜಕ್ಕೂರಿನಲ್ಲಿ ವಿಮಾನ ನಿಲ್ದಾಣವನ್ನು ನಿರ್ಮಿಸಿದರು. ಆಕಾಶವಾಣಿ (ರೇಡಿಯೋ) ಕೇಂದ್ರಗಳನ್ನು ಬೆಂಗಳೂರು ಮತ್ತು ಮೈಸೂರುಗಳಲ್ಲಿ ಆರಂಭಿಸಿದರು.

ಇವರು ಗ್ರಾಮೀಣ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿದರು. ಬದನವಾಳದಲ್ಲಿ ಖಾದಿ ಉತ್ಪಾದನೆಯ ಕೇಂದ್ರವನ್ನು ಸ್ಥಾಪಿಸಿದರು. ಇರ್ವಿನ್ ಕಾಲುವೆ ನಿರ್ಮಿಸಿ ಮಂಡ್ಯ ಜಿಲ್ಲೆಯ ಕೃಷಿ ಭೂಮಿಗೆ ನೀರನ್ನು ಒದಗಿಸಲಾಯಿತು. ಮೈಸೂರನ್ನು ಹೂ ತೋಟಗಳು ಮತ್ತು ಉದ್ಯಾನವನಗಳ ನಗರವನ್ನಾಗಿಸಿದರು. ಕೃಷ್ಣರಾಜ ಸಾಗರ ಜಲಾಶಯದ ಹಿಂಭಾಗದಲ್ಲಿ ಬೃಂದಾವನ ಉದ್ಯಾನವನವನ್ನು ನಿರ್ಮಿಸಿದರು.



ಬೃಂದಾವನ ಉದ್ಯಾನವನ

ಬೆಂಗಳೂರಿನಲ್ಲಿ 'ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ' (ನಿಮ್ಹಾನ್ಸ್), ಕೋಲಾರದಲ್ಲಿ ನರಸಿಂಹರಾಜ ಆಸ್ಪತ್ರೆ, ಶಿವಮೊಗ್ಗದಲ್ಲಿ ಮೆಗ್ಗಾನ್ ಆಸ್ಪತ್ರೆ ಮತ್ತು ಮೈಸೂರಿನಲ್ಲಿ ವಾಣಿವಿಲಾಸ ಆಸ್ಪತ್ರೆಗಳು ಇವರ ಕಾಲದಲ್ಲಿಯೇ ಆರಂಭವಾದವು.

ಶಿಕ್ಷಣದ ಪ್ರೋತ್ಸಾಹಕ್ಕಾಗಿ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ನು ಜಾರಿಗೊಳಿಸಿ, ಖಾಸಗಿ ಶಾಲೆಗಳಿಗೆ ಅನುದಾನವನ್ನು ನೀಡಲಾಯಿತು. ಪ್ರೌಢಶಾಲೆಗಳಲ್ಲಿ ಕನ್ನಡ ಮಾಧ್ಯಮದ ಶಿಕ್ಷಣವನ್ನು ಆರಂಭಿಸಲಾಯಿತು. ಹೀಗೆ ಮೈಸೂರನ್ನು ಅಭಿವೃದ್ಧಿಪಡಿಸುವಲ್ಲಿ ಮಿರ್ಜಾ ಇಸ್ಮಾಯಿಲ್‌ರು ಮಹತ್ವದ ಪಾತ್ರ ವಹಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ ಸಹಪಾಠಿಗಳಾಗಿದ್ದ ಮಿರ್ಜಾ ಇಸ್ಮಾಯಿಲರು ನಾಲ್ವಡಿ ಅವರ ದೂರದರ್ಶಿತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾದರು.

ನಾಲ್ವಡಿ ಕೃಷ್ಣರಾಜ ಒಡೆಯರ ಮರಣ ನಂತರ ಜಯಚಾಮರಾಜ ಒಡೆಯರು ಅಧಿಕಾರಕ್ಕೆ ಬಂದರು. ಇವರು ಮೈಸೂರನ್ನು ಆಳಿದ ಕೊನೆಯ ಅರಸರು.

ಭಾರತ ಸ್ವಾತಂತ್ರ್ಯ ಪಡೆದ ನಂತರ ಭಾರತ ಒಕ್ಕೂಟದಲ್ಲಿ ಮೈಸೂರು ಸಂಸ್ಥಾನ ಸೇರಬೇಕೆಂದು ಕೆ.ಸಿ.ರೆಡ್ಡಿ ಅವರ ನೇತೃತ್ವದಲ್ಲಿ ಅರಮನೆ ಸತ್ಯಾಗ್ರಹ ಆರಂಭವಾಯಿತು. ಈ ಸತ್ಯಾಗ್ರಹದ ಫಲವಾಗಿ ಜಯಚಾಮರಾಜ ಒಡೆಯರು ಭಾರತದ ಒಕ್ಕೂಟವನ್ನು ಸೇರಲು ಸಮ್ಮತಿಸಿದರು. ಪರಿಣಾಮವಾಗಿ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ 1947 ಅಕ್ಟೋಬರ್ 24ರಂದು ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಜಯಚಾಮರಾಜ ಒಡೆಯರು ಮೈಸೂರು ರಾಜ್ಯದ ಮೊದಲ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದರು. ಕೆ.ಸಿ.ರೆಡ್ಡಿಯವರು ಮೈಸೂರು ರಾಜ್ಯದ ಮೊದಲ ಮುಖ್ಯ ಮಂತ್ರಿಗಳಾಗಿ ಸೇವೆ ಸಲ್ಲಿಸಿದರು.

**ಕಾಲಗಣನೆ (ಸಾ.ಶ.)**

| | |
|---|---|
| ಚಿಕ್ಕದೇವರಾಜ ಒಡೆಯರು | 1673–1704 |
| ಹೈದರ್ ಅಲಿ | 1761–1782 |
| ಟಿಪ್ಪು ಸುಲ್ತಾನ್ | 1782–1799 |
| ಒಂದನೆಯ ಆಂಗ್ಲೋ ಮೈಸೂರು ಯುದ್ಧ | 1767– 1769 |
| ಎರಡನೆಯ ಆಂಗ್ಲೋ ಮೈಸೂರು ಯುದ್ಧ | 1780– 1784 |
| ಮೂರನೆಯ ಆಂಗ್ಲೋ ಮೈಸೂರು ಯುದ್ಧ | 1790– 1792 |
| ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧ | 1799 |
| ಮಾರ್ಕ್‌ಕಬ್ಬನ್ | 1834–1861 |
| ಲೂಯಿ ಬೆಂಥಾಮ್ ಬೌರಿಂಗ್ | 1862–1870 |
| ಹತ್ತನೆಯ ಚಾಮರಾಜ ಒಡೆಯರು | 1881– 1894 |
| ನಾಲ್ವಡಿ ಕೃಷ್ಣರಾಜ ಒಡೆಯರು | 1902–1940 |
| ಸರ್.ಎಂ. ವಿಶ್ವೇಶ್ವರಯ್ಯ | 1912–1918 |
| ಸರ್. ಮಿರ್ಜಾ ಇಸ್ಮಾಯಿಲ್ | 1926–1941 |

## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಮೈಸೂರು ಒಡೆಯರ ಆರಂಭಿಕ ರಾಜಧಾನಿ________ ಆಗಿತ್ತು.
2. ಎರಡನೇ ಆಂಗ್ಲೋ ಮೈಸೂರು ಯುದ್ಧದ ನಂತರ ಬ್ರಿಟಿಷರು ಟಿಪ್ಪು ಸುಲ್ತಾನನೊಡನೆ ________ ಒಪ್ಪಂದ ಮಾಡಿಕೊಂಡರು.
3. 'ಮೈಸೂರು ಹುಲಿ' ಎಂದು ಪ್ರಸಿದ್ಧರಾದ ವ್ಯಕ್ತಿ________
4. ಮುಮ್ಮಡಿ ಕೃಷ್ಣರಾಜ ಒಡೆಯರ ದಿವಾನರು________
5. ಮೈಸೂರು ಸಂಸ್ಥಾನದಲ್ಲಿ ನ್ಯಾಯವಿಧಾಯಕ ಸಭೆಯು________ರಲ್ಲಿ ಆರಂಭವಾಯಿತು.
6. ಮೈಸೂರು ಸಂಸ್ಥಾನವನ್ನು ಗಾಂಧೀಜಿ ಅವರು ________ ಎಂದು ಬಣ್ಣಿಸಿದರು.
7. 'ಭಾರತ ರತ್ನ' ಪ್ರಶಸ್ತಿ ಪಡೆದ ಮೊದಲ ಕನ್ನಡಿಗ________
8. ಇರ್ವಿನ್ ಕಾಲುವೆಯನ್ನು ನಿರ್ಮಾಣ ಮಾಡಿಸಿದ ದಿವಾನರು________

**II ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಅಠಾರ ಕಛೇರಿಯನ್ನು ಯಾರು ಸ್ಥಾಪಿಸಿದರು?
2. ದರಿಯಾ ದೌಲತ್ ಎಲ್ಲಿದೆ?
3. ಲಾಲ್‌ಬಾಗ್ ಉದ್ಯಾನವನ ಎಲ್ಲಿದೆ? ಅದನ್ನು ಆರಂಭಿಸಿದವರು ಯಾರು?
4. ಟಿಪ್ಪುವಿನ ಮರಣಾನಂತರ ಮೈಸೂರಿನ ಸಿಂಹಾಸನ ಯಾರಿಗೆ ಸೇರಿತು?

5. ಮೈಸೂರು ಸಂಸ್ಥಾನದಲ್ಲಿ ಕಮೀಷನರ್ ಆಡಳಿತ ಏಕೆ ಜಾರಿಗೆ ಬಂತು?

6. ಮೈಸೂರಿನ ಪ್ರಮುಖ ಕಮೀಷನರ್‌ಗಳನ್ನು ಹೆಸರಿಸಿ?

7. ಪುನರ್ದಾನ ಎಂದರೇನು?

8. ಪ್ರಜಾಪ್ರತಿನಿಧಿ ಸಭೆ ಯಾವಾಗ ಆರಂಭವಾಯಿತು?

9. ಕನ್ನಡ ಸಾಹಿತ್ಯ ಪರಿಷತ್ತು ಎಲ್ಲಿದೆ? ಇದು ಯಾವಾಗ ಸ್ಥಾಪನೆಯಾಯಿತು?

10. ಅರಮನೆ ಸತ್ಯಾಗ್ರಹದ ನೇತೃತ್ವ ವಹಿಸಿದ್ದವರು ಯಾರು?

**III ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಹೈದರಾಲಿಯ ಸಾಧನೆಗಳು ಯಾವುವು?

2. ಮೂರನೆಯ ಮೈಸೂರು ಯುದ್ಧದ ಪರಿಣಾಮವೇನು?

3. ಟಿಪ್ಪು ಸುಲ್ತಾನನ ಸಾಧನೆಗಳು ಯಾವುವು?

4. ನಾಲ್ವಡಿ ಕೃಷ್ಣರಾಜ ಒಡೆಯರ ಪ್ರಮುಖ ಸಾಧನೆಗಳನ್ನು ಪಟ್ಟಿ ಮಾಡಿ.

5. ಸರ್ ಎಂ. ವಿಶ್ವೇಶ್ವರಯ್ಯನವರ ಸಾಧನೆಗಳು ಯಾವುವು?

**IV ಈ ಕೆಳಗಿನ 'ಎ' ಪಟ್ಟಿಗೆ ಸಂಬಂಧಿಸಿದ 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| 1. ಚಿಕ್ಕದೇವರಾಜ ಒಡೆಯರು | ಅ) ರಾಜರ್ಷಿ |
| 2. ಟಿಪ್ಪು ಸುಲ್ತಾನ್ | ಆ) ಭಾರತರತ್ನ |
| 3. ನಾಲ್ವಡಿ ಕೃಷ್ಣರಾಜ ಒಡೆಯರು | ಇ) ನವಕೋಟಿ ನಾರಾಯಣ |
| 4. ಸರ್.ಎಂ. ವಿಶ್ವೇಶ್ವರಯ್ಯ | ಈ) ಮೊದಲ ರಾಜ್ಯಪಾಲರು |
| 5. ಜಯಚಾಮರಾಜ ಒಡೆಯರು | ಉ) ಮೈಸೂರು ಹುಲಿ |

**ಚಟುಚಟಿಕೆಗಳು**

1. ಭೂಪಟದಲ್ಲಿ ಮೈಸೂರು ರಾಜ್ಯದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.

2. ಟಿಪ್ಪು ಸುಲ್ತಾನ್ ಭಾರತದಲ್ಲಿ ಪರಕೀಯರ ಆಳ್ವಿಕೆಯಲ್ಲಿ ಕೊನೆಗೊಳಿಸಲು ಪ್ರಯತ್ನಿಸಿದರು. ಆದರೆ ಯಶಸ್ಸನ್ನು ಕಾಣಲಿಲ್ಲ ಏಕೆ? ಚರ್ಚಿಸಿ, ಉತ್ತರ ಬರೆಯಿರಿ.

☆ ☆ ☆

**ಪಾಠ 6**

# ದಿಲ್ಲಿಯ ಸುಲ್ತಾನರು

B9K4L4

## ಪಾಠದ ಪರಿಚಯ

11–12ನೇ ಶತಮಾನಗಳಲ್ಲಿ ಭಾರತದ ಮೇಲೆ ಟರ್ಕರು ಪದೇ ಪದೇ ಎಸಗುತ್ತಿದ್ದ ಸೈನಿಕ ಆಕ್ರಮಣಗಳು ಅಂತಿಮವಾಗಿ ದಿಲ್ಲಿಯ ಸುಲ್ತಾನರ ಆಳ್ವಿಕೆಗೆ (1206–1526) ಕಾರಣವಾದುವು. ಈ ಪಾಠದಲ್ಲಿ ದಿಲ್ಲಿಯ ಸುಲ್ತಾನರ ಆಡಳಿತ, ಅವರ ಕಾಲದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು ಮತ್ತು ವಾಸ್ತುಶಿಲ್ಪ, ಸಾಹಿತ್ಯಗಳಿಗೆ ಅವರು ನೀಡಿದ ಕೊಡುಗೆಯನ್ನು ನಿರೂಪಿಸಲಾಗಿದೆ.

## ಸಾಮರ್ಥ್ಯಗಳು

1] 11–12ನೇ ಶತಮಾನಗಳಲ್ಲಾದ ಐತಿಹಾಸಿಕ ಬೆಳವಣಿಗೆಗಳು ಅಂತಿಮವಾಗಿ ದಿಲ್ಲಿಯ ಸುಲ್ತಾನರ ಆಳ್ವಿಕೆಯ ಸ್ಥಾಪನೆಗೆ ಹೇಗೆ ದಾರಿಮಾಡಿಕೊಟ್ಟವು ಎಂಬುದನ್ನು ಅರ್ಥೈಸಿಕೊಳ್ಳುವುದು.

2] ಸುಲ್ತಾನರ ಆಡಳಿತವು ಭಾರತೀಯ ಸಮಾಜ, ಆರ್ಥಿಕತೆ ಮತ್ತು ಸಂಸ್ಕೃತಿಯ ಮೇಲೆ ಬೀರಿದ ಪ್ರಭಾವವನ್ನು ತಿಳಿದುಕೊಳ್ಳುವುದು.

3] ದಿಲ್ಲಿಯ ಸುಲ್ತಾನರ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.



ನಮ್ಮ ದೇಶದ ಮೇಲೆ ಪ್ರಾಚೀನ ಕಾಲದಿಂದಲೂ ವಿದೇಶಿ ಆಕ್ರಮಣಗಳು ನಡೆದವು. ಆಕ್ರಮಣಕಾರರು ವಾಯವ್ಯ ಸರಹದ್ದಿನಿಂದ ಬಂದವರಾಗಿದ್ದರು. ಸಂಪತ್ತಿನ ಲೂಟಿ, ರಾಜ್ಯ ವಿಸ್ತರಣೆ ಮತ್ತು ಮತಪ್ರಸಾರ ಇವು ದಾಳಿಗಳ ಉದ್ದೇಶವಾಗಿದ್ದುವು.

- **ಅರಬ್ಬರ ದಾಳಿ:** ಭಾರತದ ಮೇಲೆ ಆರಂಭಿಕ ಮಧ್ಯಕಾಲದಲ್ಲಿ ದಾಳಿ ಮಾಡಿದ ಮೊದಲಿಗರೆಂದರೆ ಅರಬ್ಬರು. ಅರಬ್ಬರ ದಂಡು ಇಂದಿಗೆ 1300 ವರ್ಷಗಳ ಹಿಂದೆ ಸಿಂಧ್ ಮತ್ತು ಮುಲ್ತಾನ್ ಪ್ರಾಂತಗಳನ್ನು ವಶಪಡಿಸಿಕೊಂಡಿತು. ಇದರೊಂದಿಗೆ ಈ ಪ್ರದೇಶದಲ್ಲಿ ಇಸ್ಲಾಂ ನೆಲೆಯೂರಿತು. ಆದರೆ ಅಲ್ಪಕಾಲದಲ್ಲಿ ಅರಬ್ಬರ ಅತಿಕ್ರಮಣವು ತಣ್ಣಗಾಯಿತು.

- **ಟರ್ಕರ ದಾಳಿ:** ಇದಾದ ಸುಮಾರು ಮೂರು ಶತಮಾನಗಳ ಅನಂತರ ಟರ್ಕಿ ಮೂಲದ ಮಹಮದ್ ಘಜನಿ ಭಾರತದ ಮೇಲೆ ದಾಳಿ ನಡೆಸಿದನು. ಅಫ್ಘಾನಿಸ್ತಾನದ ಘಜನಿ ಎಂಬ ಚಿಕ್ಕ ರಾಜ್ಯದ ಸುಲ್ತಾನನಾಗಿದ್ದ ಇವನು ಹದಿನೇಳು ಬಾರಿ ದಾಳಿ ನಡೆಸಿದನು. ಇದರ ಪರಿಣಾಮವಾಗಿ ಭಾರತದ ಹಲವಾರು ಸಂಪದ್ಭರಿತ ನಗರಗಳು ಸೂರೆಗೊಂಡವು. ಧಾರ್ಮಿಕ ಕೇಂದ್ರಗಳು ನಾಶವಾದವು.



ಮಹಮದ್ ಘಜನಿ



ಮಹಮದ್ ಘೋರಿ



- **ಮಹಮದ್ ಘೋರಿ: ಸಾ.ಶ. 12ನೆಯ ಶತಮಾನದ ಕೊನೆಯ ಭಾಗದಲ್ಲಿ** ಅಫ್‌ಘಾನಿಸ್ತಾನದ ಮಹಮದ್ ಘೋರಿ ಭಾರತದ ಮೇಲೆ ದಾಳಿ ನಡೆಸಿ ಸಿಂಧ್ ಮತ್ತು ಪಂಜಾಬ್ ಪ್ರಾಂತ್ಯಗಳನ್ನು ವಶಪಡಿಸಿಕೊಂಡನು. ದಾಳಿ ಮುಂದುವರಿಯುತ್ತಿದ್ದಂತೆ ದಿಲ್ಲಿಯ ರಾಜ ಪೃಥ್ವೀರಾಜ್ ಚೌಹಾಣನು ಘೋರಿಯನ್ನು ಮೊದಲ ತರೈನ್ ಯುದ್ಧದಲ್ಲಿ ಸೋಲಿಸಿದನು. ಆದರೆ, ಮರುವರ್ಷ ಮತ್ತೆ ದಂಡೆತ್ತಿ ಬಂದ ಘೋರಿಯು ಎರಡನೆಯ ತರೈನ್ ಯುದ್ಧದಲ್ಲಿ ಪೃಥ್ವಿರಾಜನನ್ನು ಸೋಲಿಸಿ ಕೊಂದನು. ದಿಲ್ಲಿಯು ಘೋರಿಯ ವಶವಾಯಿತು.

### ಗುಲಾಮಿ ಸಂತತಿ

ಘೋರಿಯು ಗೆದ್ದುಕೊಂಡ ಪ್ರದೇಶಗಳನ್ನು ತನ್ನ ಸೇನಾನಿ ಕುತ್ಬುದ್ದೀನ್ ಐಬಕ್ ಎಂಬುವನಿಗೆ ಹಸ್ತಾಂತರಿಸಿದನು. ಘೋರಿಯ ಮರಣದ ನಂತರ ಕುತ್ಬುದ್ದೀನ್ ಐಬಕ್ ದಿಲ್ಲಿಯ ಸುಲ್ತಾನನಾಗಿ ಸ್ವತಂತ್ರ ಆಳ್ವಿಕೆ ಪ್ರಾರಂಭಿಸಿದನು. ದೆಹಲಿಯನ್ನು ಗುಲಾಮಿ, ಖಿಲ್ಜಿ, ತುಘಲಕ್, ಸಯ್ಯದ್ ಮತ್ತು ಲೂದಿ ಎಂಬ 5 ಸಂತತಿಗಳು ಆಳಿದವು. ಅವುಗಳಲ್ಲಿ ಪ್ರಮುಖ ಸಂತತಿಗಳನ್ನು ಕುರಿತು ತಿಳಿಯೋಣ

**ಕುತ್ಬುದ್ದೀನ್ ಐಬಕ್:** ಕುತ್ಬುದ್ದೀನ್ ಪ್ರಾರಂಭದಲ್ಲಿ ಮಹಮದ್ ಘೋರಿಯ ಗುಲಾಮನಾಗಿದ್ದ. ಈ ಕಾರಣದಿಂದಾಗಿ ಇವನದು 'ಗುಲಾಮಿ' ಸಂತತಿ ಎಂದಾಯಿತು. ಇವನು ಶತ್ರುಗಳನ್ನು ಗೆದ್ದು, ಟರ್ಕರ ಆಳ್ವಿಕೆಯನ್ನು ಭದ್ರಗೊಳಿಸಿದನು. ತನ್ನ ವಿಜಯದ ದ್ಯೋತಕವಾಗಿ ದಿಲ್ಲಿಯ ಸಮೀಪದ ಮೆಹರೌಲಿ ಎಂಬಲ್ಲಿ ಕುತುಬ್ ಮಿನಾರಿನ ನಿರ್ಮಾಣಕಾರ್ಯ ಆರಂಭಿಸಿದನು. ಇಲ್ತುಮಶ್‌ನ ಕಾಲದಲ್ಲಿ ಇದು ಪೂರ್ಣಗೊಂಡಿತು. ದಿಲ್ಲಿಯ ಸುಲ್ತಾನರ ಕಾಲದಲ್ಲಿ ಅಧಿಕಾರ ಸೂತ್ರವನ್ನು ಹಿಡಿದ ಏಕೈಕ ಮಹಿಳೆಯೆಂದರೆ ರಜಿಯಾ ಸುಲ್ತಾನಾ. ಈ ಧೀರೆಯು ಆಸ್ಥಾನದಲ್ಲಿ ನ್ಯಾಯ ನೀಡುತ್ತಿದ್ದಳು. ಗಂಡುಡುಗೆ ತೊಟ್ಟು ರಣರಂಗಕ್ಕೆ ಧುಮುಕುತ್ತಿದ್ದಳು. ಆಸ್ಥಾನದ ಸರದಾರರು ಮಹಿಳೆಯೋರ್ವಳ ಆಳ್ವಿಕೆಯನ್ನು ಸಹಿಸದೆ ಅವಳನ್ನು ಕೊಂದರು.



ಕುತ್ಬುದ್ದೀನ್ ಐಬಕ್



ಕುತುಬ್ ಮಿನಾರ್, ದಿಲ್ಲಿ



## ಖಿಲ್ಜಿ ಸಂತತಿ

ಗುಲಾಮಿ ಸಂತತಿಯ ಅನಂತರ ಖಿಲ್ಜಿ ಸಂತತಿ ಅಧಿಕಾರಕ್ಕೇರಿತು. ಖಿಲ್ಜಿಗಳಲ್ಲಿ ಅಲ್ಲಾವುದ್ದೀನ್ ದಿಲ್ಲಿಯ ಸುಲ್ತಾನರಲ್ಲೇ ಬಲಶಾಲಿಯಾಗಿದ್ದನು. ಈತನದು ಸೈನಿಕ ಆಡಳಿತವಾಗಿತ್ತು.

**ಅಲ್ಲಾವುದ್ದೀನ್ ಖಿಲ್ಜಿ :** ಅಲ್ಲಾವುದ್ದೀನನು ಆಡಳಿತ, ಸೈನ್ಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ಜಾರಿಗೆ ತಂದನು. ಅಗತ್ಯವಸ್ತುಗಳ ಮಾರಾಟದ ಮೇಲೆ ಹತೋಟಿಯಲ್ಲಿಟ್ಟುಕೊಂಡನು. ಮಾದಕ ಪದಾರ್ಥ ಸೇವನೆ, ಜೂಜಾಟಗಳನ್ನು ನಿಷೇಧ ಮಾಡಿದನು. ತಪ್ಪಿತಸ್ಥರೆಂದು ಕಂಡವರನ್ನು ಕ್ರೂರವಾಗಿ ದಂಡಿಸಿದ.

**ದಂಡ ಯಾತ್ರೆಗಳು:** ಭಾರತ ದೇಶವನ್ನು ಪೂರ್ಣವಾಗಿ ಗೆದ್ದುಕೊಳ್ಳಬೇಕೆಂಬುದು ಅಲ್ಲಾವುದ್ದೀನನ ಆಕಾಂಕ್ಷೆಯಾಗಿತ್ತು. ಪ್ರಾರಂಭದಲ್ಲಿ ತನ್ನ ಸೈನಿಕ ಶಕ್ತಿಯಿಂದ ಉತ್ತರ ಭಾರತವನ್ನು ಗೆದ್ದುಕೊಂಡನು. ದಕ್ಷಿಣ ಭಾರತವನ್ನು ವಶಪಡಿಸಿಕೊಳ್ಳಲು ತನ್ನ ಆಪ್ತ ಗುಲಾಮನಾದ ಮಲ್ಲಿಕ್ ಕಾಫರ್ ಎಂಬ ಸೇನಾನಿಯನ್ನು ಭಾರಿ ಸೇನಾಪಡೆಯೊಂದಿಗೆ ಕಳುಹಿಸಿದನು. ಮಲ್ಲಿಕಾಫರ್ ದಕ್ಷಿಣ ಭಾರತದ ನಾಲ್ಕು ರಾಜ್ಯಗಳ ರಾಜಧಾನಿಗಳನ್ನು ಕೊಳ್ಳೆಹೊಡೆದನು.

> ಮಲ್ಲಿಕಾಫರ್ ಆಕ್ರಮಣ ಮಾಡಿದ ರಾಜ್ಯಗಳೆಂದರೆ: ಮಹಾರಾಷ್ಟ್ರದ ಯಾದವ (ರಾಜಧಾನಿ ದೇವಗಿರಿ), ಆಂಧ್ರದ ಕಾಕತೀಯ (ವಾರಂಗಲ್ಲು), ಕರ್ನಾಟಕದ ಹೊಯ್ಸಳ (ದ್ವಾರಸಮುದ್ರ) ಮತ್ತು ತಮಿಳುನಾಡಿನ ಪಾಂಡ್ಯ (ಮಧುರೆ).

ತದನಂತರ ಮಲ್ಲಿಕಾಫರನು ದಂಡಯಾತ್ರೆಯನ್ನು ರಾಮೇಶ್ವರದವರೆಗೆ ಮುಂದುವರಿಸಿದನು. ಅಲ್ಲಿಯೂ ದೇವಾಲಯಗಳನ್ನು ಲೂಟಿಮಾಡಿದನು, ಧನಕನಕಾದಿಗಳು ಭಾರಿ ಪ್ರಮಾಣದಲ್ಲಿ

ಸೂರೆಗೊಂಡವು. ದಕ್ಷಿಣ ಭಾರತದಿಂದ ದಿಲ್ಲಿಗೆ ಇಷ್ಟೊಂದು ಪ್ರಮಾಣದಲ್ಲಿ ಸಂಪತ್ತಿನ ಹೊಳೆ ಹಿಂದೆಂದೂ ಹರಿದುಹೋಗಿರಲಿಲ್ಲ.

ಅಲ್ಲಾವುದ್ದೀನನು ಅಮೀರ್ ಖುಸ್ರು, ಅಮೀರ್ ಹಸನ್ ಮುಂತಾದ ಪರ್ಷಿಯನ್ ಕವಿಗಳನ್ನು ಪ್ರೋತ್ಸಾಹಿಸಿದ. ದಿಲ್ಲಿಯಲ್ಲಿ 'ಸಿರಿ' ಎಂಬ ರಾಜಧಾನಿಯನ್ನು ಕಟ್ಟಿಸಿದನು. ಅಲೈ ದರ್ವಾಜಾ ಇವನ ಭವ್ಯ ರಚನೆಯಾಗಿದೆ.



ಅಲೈ ದರ್ವಾಜಾ, ದಿಲ್ಲಿ

ಅಲ್ಲಾವುದ್ದೀನನ ಅಂತ್ಯಕಾಲ ದುಃಖಮಯವಾಗಿತ್ತು. ಅರಮನೆಯಲ್ಲಿ ದಂಗೆಗಳಾದವು. ಕೊನೆಗೆ ಅಲ್ಲಾವುದ್ದೀನನು ಕೊಲೆಗೀಡಾದನು. ಅಲ್ಪಕಾಲದಲ್ಲೇ ಖಿಲ್ಜಿ ಸುಲ್ತಾನರ ಆಳ್ವಿಕೆ ಕೊನೆಗೊಂಡು ತುಘಲಕ್ ಸಂತತಿ ಅಧಿಕಾರಕ್ಕೆ ಬಂದಿತು.

## ತುಘಲಕರು

ತುಘಲಕ್ ಸಂತತಿಯಲ್ಲಿ ಮಹಮದ್ ಬಿನ್ ತುಘಲಕ್ ಪ್ರಮುಖನು. ಅವನು ವಿದ್ವಾಂಸನಾಗಿದ್ದನು. ಆದರೆ ಆತುರ ಮತ್ತು ಕೋಪಿಷ್ಟ ಸ್ವಭಾವದವನು. ಅವನಿಗೆ ವ್ಯವಹಾರ ಕೌಶಲ ಕಡಿಮೆ.

**ಮಹಮದ್ ಬಿನ್ ತುಘಲಕ್:** ಆಡಳಿತ ಸುಧಾರಣೆಗಾಗಿ ಮಹಮದನು ಹಲವು ಪ್ರಯೋಗಗಳನ್ನು ನಡೆಸಿದನು. ಅವುಗಳಲ್ಲಿ ಮುಖ್ಯವಾದುದು ರಾಜಧಾನಿಯ ವರ್ಗಾವಣೆ. ದಿಲ್ಲಿಯ ಬದಲು ಭಾರತದ ಮಧ್ಯಭಾಗದಲ್ಲಿರುವ ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿದರೆ ದಕ್ಷಿಣ ಭಾರತದ ಮೇಲೆ ನಿಯಂತ್ರಣ ಸಾಧಿಸಬಹುದು ಎಂಬುದು ಮಹಮದನ ನಂಬಿಕೆಯಾಗಿತ್ತು. ದಿಲ್ಲಿಯಿಂದ 700 ಮೈಲು ದೂರದಲ್ಲಿದ್ದ ದೇವಗಿರಿಗೆ ದೌಲತಾಬಾದ್ ಎಂದು ಹೆಸರಿಟ್ಟು, ದಿಲ್ಲಿಯ ಜನ ಅಲ್ಲಿಗೆ ಹೋಗಬೇಕೆಂದು ಕಟ್ಟಾಜ್ಞೆ ಹೊರಡಿಸಿದನು. ಆದರೆ ವಲಸೆ ಹೊರಟ ಜನ ಅನುಭವಿಸಿದ ಕಷ್ಟ–ನಷ್ಟ ಹೇಳತೀರದು. ಎಷ್ಟೋ ಜನ ದಾರಿಯಲ್ಲೇ ಮಡಿದರು. ತಾನು ಮಾಡಿದ್ದು ಪ್ರಮಾದವಾಯಿತೆಂದು ನಿಧಾನವಾಗಿ ಮನಗಂಡ ಅವನು ಜನರು ಮತ್ತೆ ದಿಲ್ಲಿಗೆ ಹಿಂದಿರುಗುವಂತೆ ಅಪ್ಪಣೆ ಮಾಡಿದನು. ಕೊನೆಗೆ ಬದುಕಿ ಉಳಿದು ದಿಲ್ಲಿಗೆ ಮರಳಿದವರು ಕೆಲವೇ ಮಂದಿ.

ಮಹಮದನ ಇನ್ನೊಂದು ಸುಧಾರಣೆಯೆಂದರೆ ಬೆಳ್ಳಿಯ ನಾಣ್ಯಗಳ ಬದಲು ಅಷ್ಟೇ ಮುಖಬೆಲೆಯ ತಾಮ್ರದ ಸಂಕೇತ ನಾಣ್ಯಗಳನ್ನು ಚಲಾವಣೆಗೆ ತಂದುದು. ಆದರೆ ತಾಮ್ರದ ನಾಣ್ಯಗಳನ್ನು ಟಂಕಿಸುವ ಅಧಿಕಾರ ಸರ್ಕಾರಕ್ಕೆ ಮಾತ್ರವೇ ಸೇರಿದ್ದು ಎಂಬ ರಾಜಾಜ್ಞೆಯನ್ನು ಅವನು ಹೊರಡಿಸಲಿಲ್ಲ. ಪರಿಣಾಮವಾಗಿ ಸಿಕ್ಕಸಿಕ್ಕವರೆಲ್ಲ ತಾಮ್ರದ ನಾಣ್ಯಗಳನ್ನು ತಯಾರಿಸಿದರು. ಇದರಿಂದ ನಾಣ್ಯಗಳು ಅಪಮೌಲ್ಯಗೊಂಡವು. ಕೊನೆಗೆ ತಾಮ್ರದ ನಾಣ್ಯಗಳನ್ನು ರದ್ದು ಪಡಿಸಿದನು. ತಾಮ್ರದ ನಾಣ್ಯಗಳನ್ನು ಪಡೆದು ಬೆಳ್ಳಿ ನಾಣ್ಯಗಳನ್ನು ವಿತರಿಸಿದನು. ಖಜಾನೆ ಬರಿದಾಯಿತು. ಒಟ್ಟಿನಲ್ಲಿ ಜನರಿಂದ ಸುಲ್ತಾನನೆ ಮೋಸ ಹೋದನು. ಈ ಪ್ರಯೋಗದಿಂದ ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿತು.

ಮಹಮದನ ಆಡಳಿತದಿಂದ ಅತೃಪ್ತರಾದ ಪ್ರಜೆಗಳು ದಂಗೆ ಎದ್ದರು. ಸಿಂಧ್ ಪ್ರದೇಶದಲ್ಲಿ ದಂಗೆಕೋರರನ್ನು ದಮನ ಮಾಡುತ್ತಿದ್ದಾಗ, ತೀವ್ರ ಜ್ವರದಿಂದ ಮಹಮದ್ ತೀರಿಕೊಂಡನು.

ತುಘಲಕರ ಅನಂತರ ಸಯ್ಯದ್ ಮತ್ತು ಲೋದಿಗಳು ಅಲ್ಪಕಾಲ ದಿಲ್ಲಿಯಿಂದ ಆಳ್ವಿಕೆ ನಡೆಸಿದರು. ಲೋದಿ ಸಂತತಿಯ ಕೊನೆಯ ಸುಲ್ತಾನನಾದ ಇಬ್ರಾಹಿಂ ಲೂದಿಯನ್ನು ಮೊಗಲ್ ದೊರೆ ಬಾಬರ್ ಮೊದಲ ಪಾಣಿಪತ್ ಕದನದಲ್ಲಿ ಸೋಲಿಸಿದನು. ಆ ಮೂಲಕ ಬಾಬರ್ ಮೊಗಲ್ ಸಾಮ್ರಾಜ್ಯಕ್ಕೆ ಬುನಾದಿ ಹಾಕಿದನು.

## ದಿಲ್ಲಿ ಸುಲ್ತಾನರ ಕೊಡುಗೆಗಳು

**ಆಡಳಿತ:** ದಿಲ್ಲಿ ಸುಲ್ತಾನರ ರಾಜ್ಯದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿದ್ದರೂ ಆಡಳಿತವು ಟರ್ಕಿಯ ಮಾದರಿಯಲ್ಲಿ ನಡೆಯುತ್ತಿತ್ತು. ಮಿಲಿಟರಿ ಶಕ್ತಿಯು ರಾಜ್ಯದ ಬೆನ್ನೆಲುಬಾಗಿತ್ತು. ಸುಲ್ತಾನರು ನಿರಂಕುಶ ಪ್ರಭುಗಳಾಗಿದ್ದರು. ಬಲ್ಬನ್ ಎಂಬ ಸುಲ್ತಾನನು ತಾನು ದೇವರ ಪ್ರತಿನಿಧಿ, ದೇವರಿಗಲ್ಲದೆ ಇನ್ನಾರಿಗೂ ಹೊಣೆಗಾರನಲ್ಲ ಎಂಬುದಾಗಿ ಸಾರಿದ್ದನು. ದಿಲ್ಲಿಯ ಸುಲ್ತಾನರು ಸ್ಥಳಿಯ ರಾಜರ ಪ್ರಬಲ ಪ್ರತಿರೋಧವನ್ನು ಸತತವಾಗಿ ಎದುರಿಸಬೇಕಾಗಿತ್ತು.

**ಆರ್ಥಿಕತೆ:** ರೈತರ ಮೇಲಿನ ಭೂಕಂದಾಯದ ಹೊರೆ ವಿಪರೀತವಾಗಿತ್ತು. ಮಹಮದ್ ಬಿನ್ ತುಘಲಕನು ಕಂದಾಯವನ್ನು ಇನ್ನಷ್ಟು ಹೆಚ್ಚಿಸಿದನಲ್ಲದೆ, ಅದನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡಿದನು. ಪರಿಣಾಮವಾಗಿ ರೈತರು ಎಲ್ಲೆಡೆ ದಂಗೆಯೆದ್ದರು. ನೇಯ್ಗೆಯು ಆ ಕಾಲದ ಬೃಹತ್ ಉದ್ಯಮವಾಗಿತ್ತು. ನಗರ ಪ್ರದೇಶಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಬಿರುಸಾಗಿ ನಡೆಯುತ್ತಿತ್ತು. ಇದು ಭಾರಿ ಪ್ರಮಾಣದಲ್ಲಿ ಉದ್ಯೋಗ ಒದಗಿಸಿತು. ಸುಲ್ತಾನರು ಪ್ರಮುಖವಾಗಿ ಯುದ್ಧ ಕುದುರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು.

**ವಾಸ್ತು ಶಿಲ್ಪ ಮತ್ತು ಸಾಹಿತ್ಯ:** ದಿಲ್ಲಿ ಸುಲ್ತಾನರ ಕಾಲದ ಪ್ರಮುಖ ವಾಸ್ತುಶಿಲ್ಪಗಳೆಂದರೆ – ಪ್ರಸಿದ್ಧವಾದ ಕುತುಬ್ ಮಿನಾರ್ (71 ಮೀ. ಎತ್ತರ), ಅಲ್ಯೆ ದರ್ವಾಜಾ ಎಂಬ ಸುಂದರ ದ್ವಾರ, ಕವ್ವತ್‌ವುಲ್ ಇಸ್ಲಾಮ್ ಮಸೀದಿ ಮತ್ತು ಸಿರಿ ಕೋಟೆ. ಇದೇ ಕಾಲದಲ್ಲಿ ಉರ್ದು ಭಾಷೆ ರೂಪುಗೊಂಡಿತು. ಅಮೀರ್ ಖುಸ್ರು ಮತ್ತು ಅಮೀರ್ ಹಸನ್ ಪರ್ಷಿಯನ್ ಭಾಷೆಯ ಹೆಸರಾಂತ ಕವಿಗಳು. ಖುಸ್ರು ಸಂಗೀತಗಾರನಾಗಿದ್ದು ತಬಲಾ, ಸಿತಾರ್ ಮುಂತಾದ ವಾದ್ಯಗಳನ್ನು ರೂಪಿಸಿದನು. ಜೈಸಿ ಎಂಬ ಕವಿ ಉರ್ದುವಿನಲ್ಲಿ 'ಪದ್ಮಾವತ್' ಎಂಬ ಸೂಫಿ ಕಾವ್ಯ ಬರೆದನು. ರಾಮಾನಂದ, ಕಬೀರ, ರಾಯಿದಾಸ, ಮೀರಾ ಈ ಕಾಲದಲ್ಲಿದ್ದ ಭಕ್ತಿ ಸಂತರು.

**ಕಾಲಗಣನೆ (ಸಾ.ಶ.)**

| | | |
|---|---|---|
| ಸಿಂಧ್ ಪ್ರಾಂತದ ಮೇಲೆ ಅರಬ್ಬರ ದಾಳಿ | – | 712 |
| ಮಹಮದ್ ಘಜನಿಯ ಆಕ್ರಮಣಗಳು | – | 1000–1026 |
| ತರೈನ್ ಕದನಗಳು (ಮಹಮದ್ ಘೋರಿ ಮತ್ತು ಪೃಥ್ವೀರಾಜ್ ಚೌಹಾಣರ ನಡುವೆ) | – | 1191–1192 |
| ದಿಲ್ಲಿಯ ಸುಲ್ತಾನರ ಆಳ್ವಿಕೆ | – | 1206–1526 |
| ಕುತ್ಬುದ್ದೀನ್ ಐಬಕ್ | – | 1206–1210 |
| ರಜಿಯಾ ಸುಲ್ತಾನಾ | – | 1236–1240 |
| ಅಲ್ಲಾವುದ್ದೀನ್ ಖಿಲ್ಜಿ | – | 1296–1316 |
| ಮಹಮದ್ ಬಿನ್ ತುಘಲಕ್ | – | 1325–1351 |
| ಪಾಣಿಪತ್ ಕದನ ಹಾಗೂ ಮೊಗಲ್ ಆಳ್ವಿಕೆಯ ಆರಂಭ | – | 1526 |

**ಹೊಸ ಪದ**

ಮಿನಾರು – ಎತ್ತರವಾದ ಸ್ತಂಭಗೋಪುರ.

## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಮೊದಲ ತರೈನ್ ಯುದ್ಧದಲ್ಲಿ ಪೃಥ್ವೀರಾಜ ಚೌಹಾಣನಿಂದ ____________ ಸೋತನು.
2. ಅಲ್ಲಾವುದ್ದೀನ್ ಖಿಲ್ಜಿಯು ದಿಲ್ಲಿಯಲ್ಲಿ__________ ಎಂಬ ರಾಜಧಾನಿಯನ್ನು ಕಟ್ಟಿಸಿದನು.
3. ಇಬ್ರಾಹಿಂ ಲೂದಿಯನ್ನು ಮೊದಲ ಪಾಣಿಪತ್ ಕದನದಲ್ಲಿ ಸೋಲಿಸಿದವನು__________

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಮಹಮದ್ ಘೋರಿಯು ಎರಡನೇ ತರೈನ್ ಯುದ್ಧದಲ್ಲಿ ಯಾರ ವಿರುದ್ಧ ಜಯ ಸಾಧಿಸಿದನು?
2. ಕುತುಬ್ ಮಿನಾರನ್ನು ಕಟ್ಟಿಸಿದವರು ಯಾರು?
3. ದಿಲ್ಲಿ ಸುಲ್ತಾನರ ಕಾಲದಲ್ಲಿ ಆಳ್ವಿಕೆ ನಡೆಸಿದ ಏಕೈಕ ಮಹಿಳೆ ಯಾರು?
4. ದಕ್ಷಿಣ ಭಾರತದ ಮೇಲೆ ದಾಳಿ ನಡೆಸಿದ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಯಾರು?

5. ಮಹಮದ್ ಬಿನ್ ತುಘಲಕನು ರಾಜಧಾನಿಯನ್ನು ಎಲ್ಲಿಂದ ಎಲ್ಲಿಗೆ ವರ್ಗಾಯಿಸಿದನು?

6. 'ತಾನು ದೇವರ ಪ್ರತಿನಿಧಿ' ಎಂದು ಹೇಳಿಕೊಂಡ ದಿಲ್ಲಿ ಸುಲ್ತಾನ ಯಾರು?

**III ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಮಹಮದ್ ಘಜನಿಯ ದಾಳಿಗಳ ಪರಿಣಾಮಗಳೇನು?
2. ದಿಲ್ಲಿಯ ಸುಲ್ತಾನ ಮನೆತನಗಳನ್ನು ಹೆಸರಿಸಿ.
3. ಕುತ್ಬುದ್ದೀನ್ ಐಬಕ್‌ನ ಸಾಧನೆಗಳನ್ನು ತಿಳಿಸಿ.
4. ಅಲ್ಲಾವುದ್ದೀನ್ ಖಿಲ್ಜಿಯ ಸುಧಾರಣೆಗಳನ್ನು ಪಟ್ಟಿ ಮಾಡಿ.
5. ಮಹಮದ್ ಬಿನ್ ತುಘಲಕನು ನಡೆಸಿದ ಪ್ರಯೋಗಗಳನ್ನು ವಿವರಿಸಿ.
6. ವಾಸ್ತುಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ದಿಲ್ಲಿಯ ಸುಲ್ತಾನರು ನೀಡಿದ ಕೊಡುಗೆಗಳು ಯಾವುವು?

**IV ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| 1. ಜೈಸಿ | ಅ) ಅಲೈ ದರ್ವಾಜ |
| 2. ದೌಲತಾಬಾದ್ | ಆ) ಸಿತಾರ್ |
| 3. ಅಲ್ಲಾವುದ್ದೀನ್ ಖಿಲ್ಜಿ | ಇ) ಪದ್ಮಾವತ್ |
| 4. ಅಮೀರ್‌ಖುಸ್ರು | ಈ) ದೇವಗಿರಿ |

**ಚಟುವಟಿಕೆಗಳು:**

1 ದಿಲ್ಲಿಯ ಸುಲ್ತಾನರ ಕಾಲದ ವಾಸ್ತುಶಿಲ್ಪಗಳ ಭಾವಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.

2 ಭೂಪಟದಲ್ಲಿ ದಿಲ್ಲಿ ಸುಲ್ತಾನರ ಕಾಲದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.

☆ ☆ ☆

ಪಾಠ
7

# ಮೊಗಲರು

P9R7B3

**ಪಾಠದ ಪರಿಚಯ**

1526ರಲ್ಲಿ ಬಾಬರ್ ಭಾರತದ ಮೇಲೆ ದಂಡೆತ್ತಿ ಬಂದು, ದಿಲ್ಲಿ ಸುಲ್ತಾನರ ಆಳ್ವಿಕೆಯನ್ನು ಕೊನೆಗೊಳಿಸಿ ಮೊಗಲ್ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಈ ಪಾಠದಲ್ಲಿ ಅಕ್ಬರ್ ಮತ್ತು ಔರಂಗಜೇಬನ ಆಳ್ವಿಕೆಯನ್ನು ಪರಿಚಯಿಸಲಾಗಿದೆ. ಇದರೊಂದಿಗೆ ಮೊಗಲರ ಆಡಳಿತ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ನಿರೂಪಿಸಲಾಗಿದೆ. ಕೊನೆಯಲ್ಲಿ ಸಾಮ್ರಾಜ್ಯದ ಅವನತಿಗೆ ಕಾರಣವಾದ ಅಂಶಗಳನ್ನು ಹೇಳಲಾಗಿದೆ. ಒಟ್ಟಿನಲ್ಲಿ ಇದು ಎರಡು ಶತಮಾನಗಳ ಕಾಲ ಪ್ರಮುಖ ರಾಜಕೀಯ ಶಕ್ತಿಯಾಗಿ ಮೆರೆದು ಸಾಹಿತ್ಯ, ಕಲೆಗಳಿಗೆ ವಿಶೇಷ ಕೊಡುಗೆ ನೀಡಿದ ಮೊಗಲ್ ಸಾಮ್ರಾಜ್ಯದ ಏಳು ಬೀಳಿನ ಚರಿತ್ರೆ ಇದಾಗಿದೆ.

**ಸಾಮರ್ಥ್ಯಗಳು**

1] ಅಕ್ಬರನ ಉದಾರ ನೀತಿ ಮತ್ತು ಸಾಧನೆಗಳನ್ನು ಅರಿತುಕೊಳ್ಳುವುದು.

2] ಔರಂಗಜೇಬನ ಸಂಕುಚಿತ ಧೋರಣೆಗಳು ದೇಶದಲ್ಲಿ ದಂಗೆಗಳು ಮತ್ತು ಸಾಮ್ರಾಜ್ಯದ ಅವನತಿಗೆ ಹೇಗೆ ಕಾರಣವಾದವು ಎಂಬುದನ್ನು ಅರ್ಥಮಾಡಿಕೊಳ್ಳುವುದು.

3] ಸಾಹಿತ್ಯ ಮತ್ತು ಕಲೆಗಳನ್ನು ಮೊಗಲ್ ಸಾಮ್ರಾಟರು ಹೇಗೆ ಶ್ರೀಮಂತಗೊಳಿಸಿದರು ಎಂಬುದನ್ನು ಪ್ರಶಂಸೆ ಮಾಡುವುದು.

4] ಮೊಗಲರ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸುವುದು.



ಭಾರತದ ಇತಿಹಾಸದಲ್ಲಿ ಮೂರು ಸಾಮ್ರಾಜ್ಯಗಳು ಪ್ರಸಿದ್ಧವಾದುವು. ಅವುಗಳಲ್ಲಿ ಒಂದು ಮೌರ್ಯ ಸಾಮ್ರಾಜ್ಯ, ಮತ್ತೊಂದು ಗುಪ್ತ ಸಾಮ್ರಾಜ್ಯ. ಮೂಗದೊಂದು ಮೊಗಲ್ ಸಾಮ್ರಾಜ್ಯ. ಮೊಗಲ್ ರಾಜಮನೆತನದ ಸ್ಥಾಪಕ ಬಾಬರ್. ಆರಂಭದಲ್ಲಿ ಇವನು ಅಫ್ಘಾನಿಸ್ತಾನದ ಕಾಬೂಲ್ ಎಂಬ ಪುಟ್ಟ ಪ್ರದೇಶವನ್ನು ಆಳುತ್ತಿದ್ದ. ಸಂಪದ್ಭರಿತ ಭಾರತದ ಮೇಲೆ ಆಕ್ರಮಣ ಮಾಡಲು ಸಮಯ ಕಾಯುತ್ತಿದ್ದ.

**ಬಾಬರ್:** ದಿಲ್ಲಿಯ ಸುಲ್ತಾನರು ದುರ್ಬಲಗೊಳ್ಳುತ್ತಿದ್ದಂತೆ ಬಾಬರ್ ದಿಲ್ಲಿಯ ಇಬ್ರಾಹಿಂ ಲೂದಿಯ ಮೇಲೆ ದಂಡೆತ್ತಿ ಬಂದು ಅವನ ಆಳ್ವಿಕೆಯನ್ನು ಕೊನೆಗೊಳಿಸಿದನು. ನಂತರ ರಜಪೂತರು ಮತ್ತು ಅಫ್ಘನರನ್ನು ವೀರಯೋಧನಾಗಿದ್ದ ಬಾಬರ್ ತನ್ನ ಉತ್ತಮ ಶಸ್ತ್ರಾಸ್ತ್ರ ಬಲದಿಂದ ಎದುರಿಸಿ ಹಿಮ್ಮೆಟ್ಟಿಸಿದನು.

ಬಾಬರನು ದಿಲ್ಲಿ, ಆಗ್ರಾ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಮೂರು ಯುದ್ಧಗಳಲ್ಲಿ ವಶಪಡಿಸಿಕೊಂಡು ಸಾಮ್ರಾಜ್ಯವನ್ನು ಸ್ಥಾಪಿಸಿದನು. ಆದರೆ ಅಲ್ಪಕಾಲದಲ್ಲೇ ಬಾಬರ್ ನಿಧನನಾದನು. ನಂತರ ಅವನ ಮಗ ಹುಮಾಯೂನ್ ಪಟ್ಟವೇರಿದನು.

**ಹುಮಾಯೂನ್:** ಆರಂಭದಲ್ಲಿ ಹುಮಾಯೂನ್ ಶತ್ರುಗಳನ್ನು ಯುದ್ಧದಲ್ಲಿ ಸೋಲಿಸಿದನಾದರೂ

ಅಫ್ಘನ್ ಸರದಾರನಾದ ಶೇರ್‌ಷಾ ಸೂರಿಯಿಂದ ಪರಾಜಯಗೊಂಡನು. ರಾಜ್ಯವನ್ನು ಕಳೆದುಕೊಂಡು ಪರ್ಷಿಯಕ್ಕೆ ಪಲಾಯನ ಮಾಡಿ ಅಲ್ಲಿ ಹದಿನೈದು ವರ್ಷಗಳ ಕಾಲವಿದ್ದನು. ಅಫ್ಘನರ ಆಳ್ವಿಕೆ ದುರ್ಬಲಗೊಳ್ಳುತ್ತಿದ್ದಂತೆ ಹುಮಾಯೂನ್ ಭಾರತದ ಮೇಲೆ ದಂಡೆತ್ತಿ ಬಂದು ದಿಲ್ಲಿಯನ್ನು ವಶಪಡಿಸಿಕೊಂಡನು. ಆದರೆ ಅಲ್ಪಕಾಲದಲ್ಲೇ ಹುಮಾಯೂನ್ ತೀರಿಕೊಂಡನು.

## ಅಕ್ಬರ್


ಅಕ್ಬರ್

ಹುಮಾಯೂನನ ಮಗನಾದ ಅಕ್ಬರ್ ಭಾರತದಲ್ಲಿ ಸಾಮ್ರಾಜ್ಯವನ್ನು ಕಟ್ಟುವ ಆಕಾಂಕ್ಷೆಯುಳ್ಳವನಾಗಿದ್ದನು. ಈ ನಿಟ್ಟಿನಲ್ಲಿ ಕಲಿತನಕ್ಕೆ ಹೆಸರಾಗಿದ್ದ ರಜಪೂತ ಅರಸರನ್ನು ತನ್ನ ಪಕ್ಷದತ್ತ ಒಲಿಸಿಕೊಳ್ಳಲು ಯತ್ನಿಸಿದನು. ಅವರಲ್ಲಿ ಕೆಲವರು ಅಕ್ಬರನ ಪಕ್ಷ ವಹಿಸಿದರು. ಆದರೆ ಮೇವಾಡದ ರಾಣಾ ಪ್ರತಾಪಸಿಂಹನು ಅಕ್ಬರನಿಗೆ ಮಣಿಯಲಿಲ್ಲ. ಅವನು ಸ್ವಾಭಿಮಾನಿಯೂ ಮಹಾಶೂರನೂ ಆಗಿದ್ದನು. ಮುಂದೆ ಇವರ ನಡುವೆ ಹಾಲ್ದಿಘಾಟ್ (ರಾಜಸ್ಥಾನ) ಎಂಬಲ್ಲಿ ಭೀಕರ ಕದನ ನಡೆಯಿತು. ಈ ಕದನದಲ್ಲಿ ರಾಣಾ ಪ್ರತಾಪಸಿಂಹನು ಸೋತನಾದರೂ ಕೊನೆಯವರೆಗೂ ಅಕ್ಬರನಿಗೆ ಶಿರಬಾಗಲಿಲ್ಲ.

ಮುಂದೆ ಅಕ್ಬರ್ ಅನೇಕ ಸೈನಿಕ ಕಾರ್ಯಾಚರಣೆಗಳನ್ನು ಕೈಗೊಂಡನು. ಪರಿಣಾಮವಾಗಿ ಗುಜರಾತ್, ಬಂಗಾಳ, ಕಾಶ್ಮೀರ, ಕಾಬೂಲ್ ಮುಂತಾದ ಪ್ರದೇಶಗಳನ್ನು ಗೆದ್ದು ಬೃಹತ್ ಸಾಮ್ರಾಜ್ಯವನ್ನು ಸ್ಥಾಪಿಸಿದನು.

### ಅಕ್ಬರನ ಸಾಧನೆಗಳು

**ಆಡಳಿತ:** ಉತ್ತಮ ಆಡಳಿತಗಾರನಾಗಿದ್ದ ಅಕ್ಬರ್ ವಿಶಾಲ ಮನೋಭಾವವನ್ನು ಹೊಂದಿದ್ದನು. ಉತ್ತಮ ರಾಜನಲ್ಲಿರಬೇಕಾದ ಬಹುತೇಕ ಗುಣಗಳು ಅವನಲ್ಲಿದ್ದವು. ಅವನು ನಿರಂಕುಶ ಪ್ರಭುವಾಗಿರಲಿಲ್ಲ. ಬಹುಸಂಖ್ಯಾತರಾದ ತನ್ನ ಹಿಂದು ಪ್ರಜೆಗಳ ವಿಶ್ವಾಸಗಳಿಸುವುದು ಅವಶ್ಯವೆಂದು ಮನಗಂಡನು. ಹಿಂದೂಗಳಿಗೆ ತನ್ನ ಆಸ್ಥಾನದಲ್ಲಿ ಉನ್ನತ ಹುದ್ದೆಗಳನ್ನು ನೀಡಿದನು. ಹಿಂದಿನ ಸುಲ್ತಾನರು ಹಿಂದೂಗಳ ಮೇಲೆ ವಿಧಿಸಿದ್ದ 'ಜೆಸಿಯಾ' (ಜಿಜಿಯಾ) ಎಂಬ ತಲೆಗಂದಾಯ ಹಾಗೂ ಯಾತ್ರಾ ತೆರಿಗೆಯನ್ನು ರದ್ದುಪಡಿಸಿದನು. ಅಕ್ಬರನು ಸತಿ ಪದ್ಧತಿಯನ್ನು ನಿಷೇಧಿಸಿದನು. ಬಾಲ್ಯ ವಿವಾಹವನ್ನು ವಿರೋಧಿಸಿದನು. ಅಕ್ಬರನ ಭೂಕಂದಾಯ ಪದ್ಧತಿ ಜನಮನ್ನಣೆಯನ್ನು ಗಳಿಸಿತು. ಭೂಕಂದಾಯ ಪದ್ಧತಿಯನ್ನು ರೂಪಿಸಿದವನು ಮಂತ್ರಿಯಾಗಿದ್ದ ರಾಜಾ ತೋದರ್‌ಮಲ್.

**ಧಾರ್ಮಿಕ ನೀತಿ:** ಅಕ್ಬರನು ಧಾರ್ಮಿಕ ಸಹಿಷ್ಣುವಾಗಿದ್ದನು. ತನ್ನ ಹೊಸ ರಾಜಧಾನಿಯಾದ ಫತೇಪುರ್ ಸಿಕ್ರಿಯಲ್ಲಿ **'ಇಬಾದತ್ ಖಾನಾ'** ಎಂಬ ಪ್ರಾರ್ಥನಾ ಮಂದಿರ ಕಟ್ಟಿಸಿದನು. ಇಲ್ಲಿ ಇಸ್ಲಾಂ, ಹಿಂದೂ, ಜೈನ, ಬೌದ್ಧ, ಪಾರ್ಸಿ, ಕ್ರಿಶ್ಚಿಯನ್ ಮುಂತಾದ ಧಾರ್ಮಿಕ ಮುಖಂಡರನ್ನೂ ಆಹ್ವಾನಿಸಿ ಧಾರ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದನು. ಈ ಚಿಂತನೆಗಳ ಫಲವಾಗಿ ಅಕ್ಬರ್ 'ದೀನ್–ಇ–ಇಲಾಹಿ'

ಎಂಬ ತನ್ನದೇ ಆದ ಹೊಸ ಪಂಥವನ್ನು ಸ್ಥಾಪಿಸಿದನು. ಅದು ಎಲ್ಲ ಮತಧರ್ಮಗಳ ಉತ್ತಮ ಅಂಶಗಳನ್ನು ಒಳಗೊಂಡಿತ್ತು. ಆದರೆ ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರವೇ ಅದರ ಅನುಯಾಯಿಗಳಾಗಿದ್ದರು.

**ಕಲಾ ಪೋಷಣೆ:** ಅಕ್ಬರ್ ಸಾಹಿತ್ಯ ಕಲೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದನು. ಫೈಜಿ, ಅಬುಲ್ ಫಜಲ್ ಮತ್ತು ಬೀರಬಲ್ ಈತನ ಆಸ್ಥಾನದಲ್ಲಿದ್ದ ಗಣ್ಯ ಕವಿಗಳು. ಅಮರ ಸಂಗೀತಗಾರ ತಾನ್‌ಸೇನ್ ಅವನ ಆಸ್ಥಾನದ ಶೋಭೆಯನ್ನು ಹೆಚ್ಚಿಸಿದನು. ವಾಸ್ತುಶಿಲ್ಪ ಮತ್ತು ಚಿತ್ರಕಲೆಗಳಿಗೆ ಅಕ್ಬರ್ ನೀಡಿರುವ ಪ್ರೋತ್ಸಾಹ ಮೆಚ್ಚುವಂಥದ್ದು.

ಅಕ್ಬರನ ನಂತರ ಪಟ್ಟಕ್ಕೆ ಬಂದ ಜಹಾಂಗೀರ್ ಮತ್ತು ಷಹಜಹಾನ್ ಇಬ್ಬರೂ ಅಕ್ಬರನ ನೀತಿಯನ್ನು ಬಹುಮಟ್ಟಿಗೆ ಅನುಸರಿಸಿದರು. ಷಹಜಹಾನ್ ಆಗ್ರಾದಲ್ಲಿ ವಿಶ್ವ ಪ್ರಸಿದ್ಧ ತಾಜ್‌ಮಹಲ್, ದಿಲ್ಲಿಯಲ್ಲಿ ಬೃಹತ್ ಕೆಂಪುಕೋಟೆ ಮತ್ತು ಭವ್ಯ ಅರಮನೆಗಳನ್ನು ನಿರ್ಮಾಣ ಮಾಡಿಸಿ ಪ್ರಸಿದ್ಧಿ ಪಡೆದನು.

## ಔರಂಗಜೇಬ



ಔರಂಗಜೇಬ

ಷಹಜಹಾನನ ಮಗ ಔರಂಗಜೇಬ್ ಕೊನೆಯ ಪ್ರಸಿದ್ಧ ಮೊಗಲ್ ಸಾಮ್ರಾಟ. ಇವನು ಐವತ್ತು ವರ್ಷಗಳ ಕಾಲ ಸುದೀರ್ಘ ಆಳ್ವಿಕೆ ನಡೆಸಿದನು. ಸಾಮ್ರಾಜ್ಯವು ಇನ್ನಷ್ಟು ವಿಸ್ತಾರಗೊಂಡಿತು. ಆದರೆ ಕೊನೆಯಲ್ಲಿ ಅದು ಶೀಘ್ರಗತಿಯಲ್ಲಿ ಅವನತಿ ಕಂಡಿತು.

**ಧಾರ್ಮಿಕ ನೀತಿ:** ಔರಂಗಜೇಬನು ಸಂಪ್ರದಾಯವಾದಿ ಮುಸಲ್ಮಾನನಾಗಿದ್ದನು. ಮದ್ಯಪಾನ, ಜೂಜು, ಮೋಜು ಮತ್ತು ಸಂಗೀತಗಳಿಂದ ದೂರವಾಗಿದ್ದನು. ಈತನು ಸರಳ ಜೀವಿಯಾಗಿದ್ದನು.

ಔರಂಗಜೇಬನು ಅಕ್ಬರನ ಉದಾರನೀತಿಯನ್ನು ಕೈಬಿಟ್ಟನು. ಜೆಸಿಯಾ ತೆರಿಗೆಯನ್ನು ಮತ್ತೆ ಹೇರಿದನು. ಇದು ರಾಜಕೀಯ ಘರ್ಷಣೆಗಳಿಗೆ ಎಡೆಮಾಡಿಕೊಟ್ಟಿತು.

**ಸಿಖ್ಖರ ದಂಗೆ:** ಔರಂಗಜೇಬನ ಮತೀಯ ಧೋರಣೆಯು ಸಿಖ್ಖರು, ಮರಾಠರು ಮತ್ತು ಜಾಟರನ್ನು ಕೆರಳಿಸಿತು. ಸಿಖ್ ಗುರು ತೇಜ್ ಬಹದ್ದೂರ್‌ನನ್ನು ದಿಲ್ಲಿಯಲ್ಲಿ ಬಹಿರಂಗವಾಗಿ ಕೊಲ್ಲಲಾಯಿತು. ಅವನ ಮಗ ಗುರು ಗೋವಿಂದಸಿಂಹನು ಇಡಿ ಸಿಖ್ ಸಮುದಾಯಕ್ಕೆ ವೀರದೀಕ್ಷೆ ನೀಡಿದನು. ದೀಕ್ಷೆ ಪಡೆದವರಿಗೆ ಸಿಂಗ್ (ಸಿಂಹ) ಎಂಬ ನಾಮಾಂಕಿತ ನೀಡಲಾಯಿತು. ಅವರು ಪಂಚ 'ಕ'ಕಾರಗಳನ್ನು, ಅಂದರೆ ಕೇಶ (ಉದ್ದ ಕೂದಲು), ಕಂಗಾ (ಬಾಚಣಿಗೆ), ಕೃಪಾಣ (ಕಿರುಗತ್ತಿ), ಕಚ್ಚೆ (ತುಂಡು ಇಜಾರು) ಮತ್ತು ಕಂಕಣ (ಕಬ್ಬಿಣದ ಬಳೆ) ಧರಿಸಬೇಕಿತ್ತು. ಈ ಆಚರಣೆ ಸಿಖ್ಖರಲ್ಲಿ ಇಂದಿಗೂ ಜೀವಂತವಾಗಿದೆ.

**ದಂಗೆಗಳು:** ಉತ್ತರ ಭಾರತದಲ್ಲಿ ಸಿಖ್ಖರು ಮತ್ತು ರಜಪೂತರು ಔರಂಗಜೇಬನನ್ನು ಪ್ರಬಲವಾಗಿ ಪ್ರತಿಭಟಿಸಿದರು. ದಖನ್‌ದಲ್ಲಿ ಶಿವಾಜಿ ಬಂಡಾಯ ಎದ್ದನು. ದಂಗೆಗಳು ದೀರ್ಘಕಾಲ ನಡೆದು ಔರಂಗಜೇಬನು ಭಾರಿ ಸಂಪತ್ತು, ಸೈನಿಕರು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಪ್ರತಿಷ್ಠೆಯನ್ನು ಕಳೆದುಕೊಂಡನು. ಸಾಮ್ರಾಜ್ಯದ ಹಲವಾರು ಪ್ರದೇಶಗಳು ಸ್ವತಂತ್ರಗೊಂಡವು. ದಖನ್ನಿನ ಯುದ್ಧಗಳಿಂದ ಆರ್ಥಿಕವಾಗಿ ಹಾಗೂ ದೈಹಿಕವಾಗಿ ಬಹಳಷ್ಟು ಬಳಲಿದ ಔರಂಗಜೇಬನು ದಖನ್‌ನಲ್ಲಿ ಮರಣ ಹೊಂದಿದನು. ಇದರೊಂದಿಗೆ ಮೊಗಲರ ಪ್ರಾಬಲ್ಯವು ತೀವ್ರವಾಗಿ ಕುಂದಿತು.


## ಸಾಂಸ್ಕೃತಿಕ ಕೊಡುಗೆಗಳು

**ಮೊಗಲರ ಆಡಳಿತ:** ಮೊಗಲ್ ಸಾಮ್ರಾಟನೇ ಎಲ್ಲ ನಾಗರಿಕ ಮತ್ತು ಸೈನಿಕ ಅಧಿಕಾರ ಹೊಂದಿದ್ದನು. ನ್ಯಾಯ ನೀಡಿಕೆಯಲ್ಲಿ ಈತನದು ಅಂತಿಮ ನಿರ್ಣಯವಾಗಿತ್ತು. ಸಾಮ್ರಾಜ್ಯವನ್ನು ಪ್ರಾಂತ (ಸುಭಾ), ಜಿಲ್ಲೆ (ಸರ್ಕಾರ್) ಮತ್ತು ತಾಲ್ಲೂಕುಗಳಾಗಿ (ಪರಗಣ) ವಿಂಗಡಿಸಲಾಗಿತ್ತು. ನಗರಗಳಲ್ಲಿ ಕೊತ್ವಾಲ ಎಂಬ ಅಧಿಕಾರಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದನು.

**ಕಂದಾಯ ವ್ಯವಸ್ಥೆ:** ಅಕ್ಬರನ ಮಂತ್ರಿ ರಾಜಾ ತೋದರ್‌ಮಲ್ ಭೂಕಂದಾಯ ಪದ್ಧತಿಯನ್ನು ರೂಪಿಸಿದನು. ಭೂಮಿಯ ಫಲವತ್ತತೆಯ ಆಧಾರದಲ್ಲಿ ಕಂದಾಯವನ್ನು ನಿಗದಿ ಮಾಡಲಾಗಿತ್ತು.

**ಸಾಹಿತ್ಯ:** ಮೊಗಲರು ಪರ್ಷಿಯನ್ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ಅಕ್ಬರನ ಆಸ್ಥಾನದಲ್ಲಿ ಅಬುಲ್ ಫಜಲ್, ನಿಜಾಮುದ್ದೀನ್ ಮತ್ತು ಬದೌನಿ ಎಂಬವರು ಪ್ರಸಿದ್ಧ ಇತಿಹಾಸಕಾರರಾಗಿದ್ದರು. 'ಅಕ್ಬರ್‌ನಾಮಾ' ಅಬುಲ್ ಫಜಲನ ಪ್ರಮುಖ ಕೃತಿ. ಮೊಗಲ್ ರಾಜಕುಮಾರ 'ದಾರಾ ಷುಕೋ' ಶ್ರೇಷ್ಠ ವಿದ್ವಾಂಸನಾಗಿದ್ದು, ಭಗವದ್ಗೀತೆಯನ್ನು ಭಾಷಾಂತರ ಮಾಡಿದನು. ಹಿಂದಿ ಸಾಹಿತ್ಯವು ರಾಜಾಶ್ರಯ ಪಡೆಯದಿದ್ದರೂ ಸಂತರ ಯತ್ನದಿಂದ ಶ್ರೀಮಂತಗೊಂಡಿತು. 'ರಾಮಚರಿತ ಮಾನಸ' ಎಂಬ ತುಲಸೀದಾಸರ ಪ್ರಸಿದ್ಧ ಕೃತಿ ಇದೇ ಕಾಲದಲ್ಲಿ ರಚನೆಯಾಯಿತು.





ಹುಮಾಯೂನನ ಸಮಾಧಿ, ದಿಲ್ಲಿ

**ವಾಸ್ತುಶಿಲ್ಪ:** ದಿಲ್ಲಿಯಲ್ಲಿರುವ ಹುಮಾಯೂನನ ಸಮಾಧಿಯು ಅಕ್ಬರನ ಆರಂಭ ಕಾಲದ ನಿರ್ಮಾಣವಾಗಿದೆ. ಅವನು ಫತೇಪುರ ಸಿಕ್ರಿಯಲ್ಲಿ (ಆಗ್ರಾದ ಸಮೀಪ) ನೂತನ ರಾಜಧಾನಿಯನ್ನು ಕಟ್ಟಿಸಿದನು. ರಾಜಧಾನಿಯ ಭವ್ಯವಾದ ಅರಮನೆ, ಮಸೀದಿ ಮತ್ತು ಮಂಟಪಗಳು ದೇಶವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇಲ್ಲಿಯ ಜಾಮೀ ಮಸೀದಿಯ ಪ್ರವೇಶ ದ್ವಾರ (ಬುಲುಂದ್ ದರ್ವಾಜಾ) ಭಾರತದಲ್ಲಿಯೇ ಅತ್ಯುನ್ನತವಾಗಿದೆ.

ಮೊಗಲರ ವಾಸ್ತುಶಿಲ್ಪವು ತನ್ನ ಉಚ್ಛ್ರಾಯ ಸ್ಥಿತಿಯನ್ನು ಕಂಡದ್ದು ಷಹಜಹಾನನ ಕಾಲದಲ್ಲಿ. ಈತನು ಆಗ್ರಾ ಕೋಟೆಯೊಳಗೆ ಕಟ್ಟಿಸಿದ ಅರಮನೆ, ಮೋತಿ ಮಹಲ್ ಅಮೋಘವಾಗಿವೆ. ಆಗ್ರಾದಲ್ಲಿ ನಿರ್ಮಿಸಿದ ತಾಜ್‌ಮಹಲ್ ಮೊಗಲ್ ವಾಸ್ತುಶಿಲ್ಪಕ್ಕೆ ಕಳಸಪ್ರಾಯವಾಗಿದೆ. ಅವನ ರಾಣಿ ಮಮ್ತಾಜ್ ಮಹಲ್‌ಳ ನೆನಪಿಗಾಗಿ ಈ ಜಗತ್ಪ್ರಸಿದ್ಧ ಕಲಾಕೃತಿಯ ನಿರ್ಮಾಣವಾಯಿತು (17ನೇ ಶತಮಾನ). ಈ ಸಮಾಧಿ ಮಂದಿರದಲ್ಲಿ ಷಹಜಹಾನ್ ಮತ್ತು ಮಮ್ತಾಜಳ ಗೋರಿಗಳಿವೆ. ದಿಲ್ಲಿಯ ಪ್ರಸಿದ್ಧ ಕೆಂಪು ಕೋಟೆಯನ್ನು ಕೂಡ ಷಹಜಹಾನನು ಕಟ್ಟಿಸಿದನು.



ಕೋಟೆ, ಆಗ್ರಾ



ಕೆಂಪು ಕೋಟೆ, ದಿಲ್ಲಿ

**ಚಿತ್ರಕಲೆ:** ಮೊಗಲರ ಕಾಲದಲ್ಲಿ ನೂತನ ಚಿತ್ರಕಲಾ ಸಂಪ್ರದಾಯವೊಂದು ಹುಟ್ಟಿಕೊಂಡಿತು. ಇದನ್ನು ಚಿಕಣಿ ಎಂದು ಕರೆಯಲಾಗಿದೆ. ಅಕ್ಬರನ ಆಸ್ಥಾನದಲ್ಲಿ ನೂರಕ್ಕೂ ಹೆಚ್ಚು ಚಿತ್ರಕಾರರಿದ್ದರು. ಚಿತ್ರಕಲೆಯು ಜಹಾಂಗೀರನ ಆಶ್ರಯದಲ್ಲಿ ಪರಿಪಕ್ವಗೊಂಡಿತು. ಸಂಪ್ರದಾಯವಾದಿಯಾಗಿದ್ದ ಔರಂಗಜೇಬನು ಚಿತ್ರಕಲೆಗೆ ಪ್ರೋತ್ಸಾಹ ನೀಡಲಿಲ್ಲ.


ತಾನ್‌ಸೇನ್

**ಸಂಗೀತ:** ಅಕ್ಬರನ ಕಾಲದಲ್ಲಿ ಸಂಗೀತ ಕಲೆಗೆ ಪ್ರೋತ್ಸಾಹ ನೀಡಲಾಗಿತ್ತು. ಆಸ್ಥಾನದ ಸಂಗೀತಗಾರರನ್ನು ಏಳು ತಂಡಗಳಾಗಿ ವಿಂಗಡಿಸಲಾಗಿತ್ತು. ವಾರದಲ್ಲಿ ದಿನಕ್ಕೊಂದು ತಂಡದಂತೆ ಸಂಗೀತ ಕಚೇರಿಯನ್ನು ನಡೆಸಲಾಗುತ್ತಿತ್ತು. ತಾನ್‌ಸೇನನು ಅಕ್ಬರನ ಆಸ್ಥಾನದ ಅಮರ ಸಂಗೀತಗಾರ. ಜಹಾಂಗೀರ್ ಮತ್ತು ಷಹಜಹಾನನ ಕಾಲದಲ್ಲಿ ಕೂಡ ಸಂಗೀತಕ್ಕೆ ಪ್ರೋತ್ಸಾಹ ಸಿಕ್ಕಿತು. ಆದರೆ ಔರಂಗಜೇಬನು ಸಂಗೀತವನ್ನು ನಿಷೇಧ ಮಾಡಿದನು. ಆದರೂ ಸಂಗೀತವು ಜನಮನದಿಂದ ಅಳಿಯಲಿಲ್ಲ.

## ಮೊಗಲ್ ಸಾಮ್ರಾಜ್ಯದ ಅವನತಿ

ಔರಂಗಜೇಬನ ಕಾಲದಲ್ಲಿ ಸಾಮ್ರಾಜ್ಯವು ದುರ್ಬಲಗೊಂಡಿತು. ಇದಕ್ಕೆ ಕಾರಣಗಳು ಇವಾಗಿವೆ:

- ಸರದಾರರು ಭ್ರಷ್ಟರಾಗತೊಡಗಿದರು.
- ಸಿಂಹಾಸನದ ಉತ್ತರಾಧಿಕಾರಕ್ಕಾಗಿ ಭೀಕರ ಅಂತಃಕಲಹಗಳು ನಡೆದವು.
- ಪ್ರಾಂತ್ಯಾಧಿಕಾರಿಗಳು ಇದರ ಲಾಭಪಡೆದು ಸ್ವತಂತ್ರರಾಗಿ ಆಳ್ವಿಕೆ ನಡೆಸಿದರು.
- ಎಲ್ಲಕ್ಕಿಂತ ಮುಖ್ಯವಾಗಿ ಔರಂಗಜೇಬನ ನೀತಿಗೆ ಎಲ್ಲೆಡೆ ವಿರೋಧ ವ್ಯಕ್ತವಾಯಿತು.
- ಸಿಖ್ಖರು, ರಜಪೂತರು ಮತ್ತು ಮರಾಠರೊಂದಿಗೆ ದೀರ್ಘಕಾಲದ ಸಂಘರ್ಷಗಳು ಸಾಮ್ರಾಜ್ಯದ ಶಕ್ತಿಯನ್ನು ಪೂರ್ತಿಯಾಗಿ ಇಂಗಿಸಿತು.
- ಈ ನಡುವೆ ನಾದಿರ್‌ಷಾ ಎಂಬ ಪರ್ಷಿಯದ ದಾಳಿಕೋರನು ದಿಲ್ಲಿಯ ಮೇಲೆ ಆಕ್ರಮಣಗೈದನು. ಮೊಗಲರು ಎರಡು ನೂರು ವರ್ಷ ಕಾಲ ಸಂಗ್ರಹಿಸಿದ ಧನಕನಕಾದಿಗಳನ್ನು ಸೂರೆಗೈದನು. ಜಗತ್ಪ್ರಸಿದ್ಧ ಕೊಹಿನೂರ್ ವಜ್ರ ಹಾಗೂ ಷಹಜಹಾನನ ಮಯೂರ ಸಿಂಹಾಸನವನ್ನೂ ಅವನು ಒಯ್ದನು. ಮೊಗಲರ ಖಜಾನೆ ಬರಿದಾಯಿತು.

### ಕಾಲಗಣನೆ (ಸಾ.ಶ.)

| | | |
|---|---|---|
| ಬಾಬರ್ | – | ಸಾ.ಶ. 1526–1530 |
| ಅಕ್ಬರ್ | – | ಸಾ.ಶ. 1556–1605 |
| ಔರಂಗಜೇಬ್ | – | ಸಾ.ಶ. 1659–1707 |

### ಹೊಸ ಪದಗಳು

ಜೆಸಿಯಾ– ಮುಸಲ್ಮಾನ ದೊರೆಗಳು ಹಿಂದೂ ಜನರ ಮೇಲೆ ವಿಧಿಸುತ್ತಿದ್ದ ತಲೆ ಕಂದಾಯ.

ಯಾತ್ರಾ ತೆರಿಗೆ– ತೀರ್ಥ ಕ್ಷೇತ್ರಗಳಿಗೆ ಬರುವ ಹಿಂದೂಗಳ ಮೇಲೆ ವಿಧಿಸುತ್ತಿದ್ದ ತೆರಿಗೆ.

## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಹಾಲ್ದಿಘಾಟ್ ಕದನದಲ್ಲಿ ಅಕ್ಬರ್‌ನಿಂದ ಸೋತ ರಜಪೂತ ದೊರೆ________
2. ಭೂಕಂದಾಯ ಪದ್ಧತಿಯನ್ನು ರೂಪಿಸಿದ ಅಕ್ಬರನ ಮಂತ್ರಿ__________
3. ಚಿತ್ರಕಲೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ ಮೊಗಲ್ ದೊರೆ_________
4. ಸಂಗೀತವನ್ನು ನಿಷೇಧಿಸಿದ ಮೊಗಲ್ ದೊರೆ__________

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಮೊಗಲ್ ಸಾಮ್ರಾಜ್ಯದ ಸ್ಥಾಪಕ ಯಾರು?
2. ಅಕ್ಬರನನ್ನು ವಿರೋಧಿಸಿದ ಮೇವಾಡದ ರಾಣಾ ಯಾರು?
3. ತಾಜ್ ಮಹಲ್ ಎಲ್ಲಿದೆ? ಇದನ್ನು ಯಾರು ಕಟ್ಟಿಸಿದರು?
4. ಮೊಗಲರ ಕಾಲದ ಪ್ರಮುಖ ಇತಿಹಾಸಕಾರರನ್ನು ಹೆಸರಿಸಿ.

**III ಈ ಕೆಳಗಿನ ಪ್ರಶ್ನೆಗಳಿಗೆ ಗುಂಪಿನಲ್ಲಿ ಚರ್ಚಿಸಿ ಉತ್ತರಿಸಿ.**

1. ಇಬಾದತ್‌ಖಾನ ಕುರಿತು ಟಿಪ್ಪಣಿ ಬರೆಯಿರಿ.
2. ಅಕ್ಬರನ ಧಾರ್ಮಿಕ ನೀತಿಯನ್ನು ಪರಿಚಯಿಸಿ.
3. ಮೊಗಲರ ಕಾಲದ ವಾಸ್ತುಶಿಲ್ಪಗಳನ್ನು ಪಟ್ಟಿಮಾಡಿ.
4. ಮೊಗಲ್ ಸಾಮ್ರಾಜ್ಯದ ಅವನತಿಗೆ ಕಾರಣಗಳೇನು?

**IV ಕೆಳಗಿನ 'ಎ' ಪಟ್ಟಿ ಮತ್ತು 'ಬಿ' ಪಟ್ಟಿಯಲ್ಲಿನ ವಿಷಯಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| 1. ತುಳಸಿದಾಸ | ಅ) ಮಯೂರ ಸಿಂಹಾಸನ |
| 2. ಅಬುಲ್ ಫಜಲ್ | ಆ) ತಲೆಕಂದಾಯ |
| 3. ಷಹಜಹಾನ್ | ಇ) ರಾಮಚರಿತ ಮಾನಸ |
| 4. ಜೆಸಿಯಾ | ಈ) ಫತೇಪುರ ಸಿಕ್ರಿ |
| 5. ಅಕ್ಬರ್ | ಉ) ಅಕ್ಬರ್ ನಾಮ |

**ಚಟುವಟಿಕೆಗಳು**

1. ಮೊಗಲರ ವಾಸ್ತುಶಿಲ್ಪಗಳ ಚಿತ್ರಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿ.
2. ಮೊಗಲ್ ಕಾಲದ ಐತಿಹಾಸಿಕ ಸ್ಥಳಗಳನ್ನು ಭೂಪಟದಲ್ಲಿ ಗುರುತಿಸಿ.
3. ಅಕ್ಬರ್ ಹಾಗೂ ಔರಂಗಜೇಬನ ಧಾರ್ಮಿಕ ನೀತಿಯಲ್ಲಿನ ವಿರೋಧಾಭಾಸಗಳನ್ನು ಚರ್ಚಿಸಿ.

★ ★ ★

| ಪಾಠ 8 | ಮರಾಠರು |
|---|---|

Z5N1J2

**ಪಾಠದ ಪರಿಚಯ**

ಈ ಪಾಠದಲ್ಲಿ ಶಿವಾಜಿಯ ಬಾಲ್ಯ, ಆದರ್ಶಗಳು, ಮೊಗಲ್ ಸಾಮ್ರಾಜ್ಯ ಮತ್ತು ವಿಜಯಪುರ ಸೈನ್ಯಗಳನ್ನು ಹಿಮ್ಮೆಟ್ಟಿಸಿದ ಬಗೆ, ಮರಾಠ ರಾಜ್ಯದ ಸ್ಥಾಪನೆ, ಆಡಳಿತ ಕ್ರಮಗಳ ನಿರೂಪಣೆಯಿದೆ.

**ಸಾಮರ್ಥ್ಯಗಳು**

1] ಶಿವಾಜಿಯ ಜೀವನ, ಸಾಹಸ, ಗುಣ ಮತ್ತು ಸಾಧನೆಗಳನ್ನು ಅರ್ಥಮಾಡಿಕೊಳ್ಳುವುದು.

2] ಭೂಪಟದಲ್ಲಿ ಶಿವಾಜಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳನ್ನು ಗುರುತಿಸುವುದು.

ಉತ್ತರ ಭಾರತದಲ್ಲಿ ಮೊಗಲರು ಉಚ್ಛ್ರಾಯ ಕಾಲದಲ್ಲಿದ್ದಾಗ ದಖ್ಖನ್ ಪ್ರದೇಶದಲ್ಲಿ ಮೊಗಲರನ್ನು ಪ್ರತಿಭಟಿಸಿ ಅಧಿಕಾರಕ್ಕೆ ಬಂದವರು ಮರಾಠರು. ಮರಾಠ ಮನೆತನದ ಸ್ಥಾಪಕ ಶಿವಾಜಿ.

## ಶಿವಾಜಿ



ಶಿವಾಜಿ

ಶಿವಾಜಿಯು ಪುಣೆಯ ಬಳಿ ಇರುವ ಶಿವನೇರಿದುರ್ಗದಲ್ಲಿ ಜನಿಸಿದನು. ಅವನ ತಂದೆ ಷಹಜಿ ಭೋಸ್ಲೆ. ಆತನು ವಿಜಯಪುರ ಸುಲ್ತಾನನ ಬಳಿ ಉನ್ನತ ಹುದ್ದೆಯಲ್ಲಿ ಇದ್ದುದರಿಂದ ತಾಯಿ ಜೀಜಾಬಾಯಿಯ ಆಸರೆಯಲ್ಲಿ ಬೆಳೆದನು. ಗುರುವಾಗಿದ್ದ ದಾದಾಜಿ ಕೊಂಡದೇವ ಮತ್ತು ತಾನಾಜಿ ಮಾಲಸುರೆ ಶಿವಾಜಿಗೆ ಶಸ್ತ್ರಾಸ್ತ್ರ ವಿದ್ಯೆ ಕಲಿಸಿದರು. ಪ್ರಾರಂಭದಲ್ಲಿ ಶಿವಾಜಿಯು ಮರಾಠ ಮುಖಂಡರು ಮತ್ತು ಪಶ್ಚಿಮ ಘಟ್ಟಗಳ ಮಾವಳರೆಂಬ ಗಿರಿಜನರನ್ನು ಸೇರಿಸಿ ಪಡೆಯನ್ನು ಕಟ್ಟಿದನು.

**ಶಿವಾಜಿಯ ಹೆಜ್ಜೆ ಗುರುತು:** ಶಿವಾಜಿಯು ತನ್ನ 19ನೇ ವರ್ಷದಲ್ಲಿ ವಿಜಯಪುರದ ಆದಿಲ್ ಷಾನ ಅಧೀನದಲ್ಲಿದ್ದ ತೋರಣದುರ್ಗವನ್ನು ವಶಪಡಿಸಿಕೊಂಡನು. ನಂತರ ರಾಯಗಡ, ಸಿಂಹಗಡ, ಪ್ರತಾಪಗಡ ಮುಂತಾದ ಕೋಟೆಗಳನ್ನು ಒಂದೊಂದಾಗಿ ಗೆದ್ದುಕೊಂಡನು. ಇದರಿಂದ ಕುಪಿತನಾದ ವಿಜಯಪುರ ಸುಲ್ತಾನನು ಶಿವಾಜಿಯನ್ನು ಹತ್ತಿಕ್ಕಲು ತನ್ನ ಸೇನಾನಿ ಅಫ್ಜಲ್‌ಖಾನನನ್ನು ಕಳುಹಿಸಿದನು. ಅಫ್ಜಲ್‌ಖಾನ್ ಒಪ್ಪಂದದ ಮಾತುಗಳನ್ನಾಡಲು ಶಿವಾಜಿಯನ್ನು ಬರಹೇಳಿ, ಮೋಸದಿಂದ ಅವನನ್ನು ಕೊಲ್ಲಲೆತ್ನಿಸಿದನು. ಆದರೆ ಇದನ್ನು ನಿರೀಕ್ಷಿಸಿದ್ದ ಶಿವಾಜಿಯು ತಾನು ಅಡಗಿಸಿಟ್ಟುಕೊಂಡಿದ್ದ 'ವ್ಯಾಘ್ರನಖ' ಎಂಬ ಆಯುಧದಿಂದ ಅಫ್ಜಲ್‌ಖಾನನನ್ನು ಕೊಂದನು.

ಶಿವಾಜಿಯು ಪ್ರವರ್ಧಮಾನಕ್ಕೆ ಬರುತ್ತಿರುವುದನ್ನು ಅರಿತ ಔರಂಗಜೇಬನು ಶಿವಾಜಿಯನ್ನು ನಿಗ್ರಹಿಸಲು ದಖನ್ ಪ್ರದೇಶದ ಅಧಿಕಾರಿಯಾಗಿದ್ದ ಷಯಿಸ್ತಾಖಾನನನ್ನು ಕಳುಹಿಸಿಕೊಟ್ಟ. ಆದರೆ ಶಿವಾಜಿ ಷಯಿಸ್ತಾಖಾನನನ್ನು ಉಪಾಯದಿಂದ ಸೋಲಿಸಿದನು.

ಷಯಿಸ್ತಾಖಾನ್ ಪುಣೆಯ ಅರಮನೆಯಲ್ಲಿ ಬೀಡುಬಿಟ್ಟಿದ್ದ. ಎರಡು ವರ್ಷ ಕಳೆದರೂ ಶಿವಾಜಿಯನ್ನು ಸೆರೆಹಿಡಿಯಲು ಅವನಿಗೆ ಸಾಧ್ಯವಾಗಲಿಲ್ಲ. ಶಿವಾಜಿ ಸೈನಿಕರೊಂದಿಗೆ ವೇಷ ಬದಲಿಸಿ ಖಾನನ ವಾಸಸ್ಥಾನವನ್ನು ರಾತ್ರಿಯ ವೇಳೆ ಪ್ರವೇಶಿಸಿ ಆತನ ಮೇಲೆ ಹಠಾತ್ತನೆ ದಾಳಿಯಿಟ್ಟ. ಖಾನನು ಹೇಗೋ ದಾಳಿಯಿಂದ ಪಾರಾದರೂ ತನ್ನ ಹೆಬ್ಬೆರಳನ್ನು ಕಳೆದುಕೊಂಡ. ಷಯಿಸ್ತಾಖಾನ್ ಭಯಭೀತಿಯಿಂದ ಪುಣೆಯಿಂದ ಪಲಾಯನ ಮಾಡಿದ.

ಇದರಿಂದ ಕೆರಳಿದ ಔರಂಗಜೇಬ್‌ನು ರಾಜಾ ಜಯಸಿಂಹನ ನೇತೃತ್ವದಲ್ಲಿ ಕಳುಹಿಸಿ ಕೊಟ್ಟ ಸೈನ್ಯವು ಶಿವಾಜಿಯನ್ನು ಸೋಲಿಸಿತು. ಅಲ್ಲದೆ ಶಿವಾಜಿಯ ಹಲವು ಕೋಟೆಗಳನ್ನು ವಶಪಡಿಸಿಕೊಂಡಿತು. ಅಂತಿಮವಾಗಿ ಜಯಸಿಂಹನು ಒಪ್ಪಂದ ಮಾಡಿಕೊಳ್ಳಲು ಶಿವಾಜಿಯನ್ನು ದಿಲ್ಲಿಗೆ ಆಹ್ವಾನಿಸಿದನು. ದಿಲ್ಲಿಗೆ ಆಗಮಿಸಿದ ಶಿವಾಜಿಯನ್ನು ಔರಂಗಜೇಬ್ ಬಂಧಿಸಿ ಆಗ್ರಾದ ಸೆರೆಮನೆಯಲ್ಲಿಟ್ಟನು. ಆದರೆ ಶಿವಾಜಿಯು ಉಪಾಯದಿಂದ ಸೆರೆಯಿಂದ ತಪ್ಪಿಸಿಕೊಂಡು ತನ್ನ ರಾಜಧಾನಿ ಸೇರಿದನು.

ನಂತರ ಕಳೆದುಕೊಂಡಿದ್ದ ಎಲ್ಲಾ ಕೋಟೆಗಳನ್ನು ಮೊಗಲರಿಂದ ಗೆದ್ದುಕೊಂಡು ಸೂರತ್ ನಗರಕ್ಕೆ ಮುತ್ತಿಗೆ ಹಾಕಿ ಅಪಾರ ಸಂಪತ್ತನ್ನು ಸೂರೆ ಮಾಡಿದನು.





ಶಿವಾಜಿಯ ಕೋಟೆ, ರಾಯಗಡ

**ಶಿವಾಜಿಯ ಪಟ್ಟಾಭಿಷೇಕ:** ನಂತರ ರಾಯಗಡದಲ್ಲಿ 'ಛತ್ರಪತಿ' ಎಂಬ ಬಿರುದಿನೊಂದಿಗೆ ಶಿವಾಜಿಯ ಪಟ್ಟಾಭಿಷೇಕ ಆಯಿತು. ಮುಂದೆ ಶಿವಾಜಿಯು ಜಿಂಜಿ, ವೆಲ್ಲೂರು, ಮೈಸೂರು ಪ್ರಾಂತದ ವಿಶಾಲವಾದ ಭೂಭಾಗಗಳನ್ನು ಗೆದ್ದುಕೊಂಡು ಅಪಾರ ಸಂಪತ್ತನ್ನು ಸಂಗ್ರಹಿಸಿದನು. ಆದರೆ ಮರಾಠರ ವೈಭವವನ್ನು ನೋಡಲು ಶಿವಾಜಿ ಬಹುಕಾಲ ಬಾಳಲಿಲ್ಲ.

## ಶಿವಾಜಿಯ ಆಡಳಿತ

ಆಡಳಿತದಲ್ಲಿ ಸಹಕರಿಸಲು **ಅಷ್ಟ ಪ್ರಧಾನರು** ಎಂಬ ಎಂಟು ಮಂತ್ರಿಗಳಿದ್ದರು. ಪ್ರಧಾನ ಮಂತ್ರಿಯನ್ನು **ಪೇಶ್ವೆ** ಎಂದು ಕರೆಯಲಾಗುತ್ತಿತ್ತು. ಶಿವಾಜಿಯ ಮರಣ ನಂತರದಲ್ಲಿ ಮರಾಠ ರಾಜ್ಯದಲ್ಲಿ ಉಂಟಾದ ರಾಜಕೀಯ ಬಿಕ್ಕಟ್ಟನ್ನು ಪೇಶ್ವೆಗಳು ಶಮನಗೊಳಿಸಿ ಆಡಳಿತವನ್ನು ಸುಗಮಗೊಳಿಸಿದರು. ಮುಂದಿನ ಮರಾಠ ಆಡಳಿತ ಪೇಶ್ವೆಗಳ ಆಡಳಿತವೇ ಆಗಿತ್ತು. ಬಾಲಾಜಿ ವಿಶ್ವನಾಥ, ಒಂದನೆಯ ಬಾಜೀರಾಯ ಮತ್ತು ಬಾಲಾಜಿ ಬಾಜೀರಾಯ ಇವರು ಮರಾಠ ರಾಜ್ಯವನ್ನಾಳಿದ ಪ್ರಮುಖ ಪೇಶ್ವೆಗಳು.

### ಹೊಸ ಪದಗಳು

**ಗೆರಿಲ್ಲ ಯುದ್ಧ ತಂತ್ರ–** ಶತ್ರುಗಳನ್ನು ಮುಖಾಮುಖಿ ಎದುರುಗೊಳ್ಳದೆ ಮರೆಮಾಚಿ ದಾಳಿ ನಡೆಸುವುದು.

**ಛತ್ರಪತಿ** – ಮಹಾರಾಜ.

## ಅಭ್ಯಾಸಗಳು

**I ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದದಿಂದ ಭರ್ತಿ ಮಾಡಿ.**

1. ಶಿವಾಜಿಯ ಗುರು__________
2. ಶಿವಾಜಿಯು ಅಫ್ಜಲ್ ಖಾನನನ್ನು __________ ಎಂಬ ಆಯುಧದಿಂದ ಕೊಂದನು.
3. ಶಿವಾಜಿಯನ್ನು ಸೋಲಿಸಿದ ಔರಂಗಜೇಬನ ದಂಡನಾಯಕ__________

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಶಿವಾಜಿಯು ಎಲ್ಲಿ ಜನಿಸಿದನು?
2. ಶಿವಾಜಿಯ ತಂದೆ ತಾಯಿ ಯಾರು?
3. ವಿಜಯಪುರದ ಸುಲ್ತಾನನು ಶಿವಾಜಿಯನ್ನು ಏಕೆ ವಿರೋಧಿಸಿದನು?
4. ಷಯಿಸ್ತಾಖಾನ್ ಯಾರು?
5. ಶಿವಾಜಿಯ ಪಟ್ಟಾಭಿಷೇಕ ಎಲ್ಲಿ ನಡೆಯಿತು? ಮತ್ತು ಅವನು ಧರಿಸಿದ ಬಿರುದು ಯಾವುದು?
6. ಮರಾಠ ರಾಜ್ಯವನ್ನಾಳಿದ ಪ್ರಮುಖ ಪೇಶ್ವೆಗಳನ್ನು ಹೆಸರಿಸಿ.

**ಚಟುವಟಿಕೆ:**

ಭೂಪಟದಲ್ಲಿ ಶಿವಾಜಿಗೆ ಸಂಬಂಧಿಸಿದ ಐತಿಹಾಸಿಕ ಸ್ಥಳಗಳನ್ನು ಗುರುತಿಸಿ.

★ ★ ★

# ಪಾಠ 9 ನಮ್ಮ ಸಂವಿಧಾನ

Z7R3X8

**ಪಾಠದ ಪರಿಚಯ**

ಈ ಪಾಠದಲ್ಲಿ ಸಂವಿಧಾನದ ಅರ್ಥ, ಮಹತ್ವ, ರಚನೆ ಹಾಗೂ ಅದರ ಮುಖ್ಯ ಲಕ್ಷಣಗಳನ್ನು ನಿರೂಪಿಸಲಾಗಿದೆ.

**ಸಾಮರ್ಥ್ಯಗಳು**

1] ಸಂವಿಧಾನದ ಅರ್ಥ ಮತ್ತು ಮಹತ್ವವನ್ನು ತಿಳಿಯುವುದು.

2] ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ಅರ್ಥೈಸಿಕೊಳ್ಳುವುದು.

3] ಭಾರತ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಅರಿಯುವುದು ಮತ್ತು ಮೆಚ್ಚುವುದು.

4] ಸಂವಿಧಾನದ ರಚನಾ ಕಾರ್ಯದಲ್ಲಿ ಪಾಲ್ಗೊಂಡ ಗಣ್ಯ ವ್ಯಕ್ತಿಗಳ ವಿವರ ತಿಳಿಯುವುದು.

5] 'ಗಣರಾಜ್ಯ'ದ ಕಲ್ಪನೆಯನ್ನು ತಿಳಿಯುವುದು.

6] 'ಸರ್ವಧರ್ಮಸಮಭಾವ' ಎಂಬ ತತ್ವದ ಆಶಯವನ್ನು ಅರಿತು ನಿತ್ಯಜೀವನದಲ್ಲಿ ಈ ಮೌಲ್ಯವನ್ನು ರೂಢಿಸಿಕೊಳ್ಳಲು ಶಕ್ತರಾಗುವುದು.

7] ಸಂವಿಧಾನವನ್ನು ಗೌರವಿಸುವ ಪ್ರವೃತ್ತಿ ಬೆಳೆಸಿಕೊಳ್ಳುವುದು.



## ಸಂವಿಧಾನದ ಅರ್ಥ ಮತ್ತು ಮಹತ್ವ

ಸಂವಿಧಾನವೆಂದರೆ ಒಂದು ದೇಶವು ಅನುಸರಿಸುವ ಮೂಲಭೂತ ಕಾನೂನು. ಅದು ಸರ್ಕಾರದ ಅಂಗಗಳು, ಅವುಗಳ ಅಧಿಕಾರ ಹಾಗೂ ಕಾರ್ಯಗಳನ್ನು ನಿರೂಪಿಸುತ್ತದೆ. ಸಂವಿಧಾನದಲ್ಲಿ ಪ್ರಜೆಗಳ ಹಕ್ಕುಗಳು ಮತ್ತು ಕರ್ತವ್ಯಗಳ ಉಲ್ಲೇಖವೂ ಇರುತ್ತದೆ. ಸಂವಿಧಾನವು ಸರಕಾರಕ್ಕೆ ಮಾರ್ಗಸೂಚಿಯಾಗಿರುತ್ತದೆ. ಸಂವಿಧಾನವನ್ನು ಯಾರೂ ಉಲ್ಲಂಘಿಸುವಂತಿಲ್ಲ.

**ಸಂವಿಧಾನದ ಮಹತ್ವ:** ಸಂವಿಧಾನವು ದೇಶದ ಮೂಲಭೂತ ಕಾನೂನು ಆಗಿರುವುದರಿಂದ ಅದು ಮಹತ್ವದ್ದಾಗಿದೆ. ಅದಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ. ರಾಷ್ಟ್ರಪತಿ, ಪ್ರಧಾನಮಂತ್ರಿ, ಸಂಸತ್ ಸದಸ್ಯರು, ನ್ಯಾಯಾಧೀಶರು, ಅಧಿಕಾರಿ ವರ್ಗ ಹಾಗೂ ದೇಶದ ಎಲ್ಲರೂ ಸಂವಿಧಾನದ ಪಾಲನೆ ಮಾಡಲು ಕಟಿಬದ್ಧರು.

- ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ಸೂತ್ರವನ್ನು ಎತ್ತಿಹಿಡಿದು ಪ್ರಜೆಗಳ ಹಕ್ಕುಗಳನ್ನು ರಕ್ಷಿಸುತ್ತದೆ.

- ಸರ್ಕಾರ ನಿರ್ವಹಿಸಬೇಕಾದ ಕಾರ್ಯಗಳಿಗೆ ಮಾರ್ಗಸೂಚಿಯಾಗಿ ಕಾರ್ಯನಿರ್ವಹಿಸುತ್ತದೆ
- ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಕಾರ್ಯಗಳನ್ನು ನಿರ್ದೇಶಿಸಿ ಇವುಗಳ ನಡುವೆ ಸಮನ್ವಯ ಸಾಧಿಸಲು ನೆರವಾಗುತ್ತದೆ.
- ಸಂವಿಧಾನವು ಸರ್ಕಾರ ಮತ್ತು ವ್ಯಕ್ತಿಗಳ ನಡುವೆ ಉತ್ತಮ ಸಂಬಂಧಗಳನ್ನು ಏರ್ಪಡಿಸುತ್ತದೆ.

**ಚಟುವಟಿಕೆ:** ಡಾ. ಬಿ.ಆರ್. ಅಂಬೇಡ್ಕರ್‌ರವರು ಯಾರು? ಅವರನ್ನು ನಾವಿಂದು ಕೃತಜ್ಞತೆಯಿಂದ ಏಕೆ ನೆನೆಯುತ್ತೇವೆ? ಗುಂಪಿನಲ್ಲಿ ಚರ್ಚಿಸಿ.

## ಭಾರತ ಸಂವಿಧಾನದ ರಚನಾ ಸಭೆ

ಭಾರತದ ಸಂವಿಧಾನವನ್ನು 'ಸಂವಿಧಾನ ರಚನಾ ಸಭೆ' ಎಂಬ ವಿಶೇಷ ಸಭೆಯು ಸಿದ್ಧಪಡಿಸಿತು. ಈ ಸಭೆಯ ಸದಸ್ಯರು ಅದರ ಪ್ರಥಮ ಅಧಿವೇಶನದಲ್ಲಿ ಡಾ. ರಾಜೇಂದ್ರ ಪ್ರಸಾದ್‌ರವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು.

ಸಂವಿಧಾನ ಸಭೆಯಲ್ಲಿ 299 ಮಂದಿ ಸದಸ್ಯರಿದ್ದರು. ಡಿಸೆಂಬರ್ 9, 1946ರಲ್ಲಿ ಅದರ ಪ್ರಥಮ ಅಧಿವೇಶನ ನಡೆಯಿತು.



## ಕರಡು ಸಮಿತಿ

ಸಂವಿಧಾನ ರಚನಾ ಸಭೆಯು ತನ್ನ ಕಾರ್ಯವನ್ನು ಚುರುಕುಗೊಳಿಸುವ ಉದ್ದೇಶದಿಂದ ಕೆಲವು ಸಮಿತಿಗಳನ್ನು ರಚಿಸಿತು. ಅಲ್ಲದೆ ಸಂವಿಧಾನದ ಕರಡು ಪ್ರತಿಯನ್ನು ಸಿದ್ಧಪಡಿಸಲು 'ಸಂವಿಧಾನ ಕರಡು ಸಮಿತಿ'ಯನ್ನು ನೇಮಿಸಿತು. ಈ ಸಮಿತಿಯ ಅಧ್ಯಕ್ಷರು ಡಾ. ಬಿ.ಆರ್. ಅಂಬೇಡ್ಕರ್.

- ಸದಸ್ಯರು ಸಂವಿಧಾನದ ಕರಡು ಪ್ರತಿಯನ್ನು ಪರಿಶೀಲಿಸಿ 2473 ತಿದ್ದುಪಡಿಗಳನ್ನು ಸೂಚಿಸಿದ್ದರು. ಕರಡು ಸಂವಿಧಾನ ಮತ್ತು ತಿದ್ದುಪಡಿಗಳನ್ನು ಸಂವಿಧಾನ ರಚನಾ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಹೀಗೆ ಸಂವಿಧಾನಕ್ಕೆ ಅಂತಿಮ ರೂಪ ನೀಡಲು ಸುಮಾರು ಮೂರು ವರ್ಷಗಳು ಬೇಕಾದವು.
- ಡಾ. ಬಿ.ಆರ್. ಅಂಬೇಡ್ಕರ್ 15–8–1947 ರಿಂದ 26–1–1950 ರವರೆಗಿನ ಅವಧಿಯಲ್ಲಿ ಕಾನೂನು ಮಂತ್ರಿಗಳಾಗಿದ್ದರು.

ಭಾರತದ ಸಂವಿಧಾನವನ್ನು ಜನವರಿ 26, 1950ರಂದು ಜಾರಿಗೊಳಿಸಲಾಯಿತು.ಈ ಸಂವಿಧಾನವು ಭಾರತವನ್ನು ಗಣರಾಜ್ಯವೆಂದು ಘೋಷಣೆ ಮಾಡಿತು.ಅದರ ನೆನಪಿಗಾಗಿ ನಾವು ಪ್ರತಿ ವರ್ಷವೂ ಜನವರಿ 26 ರಂದು ಗಣರಾಜ್ಯೋತ್ಸವವನ್ನು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸುತ್ತೇವೆ. ಪ್ರತಿ ವರ್ಷ ನವೆಂಬರ್ 26ರಂದು ಸಂವಿಧಾನ ದಿನವನ್ನು ಆಚರಿಸಲಾಗುತ್ತದೆ. ಯಾಕೆಂದರೆ ಇದು ಸಂವಿಧಾನಕ್ಕೆ ಅಧಿಕೃತ ಒಪ್ಪಿಗೆ ನೀಡಿದ ದಿನವಾಗಿದೆ.

ಸಂವಿಧಾನದ ನಿರ್ದೇಶನದಂತೆ ಭಾರತದಲ್ಲಿ 1951–52ರಲ್ಲಿ ಪ್ರಥಮ ಮಹಾಚುನಾವಣೆಗಳು ನಡೆದವು.'ರಾಜ್ಯಸಭೆ' ಮತ್ತು 'ಲೋಕಸಭೆ' ಎಂಬ ಎರಡು ಸದನಗಳನ್ನೊಳಗೊಂಡ ಮೊದಲ ಚುನಾಯಿತ ಸಂಸತ್ತು (ಪಾರ್ಲಿಮೆಂಟ್) 1952ರಲ್ಲಿ ಅಸ್ತಿತ್ವಕ್ಕೆ ಬಂದಿತು.

**ನಮ್ಮ ಸಂವಿಧಾನದ ಗಾತ್ರ:** ಭಾರತ ಸಂವಿಧಾನವು 395 ವಿಧಿಗಳನ್ನು ಹಾಗೂ 12 ಪರಿಚ್ಛೇದಗಳನ್ನು ಒಳಗೊಂಡಿದೆ.

## ಪ್ರಸ್ತಾವನೆ

ಸಂವಿಧಾನದ ಆರಂಭದಲ್ಲಿ ಪೀಠಿಕೆಯ ರೂಪದಲ್ಲಿ 'ಪ್ರಸ್ತಾವನೆ' ಎಂಬುದಿದೆ. ಸಂವಿಧಾನದ ಹೃದಯದಂತಿರುವ ಈ ಪ್ರಸ್ತಾವನೆಯು ಜನತೆಯ ಆದರ್ಶಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸಿದೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ, ವ್ಯಕ್ತಿಗೌರವ, ಭ್ರಾತೃತ್ವ ಹಾಗೂ ರಾಷ್ಟ್ರೀಯ ಏಕತೆ ಮುಂತಾದವುಗಳು ಅಂತಹ ತತ್ವಾದರ್ಶಗಳು.

### ಭಾರತದ ಸಂವಿಧಾನ
### ಪ್ರಸ್ತಾವನೆ

"**ಭಾರತದ ಜನಗಳಾದ** ನಾವು ಭಾರತವನ್ನು ಒಂದು [**ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ**] ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,
[ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು]
ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃ ಭಾವನೆಯನ್ನು
ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;


**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ **ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**"

## ಸಂವಿಧಾನದ ಮುಖ್ಯ ಲಕ್ಷಣಗಳು

ನಮ್ಮ ಸಂವಿಧಾನಕ್ಕೆ ತನ್ನದೇ ಆದ ಕೆಲವು ಲಕ್ಷಣಗಳಿವೆ.

- **ಲಿಖಿತ ಸಂವಿಧಾನ:** ಭಾರತ ಸಂವಿಧಾನವು ಲಿಖಿತ ರೂಪದಲ್ಲಿದೆ. ಇದು ಪ್ರಪಂಚದಲ್ಲಿಯೇ ಅತಿ ವಿಸ್ತಾರವಾದ ಸಂವಿಧಾನವಾಗಿದೆ. ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವುಗಳ ರಚನೆ, ಅಧಿಕಾರ ಮತ್ತು ಕಾರ್ಯವ್ಯಾಪ್ತಿಯನ್ನು ಇದರಲ್ಲಿ ಹೇಳಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಒಂದೇ ಸಂವಿಧಾನ ಇದೆ. ಆದ್ದರಿಂದ ಸಂವಿಧಾನದ ಗಾತ್ರ ವಿಶಾಲವಾಗಿದೆ.


- **ಗಣರಾಜ್ಯ:** ಭಾರತವು ಒಂದು ಗಣರಾಜ್ಯವೆಂದು ಸಂವಿಧಾನವು ಸಾರಿದೆ. ಗಣರಾಜ್ಯದಲ್ಲಿ ರಾಜರ ಆಳ್ವಿಕೆಯಿರುವುದಿಲ್ಲ. ಬದಲಾಗಿ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳ ಆಳ್ವಿಕೆಯಿರುತ್ತದೆ. ಇಂತಹ ರಾಜಕೀಯ ವ್ಯವಸ್ಥೆಯನ್ನು ಹೊಂದಿರುವ ಭಾರತವು ಒಂದು 'ಪ್ರಜಾಸತ್ತಾತ್ಮಕ ಗಣರಾಜ್ಯ'ವಾಗಿದೆ.



ಡಾ. ರಾಜೇಂದ್ರ ಪ್ರಸಾದ್
'ಸಂವಿಧಾನ ಸಭೆ'ಯ ಅಧ್ಯಕ್ಷರು,
ಭಾರತದ ಪ್ರಥಮ ರಾಷ್ಟ್ರಪತಿ



ಡಾ.ಬಿ.ಆರ್.ಅಂಬೇಡ್ಕರ್
'ಸಂವಿಧಾನ ಕರಡು ಸಮಿತಿ'ಯ ಅಧ್ಯಕ್ಷರು



ಜವಾಹರಲಾಲ್ ನೆಹರು
ಭಾರತದ ಪ್ರಥಮ ಪ್ರಧಾನಿ



- **ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು:** ಸಂವಿಧಾನವು ಪ್ರಸ್ತುತ ಪೌರರಿಗೆ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಅವುಗಳನ್ನು ಮೊಟಕುಗೊಳಿಸುವ ಯಾವುದೇ ಶಾಸನವನ್ನಾಗಲಿ, ನಿಯಮಗಳನ್ನಾಗಲಿ, ಯಾವುದೇ ರಾಜ್ಯವು ಮಾಡುವಂತಿಲ್ಲ. ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ಅವುಗಳನ್ನು ರಕ್ಷಿಸುವ ಅಧಿಕಾರ ನ್ಯಾಯಾಂಗಕ್ಕಿದೆ. ನಾಗರಿಕರು ಹಕ್ಕುಗಳನ್ನು ತಮಗಿಷ್ಟ ಬಂದಂತೆ ಚಲಾಯಿಸಿ ಸಾಮಾಜಿಕ ಅಶಾಂತಿಗೆ ಕಾರಣವಾಗಬಾರದು ಅಥವಾ ಕಾನೂನು ವ್ಯವಸ್ಥೆಗೆ ಭಂಗವನ್ನುಂಟು ಮಾಡಬಾರದು. ನಾಗರಿಕರು ಮಾಡಬೇಕಾದ ಹನ್ನೊಂದು ಕರ್ತವ್ಯಗಳನ್ನೂ ಸಹ ಸಂವಿಧಾನದಲ್ಲಿ ಅಳವಡಿಸಲಾಗಿದೆ.

- **ಜಾತ್ಯಾತೀತ (ಸೆಕ್ಯುಲರಿಸಂ):** ಸಂವಿಧಾನವು 'ಸರ್ವಧರ್ಮಸಮಭಾವ' ತತ್ವವನ್ನು ಎತ್ತಿಹಿಡಿದಿದೆ. ಇದನ್ನು 'ಸರ್ವಧರ್ಮ' 'ಸಮಭಾವ' ಎಂದು ವ್ಯಾಖ್ಯಾನಿಸಲಾಗುತ್ತಿದೆ. ಸರ್ಕಾರವು ಧರ್ಮದ ಹೆಸರಿನಲ್ಲಿ ಪಕ್ಷಪಾತ ಮಾಡದೆ ಎಲ್ಲ ಮತಧರ್ಮಗಳನ್ನು ಸಮಾನ ದೃಷ್ಟಿಯಿಂದ ನೋಡಿಕೊಳ್ಳಬೇಕೆಂಬುದು ಇದರರ್ಥ. ಸರ್ಕಾರವು ಯಾವುದೇ ಮತಧರ್ಮವನ್ನು ದೇಶದ ಧರ್ಮವೆಂದು ಪರಿಗಣಿಸುವುದಿಲ್ಲ. ಅದು ಪ್ರತಿಯೊಬ್ಬನಿಗೂ ತನ್ನ ಧರ್ಮಾಚರಣೆ ಹಾಗೂ ನಂಬಿಕೆಯ ಸ್ವಾತಂತ್ರ್ಯ ನೀಡಿದೆ. ಧಾರ್ಮಿಕ ಸ್ವಾತಂತ್ರ್ಯವನ್ನು ಸಾಮಾಜಿಕ ಹಿತದೃಷ್ಟಿಯಿಂದ ನಿಯಂತ್ರಿಸುವ ಅಧಿಕಾರ ಸರ್ಕಾರಕ್ಕೆ ಇದೆ.

- **ಸ್ವತಂತ್ರ ನ್ಯಾಯಾಂಗ:** ನಮ್ಮ ನ್ಯಾಯಾಂಗವು ಶಾಸಕಾಂಗ ಹಾಗೂ ಕಾರ್ಯಾಂಗದಿಂದ ಸ್ವತಂತ್ರವಾಗಿದ್ದು ಸಾಕಷ್ಟು ಅಧಿಕಾರವನ್ನು ಹೊಂದಿದೆ. ಸರ್ಕಾರವಾಗಲಿ, ಸಂಸತ್ ಆಗಲಿ ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಕಾನೂನಿನ ಎದುರು ಎಲ್ಲರೂ ಸಮಾನರು, ನ್ಯಾಯ ಪಡೆಯುವ ಅವಕಾಶ ಎಲ್ಲರಿಗಿದೆ ಎಂಬ ತತ್ವವನ್ನು ನ್ಯಾಯಾಂಗ ಎತ್ತಿ ಹಿಡಿದಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಎಲ್ಲರೂ ಪಾಲಿಸಲೇ ಬೇಕು ಮತ್ತು ಅದು ಅಂತಿಮ ನಿರ್ಧಾರ.

- **ವಯಸ್ಕ ಮತದಾನ ಪದ್ಧತಿ:** ವಯಸ್ಕ ನಾಗರಿಕರು (18 ವರ್ಷ ಮೇಲ್ಪಟ್ಟವರು) ಮತದಾನ ಮಾಡಿ ಪ್ರತಿನಿಧಿಗಳನ್ನು ಚುನಾಯಿಸುವ ಕ್ರಮವನ್ನು 'ವಯಸ್ಕ ಮತದಾನ ಪದ್ಧತಿ' ಎನ್ನುವರು. ನಾಗರಿಕರೆಲ್ಲರು ಯಾವುದೇ ಭೇದಭಾವವಿಲ್ಲದೆ ಮತ ಚಲಾಯಿಸಬೇಕು. ಆಗ ಉತ್ತಮ ಸರ್ಕಾರ ಸ್ಥಾಪನೆಯಾಗುತ್ತದೆ. ಭಾರತದ ಸಂವಿಧಾನದ ಆಶಯವು ಸುಖೀರಾಜ್ಯವನ್ನು (ವೆಲ್‌ಫೇರ್ ಸ್ಟೇಟ್) ಸ್ಥಾಪಿಸುವುದಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಎಲ್ಲರಿಗೂ ನೀಡುವ ಗುರಿಯನ್ನು ಇಟ್ಟುಕೊಂಡಿರುವ ರಾಜ್ಯವನ್ನು ಸಾಮಾನ್ಯವಾಗಿ ಸುಖೀರಾಜ್ಯ ಎನ್ನುವರು.

- **ಚುನಾವಣಾ ಪದ್ಧತಿ:** ಭಾರತವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿದೆ. ಕಳೆದ ಆರು ದಶಕಗಳಿಂದ ಚುನಾವಣೆಗಳು ಸಾಮಾನ್ಯವಾಗಿ ಕಾಲಕಾಲಕ್ಕೆ ನಡೆದಿವೆ. ಈ ಅವಧಿಯಲ್ಲಿ ಪ್ರಜಾಪ್ರಭುತ್ವ ಪದ್ಧತಿಯು ದೇಶದಲ್ಲಿ ಸಾಕಷ್ಟು ಆಳವಾಗಿ ಬೇರೂರಿದೆ. ಇದರ ಕಾರ್ಯಾಚರಣೆಯಲ್ಲಿ ಕೆಲವು ನ್ಯೂನ್ಯತೆಗಳು ಕಂಡುಬಂದರೂ ಈ ಪದ್ಧತಿಯು ತೃಪ್ತಿಕರವಾಗಿದೆ.

### ಹೊಸ ಪದಗಳು

ಸಂವಿಧಾನ ಕರಡು ಸಮಿತಿ – 'ಸಂವಿಧಾನ ರಚನಾ ಸಭೆ'ಯಲ್ಲಿ ಮಂಡಿಸಲಾದ ಸಂವಿಧಾನದ ಮೂಲ ಕಚ್ಚಾ ಪ್ರತಿಯನ್ನು (ತಿದ್ದಬೇಕಾದ ಪ್ರತಿ) ಸಿದ್ಧಪಡಿಸಿದ ಸಮಿತಿ. ಪ್ರಜಾಸತ್ತೆ – ಪ್ರಜೆಗಳ ಆಳ್ವಿಕೆ, ಪ್ರಜಾಪ್ರಭುತ್ವ.

## ಅಭ್ಯಾಸಗಳು

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಸಂವಿಧಾನ ಎಂದರೇನು?
2. ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಯಾರಾಗಿದ್ದರು?
3. ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ರಚನೆಯಲ್ಲಿ ವಹಿಸಿದ ಪಾತ್ರವೇನು?
4. ಭಾರತವನ್ನು ಯಾವ ದಿನದಂದು ಗಣರಾಜ್ಯವೆಂದು ಘೋಷಣೆ ಮಾಡಲಾಯಿತು?
5. ವಯಸ್ಕ ಮತದಾನ ಪದ್ಧತಿ ಎಂದರೇನು?
6. ಗಣರಾಜ್ಯವೆಂದರೇನು?
7. ಸರ್ವಧರ್ಮಸಮಭಾವ ಎಂದರೇನು?

**ಚರ್ಚಿಸಿ**

ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ ತತ್ವಗಳು ಮತ್ತು ಆದರ್ಶಗಳ ಬಗ್ಗೆ ಚರ್ಚಿಸಿ.

**ಚಟುವಟಿಕೆಗಳು.**

1. ನಮ್ಮ ಸಂವಿಧಾನವು ನಮಗೆಲ್ಲರಿಗೂ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ಕೊಟ್ಟಿದೆ. ಹಕ್ಕುಗಳು ಹಾಗೂ ಕರ್ತವ್ಯಗಳಲ್ಲಿ ನಿಮ್ಮ ದೃಷ್ಟಿಯಲ್ಲಿ ಯಾವುವು ಮುಖ್ಯ? ಗುಂಪುಗಳಲ್ಲಿ ಚರ್ಚಿಸಿ ನಿಮ್ಮ ಅಭಿಪ್ರಾಯಗಳನ್ನು ಬಿಂದುಗಳ ರೂಪದಲ್ಲಿ ಉಲ್ಲೇಖಿಸಿ.
2. ಸಂವಿಧಾನ ರಚನಾ ಸಭೆಯಲ್ಲಿನ ಸದಸ್ಯರ ಭಾವಚಿತ್ರಗಳನ್ನು ಸಂಗ್ರಹಿಸಿ.

☆ ☆ ☆

| ಪಾಠ 10 | ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು |
|---|---|

Q4J1C3

**ಪಾಠದ ಪರಿಚಯ**

ನಮ್ಮ ಸಂವಿಧಾನವು ಭಾರತದ ಪೌರರಿಗೆ ನೀಡಿರುವ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಈ ಪಾಠದಲ್ಲಿ ಪರಿಚಯಿಸಲಾಗಿದೆ.

**ಸಾಮರ್ಥ್ಯಗಳು**

1] ಸ್ವಾಭಾವಿಕ ಹಕ್ಕುಗಳು ಮತ್ತು ಮೂಲಭೂತ ಹಕ್ಕುಗಳಿಗಿರುವ ವ್ಯತ್ಯಾಸ ತಿಳಿಯುವುದು.

2] ಭಾರತದ ಪ್ರಜೆಗೆ ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳನ್ನು ಅರ್ಥೈಸಿಕೊಳ್ಳುವುದು.

3] ಸಂವಿಧಾನದಲ್ಲಿ ಅಳವಡಿಸಿರುವ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಅರಿತು ತಮ್ಮ ಜೀವನದಲ್ಲಿ ಅವುಗಳನ್ನು ಪಾಲಿಸಲು ಸಮರ್ಥರಾಗುವುದು.

4] ತಮಗಿರುವ ಹಕ್ಕುಗಳನ್ನು ಅನುಭವಿಸಲು ಅಡಚಣೆಯಾದಾಗ ಅವುಗಳನ್ನು ಮರಳಿ ಪಡೆಯುವ ವಿಧಾನಗಳನ್ನು ಕಂಡುಕೊಳ್ಳುವುದು.



**'ಹಕ್ಕು'** ಎಂದರೆ ನಾಗರಿಕರಿಗೆ ಸಲ್ಲಬೇಕಾದ ಅಧಿಕಾರ. ಅದು **'ಸ್ವಾಭಾವಿಕ ಹಕ್ಕು'** ಆಗಿರಬಹುದು. ಉದಾಹರಣೆ; ಬದುಕುವ ಹಕ್ಕು, ಜೀವರಕ್ಷಣೆಯ ಹಕ್ಕು. ಇಲ್ಲವೆ **'ನ್ಯಾಯ ಸಮ್ಮತ ಹಕ್ಕು'** ಆಗಿರಬಹುದು. ಉದಾಹರಣೆ; ಸಮಾನತೆಯ ಹಕ್ಕು, ವಿದ್ಯಾಭ್ಯಾಸದ ಹಕ್ಕು.

ವ್ಯಕ್ತಿಯ ವಿಕಾಸಕ್ಕೆ ಮತ್ತು ರಾಷ್ಟ್ರದ ಅಭ್ಯುದಯಕ್ಕೆ ಕೆಲವು ಸ್ವಾತಂತ್ರ್ಯಗಳು ಮತ್ತು ಮೂಲಭೂತ ಹಕ್ಕುಗಳು ಅನಿವಾರ್ಯ. ಆದ್ದರಿಂದಲೇ ಸಂವಿಧಾನವು ಪ್ರಜೆಗಳಿಗೆ ಕೆಲವು ಮೂಲಭೂತ ಹಕ್ಕುಗಳನ್ನು ನೀಡಿದೆ.

## ಮೂಲಭೂತ ಹಕ್ಕುಗಳ ಅರ್ಥ

ವ್ಯಕ್ತಿಯ ವ್ಯಕ್ತಿತ್ವ ವಿಕಾಸಕ್ಕಾಗಿ ಸಂವಿಧಾನ ನೀಡಿರುವ ಅವಕಾಶಗಳನ್ನು ಮೂಲಭೂತ ಹಕ್ಕುಗಳೆಂದು ಕರೆಯಲಾಗುತ್ತದೆ. ಇವು ನಾಗರಿಕರಿಗೆ ನೀಡಿದ ಸಾಂವಿಧಾನಿಕ ಹಕ್ಕುಗಳಾಗಿವೆ. ಮೂಲಭೂತ ಹಕ್ಕುಗಳು ಸಾಮಾಜಿಕ ಜೀವನಕ್ಕೆ ಅತ್ಯಗತ್ಯವಾಗಿದೆ. ಇವುಗಳನ್ನು ಯಾರೂ ಉಲ್ಲಂಘಿಸುವಂತಿಲ್ಲ. ಮೂಲಭೂತ ಹಕ್ಕುಗಳಿಗೆ ನ್ಯಾಯಾಂಗದ ರಕ್ಷಣೆ ಇದೆ.

## ಮೂಲಭೂತ ಹಕ್ಕುಗಳ ವಿಧಗಳು

ಭಾರತ ಸಂವಿಧಾನವು ದೇಶದ ಎಲ್ಲಾ ನಾಗರಿಕರಿಗೆ ಪ್ರಧಾನವಾಗಿ ಆರು ಮೂಲಭೂತ ಹಕ್ಕುಗಳನ್ನು ನೀಡಿದೆ. ಅವುಗಳೆಂದರೆ;

1. ಸಮಾನತೆಯ ಹಕ್ಕು
2. ಸ್ವಾತಂತ್ರ್ಯದ ಹಕ್ಕು
3. ಶೋಷಣೆಯ ವಿರುದ್ಧದ ಹಕ್ಕು
4. ಧಾರ್ಮಿಕ ಸ್ವಾತಂತ್ರ್ಯದ ಹಕ್ಕು
5. ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು
6. ಸಂವಿಧಾನಬದ್ಧ ಪರಿಹಾರದ ಹಕ್ಕು

**1 ಸಮಾನತೆಯ ಹಕ್ಕು:** ಕಾನೂನಿನ ಮುಂದೆ ಎಲ್ಲರೂ ಸಮಾನರು; ಯಾರೇ ಆಗಲಿ ಕಾನೂನಿಗಿಂತ ದೊಡ್ಡವರಲ್ಲ; ಮತ್ತು ಎಲ್ಲರಿಗೂ ಸಮಾನ ರಕ್ಷಣೆ ದೊರಕಬೇಕು ಎಂಬ ಅಂಶಗಳು ಸಮಾನತೆಯ ಹಕ್ಕಿನಲ್ಲಿ ಒಳಗೊಂಡಿವೆ.

ಧರ್ಮ, ಕುಲ, ಜಾತಿ, ಲಿಂಗ, ಜನ್ಮಸ್ಥಳ ಇವುಗಳ ಆಧಾರದ ಮೇಲೆ ರಾಜ್ಯವು ಪಕ್ಷಪಾತ ಮಾಡುವಂತಿಲ್ಲ. ಅಂಗಡಿ, ಹೋಟೇಲು ಮತ್ತು ಮನೋರಂಜನಾ ಸ್ಥಳಗಳ ಪ್ರವೇಶಕ್ಕೆ ಯಾವುದೇ ಪ್ರಜೆಯ ಮೇಲೆ ನಿರ್ಬಂಧ ಹೇರುವಂತಿಲ್ಲ. ಸಾರ್ವಜನಿಕ ಬಾವಿ, ಕೆರೆ, ರಸ್ತೆ ಮತ್ತು ವಿರಾಮ ಸ್ಥಳಗಳನ್ನು ಉಪಯೋಗಿಸಲು ಕೂಡಾ ನಿರ್ಬಂಧವಿರುವುದಿಲ್ಲ. ಸರ್ಕಾರಿ ಸೇವೆಗೆ ಸೇರಲು ಎಲ್ಲಾ ನಾಗರಿಕರಿಗೂ ಸಮಾನ ಅವಕಾಶವಿದೆ. ಸಾರ್ವಜನಿಕ ಪೂಜಾಸ್ಥಳಗಳಲ್ಲಿ ಆಯಾ ಮತಧರ್ಮದ ವ್ಯಕ್ತಿಯು ಪ್ರವೇಶಿಸಿ ಪ್ರಾರ್ಥನೆ ಮಾಡುವುದನ್ನು ತಡೆಯುವಂತಿಲ್ಲ.






ಸಮಾನತೆ

**2 ಸ್ವಾತಂತ್ರ್ಯದ ಹಕ್ಕು:** ಸಂವಿಧಾನದಲ್ಲಿ ನೀಡಿರುವ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬರಿಗೂ ಕೆಳಕಂಡ ಸ್ವಾತಂತ್ರ್ಯಗಳನ್ನು ನೀಡುತ್ತದೆ.

1. ವಾಕ್‌ಸ್ವಾತಂತ್ರ್ಯ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ.
2. ಶಾಂತಿಯುತವಾಗಿ ಸಭೆ ಸೇರುವ ಸ್ವಾತಂತ್ರ್ಯ.
3. ಸಂಘಸಂಸ್ಥೆಗಳನ್ನು ಸ್ಥಾಪಿಸುವ ಸ್ವಾತಂತ್ರ್ಯ.
4. ದೇಶದ ಎಲ್ಲೆಡೆ ನಿರ್ಬಂಧವಿಲ್ಲದೆ ಸಂಚರಿಸುವ ಸ್ವಾತಂತ್ರ್ಯ.
5. ಭಾರತದ ಯಾವುದೇ ಭಾಗದಲ್ಲಾದರೂ ವಾಸಿಸುವ ಸ್ವಾತಂತ್ರ್ಯ.
6. ಯಾವುದೇ ಉದ್ಯೋಗ, ವೃತ್ತಿ, ವ್ಯಾಪಾರ, ವ್ಯವಹಾರ ಮಾಡುವ ಸ್ವಾತಂತ್ರ್ಯ.



ವಾಕ್ ಸ್ವಾತಂತ್ರ್ಯ




**ಚಟುವಟಿಕೆ:** ವಾಕ್ ಸ್ವಾತಂತ್ರ್ಯದ ಪ್ರಾಮುಖ್ಯತೆ ಕುರಿತು ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿರಿ.

ಸ್ವಾತಂತ್ರ್ಯವು ಮೂಲಭೂತ ಹಕ್ಕಾಗಿದ್ದರೂ ಅದನ್ನು ಮನಸ್ಸಿಗೆ ಬಂದಂತೆ ಚಲಾಯಿಸಲು ಸಾಧ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ರಾಜ್ಯವು ವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರ್ಬಂಧಗಳನ್ನು ಹೇರಬಹುದೆಂದು ಸಂವಿಧಾನವೇ ತಿಳಿಸುತ್ತದೆ. ಉದಾ: ವಾಕ್ ಸ್ವಾತಂತ್ರ ಇದೆಯೆಂದು ಬೇರೆಯವರ ಬಗ್ಗೆ ಇಲ್ಲಸಲ್ಲದ ಹಾಗೂ ಎಲ್ಲೆ ಮೀರಿದ ಮಾತುಗಳನ್ನು ಆಡಿ ಮಾನಹಾನಿ ಮಾಡುವಂತಿಲ್ಲ.

**3 ಶೋಷಣೆಯ ವಿರುದ್ಧದ ಹಕ್ಕು:** ಬಡವರು, ಮಹಿಳೆಯರು, ಮಕ್ಕಳು ಮತ್ತು ದುರ್ಬಲರನ್ನು ಶೋಷಣೆ ಮಾಡಬಾರದು ಎಂಬುದು ಈ ಹಕ್ಕಿನ ಉದ್ದೇಶ. ಧರ್ಮ, ಜಾತಿ, ವರ್ಗ ಹಾಗೂ ಲಿಂಗದ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ನಿಷೇಧಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಕಾಯಿದೆಗಳನ್ನು ಜಾರಿಗೆ ತಂದಿವೆ. ಉದಾಹರಣೆಗೆ; ವರದಕ್ಷಿಣೆ ಪಡೆಯುವುದು ಶಿಕ್ಷಾರ್ಹವಾಗಿದೆ. ಜೀತ ಪದ್ಧತಿಯನ್ನು ನಿಷೇಧಿಸಲಾಗಿದೆ. ಗಣಿಗಾರಿಕೆ, ಬೀಡಿ ತಯಾರಿಕೆ, ಪಟಾಕಿ ತಯಾರಿಕೆಗಳಂತಹ ಅಪಾಯಕಾರಿ ಕೆಲಸಗಳಲ್ಲಿ ಮಕ್ಕಳನ್ನು ದುಡಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಅವರು ಹದಿನಾಲ್ಕು ವರ್ಷ ಪ್ರಾಯದವರೆಗೆ ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕೆಂಬ ಕಾನೂನಿದೆ.

**4 ಧಾರ್ಮಿಕ ಸ್ವಾತಂತ್ರ್ಯದ ಹಕ್ಕು:** ಭಾರತದ ಪ್ರಜೆಗಳು ತಮಗೆ ಸರಿಯೆನಿಸುವ, ಇಷ್ಟವಾಗುವ ಧರ್ಮವನ್ನು ಸ್ವೀಕರಿಸುವ ಹಾಗೂ ಅನುಸರಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಸಾರ್ವಜನಿಕ ಶಾಂತಿ, ಶಿಸ್ತು, ಆರೋಗ್ಯ ಮತ್ತು ನೈರ್ಮಲ್ಯಕ್ಕೆ ದಕ್ಕೆಯಾಗದಂತೆ ಇತರ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು, ಮತಧರ್ಮವನ್ನು ಆಚರಿಸುವ ಹಕ್ಕು ಎಲ್ಲರಿಗೂ ಇದೆ. ಬಲಾತ್ಕಾರ, ಮೋಸ ಮತ್ತು ಆಮಿಷಗಳ ಮೂಲಕ ಮತಾಂತರ ಮಾಡಬಾರದು ಎಂದು ಸಂವಿಧಾನದಲ್ಲಿ ಹೇಳಲಾಗಿದೆ.





ಧಾರ್ಮಿಕ ಸ್ವಾತಂತ್ರ್ಯದ ಹಕ್ಕು

**5 ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು:** ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ರಕ್ಷಿಸುವುದು ಈ ಮೂಲಭೂತ ಹಕ್ಕಿನ ಉದ್ದೇಶವಾಗಿದೆ. ಯಾವುದೇ ಜನರು ತಮ್ಮ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ರಕ್ಷಿಸುವ ಹಕ್ಕನ್ನು ಪಡೆದಿದ್ದಾರೆ. ಅಲ್ಪಸಂಖ್ಯಾತರಿಗೆ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಆಡಳಿತವನ್ನು ನಡೆಸುವ ಹಕ್ಕು ಇದೆ. ಆದರೆ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ವಿದ್ಯಾಸಂಸ್ಥೆಗಳು ರಾಜ್ಯದ ನಿಯಮಗಳಿಗೆ ಬದ್ಧವಾಗಿರಬೇಕು.



**ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು:**

**6 ಸಂವಿಧಾನಬದ್ಧ ಪರಿಹಾರದ ಹಕ್ಕು:** ಮೂಲಭೂತ ಹಕ್ಕುಗಳು ಉಲ್ಲಂಘನೆಯಾದಾಗ ನಾಗರಿಕನು ನ್ಯಾಯಾಲಯಕ್ಕೆ ದೂರು ಸಲ್ಲಿಸಬಹುದು. ಈ ಹಕ್ಕನ್ನು 'ಸಂವಿಧಾನಬದ್ಧ ಪರಿಹಾರದ ಹಕ್ಕು' ಎನ್ನುವರು. ಇದರ ಮೂಲಕ ಉಳಿದೆಲ್ಲಾ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸಿಕೊಳ್ಳಬಹುದಾಗಿದೆ.

**ಮೂಲಭೂತ ಹಕ್ಕುಗಳೆಂದರೆ:** ನೇರವಾಗಿ ಸಂವಿಧಾನದಿಂದ ನಾಗರಿಕರಿಗೆ ಕೊಡಲ್ಪಟ್ಟ ಹಕ್ಕುಗಳು. ಇವುಗಳನ್ನು ಸಂಸತ್ತು, ವಿಧಾನ ಸಭೆ, ಕಾನೂನಿನ ಮೂಲಕವಾಗಿ, ಅಧಿಕಾರಿ ವರ್ಗ, ಪೊಲೀಸರು ಸೇರಿದಂತೆ ಯಾವುದೇ ಸಾರ್ವಜನಿಕ (ಸರ್ಕಾರಿ) ಸಂಸ್ಥೆಗಳು ಮೊಟಕುಗೊಳಿಸುವುದು ಅಥವಾ ಉಲ್ಲಂಘಿಸುವುದು ನಿಷಿದ್ಧ. ಉಲ್ಲಂಘನೆಯಾದಾಗ ಅನ್ಯಾಯಕ್ಕೆ ಒಳಪಟ್ಟ ವ್ಯಕ್ತಿ ನೇರವಾಗಿ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಲಯದ ಮೊರೆ ಹೋಗಿ ಪರಿಹಾರ ದೊರಕಿಸಿಕೊಳ್ಳಬಹುದು. ಮೂಲಭೂತ ಹಕ್ಕುಗಳಿಗೆ ಧಕ್ಕೆಯುಂಟಾದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಇಲ್ಲವೆ ಉಚ್ಚ ನ್ಯಾಯಾಲಯಕ್ಕೆ 'ರಿಟ್ ಅರ್ಜಿ'ಯನ್ನು ಸಲ್ಲಿಸಬಹುದು.

## ಮೂಲಭೂತ ಕರ್ತವ್ಯಗಳು

ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. 'ಕರ್ತವ್ಯ' ಎಂದರೆ ವ್ಯಕ್ತಿಯು ತನ್ನ ದೇಶಕ್ಕಾಗಿ ಮಾಡಬೇಕಾದ ಹೊಣೆ. ಪ್ರಜೆಗಳು ತಮ್ಮ ಮೂಲಭೂತ ಕರ್ತವ್ಯಗಳನ್ನು ಸ್ವಯಂ ಸ್ಫೂರ್ತಿಯಿಂದ ಮಾಡಿದರೆ ದೇಶದ ಅಭ್ಯುದಯ ಸಾಧಿಸುವುದು ಸುಲಭ.

ಸಂವಿಧಾನದಲ್ಲಿ ಹನ್ನೊಂದು ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಗಿದೆ. ಅವುಗಳು ಹೀಗಿವೆ.

1. ಸಂವಿಧಾನ, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
2. ಸ್ವಾತಂತ್ರ್ಯ ಚಳವಳಿಯ ಉನ್ನತ ಆದರ್ಶಗಳನ್ನು ಪಾಲಿಸುವುದು.
3. ಭಾರತದ ಏಕತೆಯನ್ನು ರಕ್ಷಿಸುವುದು.

4. ಮಾತೃಭೂಮಿಯನ್ನು ರಕ್ಷಿಸುವುದು.

5. ಭಾರತೀಯರಾದ ನಾವೆಲ್ಲ ಒಂದು ಎಂಬ ಭಾವನೆಯನ್ನು ಬೆಳೆಸುವುದು.

6. ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ಐತಿಹಾಸಿಕ ಸ್ಮಾರಕಗಳನ್ನು ರಕ್ಷಿಸುವುದು.

7. ಪ್ರಾಕೃತಿಕ ಪರಿಸರವನ್ನು ಸಂರಕ್ಷಿಸಿ, ಅಭಿವೃದ್ಧಿ ಪಡಿಸುವುದು.


8. ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಯನ್ನು ಬೆಳೆಸುವುದು.

9. ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು ಹಾಗೂ ಹಿಂಸೆಯನ್ನು ತ್ಯಜಿಸುವುದು

10. ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಪ್ರಾವೀಣ್ಯತೆ ಪಡೆದು ದೇಶದ ಪ್ರಗತಿಗೆ ಶ್ರಮಿಸುವುದು

11. ಎಲ್ಲಾ ತಂದೆ ತಾಯಿಯರು ಹಾಗೂ ಪೋಷಕರು 6 ರಿಂದ 14 ವಯಸ್ಸಿನ ಮಕ್ಕಳಿಗೆ ಶಿಕ್ಷಣ ಪಡೆಯುವ ಅವಕಾಶಗಳನ್ನು ಒದಗಿಸುವುದು.





ರಾಷ್ಟ್ರಧ್ವಜ ಗೌರವಿಸುವುದು



ಪರಿಸರ ಸಂರಕ್ಷಣೆ

**ಚಟುವಟಿಕೆ:** 'ಪರಿಸರ ಸಂರಕ್ಷಣೆಯಲ್ಲಿ ಇಂದು ವಿದ್ಯಾರ್ಥಿಗಳ ಪಾತ್ರ' ಎಂಬ ವಿಷಯದ ಮೇಲೆ ಒಂದು ಚರ್ಚಾಕೂಟವನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.

ಪ್ರಜೆಯು ತನ್ನ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸದಿದ್ದರೆ ಸರ್ಕಾರವು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಆದರೂ ದೇಶದ ಎಲ್ಲ ಪ್ರಜೆಗಳು ಸ್ವಯಂಸ್ಫೂರ್ತಿಯಿಂದ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸಬೇಕು.

## ಅಭ್ಯಾಸಗಳು

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ಮೂಲಭೂತ ಹಕ್ಕುಗಳು ಎಂದರೇನು?
2. ಸಮಾನತೆಯ ಹಕ್ಕು ಎಂದರೇನು?
3. ಸಾಮಾಜಿಕ ಮತ್ತು ಆರ್ಥಿಕ ಶೋಷಣೆ ಹೇಗೆ ನಡೆಯುತ್ತದೆ? ಉದಾಹರಣೆಗಳನ್ನು ಕೊಡಿ.
4. ಮೂಲಭೂತ ಕರ್ತವ್ಯಗಳನ್ನು ಸ್ವಯಂ ಸ್ಫೂರ್ತಿಯಿಂದ ನಾವೇಕೆ ಪಾಲಿಸಬೇಕು?
5. ಯಾವುದಾದರೂ ಮೂರು ಮೂಲಭೂತ ಕರ್ತವ್ಯಗಳನ್ನು ತಿಳಿಸಿ.

**ಚರ್ಚಿಸಿ**

1. ಮೂಲಭೂತ ಹಕ್ಕುಗಳ ಮಹತ್ವ.
2. ಶಾಲಾ ವಠಾರದಲ್ಲಿ ವಿದ್ಯಾರ್ಥಿಗಳು ಮಾಡಬೇಕಾದ ಕರ್ತವ್ಯಗಳು.

**ಚಟುವಟಿಕೆಗಳು**

1. ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳ ಕುರಿತು ವಿದ್ಯಾರ್ಥಿಗಳಿಂದ ಎರಡು ಮೂರು ನಿಮಿಷ ಭಾಷಣ ಮಾಡಿಸುವುದು.
2. ಪ್ರಜೆಗಳು ಮೂಲಭೂತ ಕರ್ತವ್ಯಗಳ ಪಾಲನೆ ಮಾಡದಿರುವ ಪ್ರಸಂಗಗಳನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು. (ಉದಾ: ಊರಿನ ಸಾರ್ವಜನಿಕ ಕೆರೆಯಲ್ಲಿ ತ್ಯಾಜ್ಯ ವಸ್ತುಗಳನ್ನು ಎಸೆಯುವುದು; ಪ್ರಾಚೀನ ಕೋಟೆಯ ಕಲ್ಲುಗಳನ್ನು ಒಂದೊಂದಾಗಿ ಕದ್ದೊಯ್ಯುವುದು, ಮತದಾನ ಮಾಡದಿರುವುದು).
3. ನಮ್ಮ ಸಂಸ್ಕೃತಿಯಲ್ಲಿ ಹಕ್ಕುಗಳಂತೆಯೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕರ್ತವ್ಯಗಳಿಗೆ ನೀಡಿದ್ದಾರೆ. ಈ ಬಗ್ಗೆ ಚರ್ಚಿಸುವುದು.

| ಪಾಠ 11 | ರಾಜ್ಯ ನಿರ್ದೇಶಕ ತತ್ವಗಳು |
|---|---|

Q6M3Q9

**ಪಾಠದ ಪರಿಚಯ**

ನಮ್ಮ ಸಂವಿಧಾನದಲ್ಲಿ ಅಳವಡಿಸಿರುವ ರಾಜ್ಯ ನಿರ್ದೇಶಕ ತತ್ವಗಳು ಪ್ರಸ್ತಾವನೆಯಲ್ಲಿ ವ್ಯಕ್ತವಾಗಿರುವ ಧ್ಯೇಯೋದ್ದೇಶಗಳನ್ನು ಸಾಧಿಸಲು ಇವು ಸಹಾಯವಾಗುತ್ತವೆ ಎಂಬುದನ್ನು ವಿವರಿಸಲಾಗಿದೆ.

**ಸಾಮರ್ಥ್ಯಗಳು**

1] ರಾಜ್ಯ ನಿರ್ದೇಶಕ ತತ್ವಗಳ ಅರ್ಥ ಪ್ರಾಮುಖ್ಯತೆಗಳನ್ನು ತಿಳಿಯುವುದು.

2] ರಾಜ್ಯ ನಿರ್ದೇಶಕ ತತ್ವಗಳು ಸುಖೀರಾಜ್ಯ ಸ್ಥಾಪನೆಗೆ ಹೇಗೆ ಪೂರಕವಾಗಿವೆ ಎಂಬುದನ್ನು ಅರ್ಥೈಸಿಕೊಳ್ಳುವುದು.



## ರಾಜ್ಯ ನಿರ್ದೇಶಕ ತತ್ವಗಳ ಅರ್ಥ

ಸುಖೀರಾಜ್ಯ ಸ್ಥಾಪನೆಯ ಗುರಿಯನ್ನು ಸಾಧಿಸುವುದಕ್ಕಾಗಿ ಸಂವಿಧಾನವು ಕೆಲವು ತತ್ವಗಳನ್ನು ಮುಂದಿಟ್ಟು ರಾಜ್ಯಕ್ಕೆ ಮಾರ್ಗದರ್ಶನ ನೀಡಿದೆ.ಇಂತಹ ಮಾರ್ಗದರ್ಶಿ ಸೂತ್ರಗಳನ್ನು ರಾಜ್ಯ ನಿರ್ದೇಶಕ ತತ್ವಗಳು ಎನ್ನುವರು.ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಇವುಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯಭಾರ ಮಾಡಬೇಕೆಂಬುದು ಇವುಗಳ ಉದ್ದೇಶವಾಗಿದೆ. ಭಾರತದ ಸಮಗ್ರ ಅಭಿವೃದ್ಧಿಗೆ ಇವು ದಿಕ್ಸೂಚಿಯಾಗಿವೆ.

## ರಾಜ್ಯ ನಿರ್ದೇಶಕ ತತ್ವಗಳ ಪ್ರಾಮುಖ್ಯತೆ

ರಾಜ್ಯ ನಿರ್ದೇಶಕ ತತ್ವಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಂವಿಧಾನ ನೀಡುವ ನಿರ್ದೇಶನಗಳಾಗಿವೆ. ಕಾನೂನು ರಚಿಸುವಾಗ, ನೀತಿಗಳನ್ನು ರಚಿಸಿ ಜಾರಿಗೆ ತರುವಾಗ ಈ ತತ್ವಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸಾಧಿಸಲು ಮತ್ತು ಸುಖೀ ರಾಜ್ಯವನ್ನು ಸ್ಥಾಪಿಸಲು ರಾಜ್ಯ ನಿರ್ದೇಶಕ ತತ್ವಗಳು ಮುಖ್ಯವೆನಿಸುತ್ತವೆ.

## ರಾಜ್ಯ ನಿರ್ದೇಶಕ ತತ್ವಗಳ ವಿಧಗಳು

ಭಾರತ ಸಂವಿಧಾನದಲ್ಲಿ ಅಳವಡಿಸಿರುವ ರಾಜ್ಯ ನಿರ್ದೇಶಕ ತತ್ವಗಳು ಕೆಳಕಂಡಂತಿವೆ.

**1. ಸಾಮಾಜಿಕ ನ್ಯಾಯ:** ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಒದಗಿಸಿ ಜನಕಲ್ಯಾಣವನ್ನು ಸಾಧಿಸುವುದು.

**2. ದುರ್ಬಲರಿಗೆ ಸಾಮಾಜಿಕ ನ್ಯಾಯ:** ದುರ್ಬಲರಿಗೆ ಜೀವನಾಧಾರ ನೀಡುವುದು; ಅವರ ಆರ್ಥಿಕ ಶೋಷಣೆಯ ನಿವಾರಣೆ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದು ಅವರಿಗೆ ಕಾನೂನಿನ ಉಚಿತ ನೆರವು ಒದಗಿಸುವುದು.

**3. ಮಹಿಳೆ ಮತ್ತು ಮಕ್ಕಳ ಕಲ್ಯಾಣ:** ಒಂದೇ ರೀತಿಯ ಕೆಲಸಕ್ಕೆ ಪುರುಷರಷ್ಟೇ ಮಹಿಳೆಯರಿಗೂ ಸಮಾನ ವೇತನ; ಮಹಿಳೆಯರಿಗೆ ಹೆರಿಗೆ ಸೌಲಭ್ಯ; ಮಕ್ಕಳ ಶೋಷಣೆಯ ತಡೆ; ಮಕ್ಕಳು ಆರೋಗ್ಯವಂತರಾಗಿ ಬೆಳೆಯಲು ಅವಕಾಶ ಮತ್ತು ಅವರಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ.



ಮಹಿಳೆ ಮತ್ತು ಶಿಶುಕಲ್ಯಾಣ



ಉಚಿತ ಮತ್ತು ಕಡ್ಡಾಯ ಶಿಕ್ಷಣ

**4. ಕಾರ್ಮಿಕ ಕಲ್ಯಾಣ:** ಕಾರ್ಮಿಕರ ಯೋಗಕ್ಷೇಮ ನೋಡಿಕೊಳ್ಳುವುದು; ದುಡಿಯುವ ಹಕ್ಕು; ದುಡಿಯಲು ಅನುಕೂಲಕರ ವಾತಾವರಣ; ಕಾರ್ಮಿಕರಿಗೆ ಕನಿಷ್ಠ ವೇತನ; ಮತ್ತು ಅವರಿಗೆ ಆಡಳಿತದಲ್ಲಿ ಭಾಗಿಗಳಾಗಲು ಅವಕಾಶ ನೀಡುವುದು.


**5. ಅಸಹಾಯಕರಿಗೆ ನೆರವು:** ವೃದ್ಧ, ರೋಗಿ ಮತ್ತು ನಿರುದ್ಯೋಗಿಗಳು ಬದುಕಲು ಸರ್ಕಾರದಿಂದ ನೆರವು.

**6. ಸರ್ವರಿಗೂ ಸಮಾನ ಕಾನೂನು:** ಭಾರತದ ಎಲ್ಲ ಪ್ರಜೆಗಳಿಗೂ ಸಮಾನ ನಾಗರಿಕ ಕಾನೂನು ಜಾರಿಮಾಡುವುದು.

**7. ಮದ್ಯಪಾನ ನಿಷೇಧ:** ಮದ್ಯಪಾನದಿಂದ ಆರೋಗ್ಯ ಕೆಡುತ್ತದೆ, ಕುಟುಂಬದ ಆರ್ಥಿಕ ಸ್ಥಿತಿ ಹದಗೆಡುತ್ತದೆ ಹಾಗೂ ಮಹಿಳೆಯರ ಶೋಷಣೆ ಹೆಚ್ಚುತ್ತದೆ. ಇದಕ್ಕಾಗಿ ನಮ್ಮ ಸಂವಿಧಾನವು ಮದ್ಯಪಾನ ನಿಷೇಧವನ್ನು ಜಾರಿಗೆ ತರುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ.

**8. ಕೃಷಿ ಮತ್ತು ಪಶು ಸಂಗೋಪನೆಯ ಸಂಘಟನೆ:** "ರಾಜ್ಯವು ಕೃಷಿಯನ್ನು ಮತ್ತು ಪಶು ಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಸಂಘಟನೆ ಗೊಳಿಸುವುದಕ್ಕೆ ಪ್ರಯತ್ನಿಸತಕ್ಕದ್ದು ಮತ್ತು ವಿಶೇಷವಾಗಿ ತಳಿಗಳನ್ನು ಸಂರಕ್ಷಿಸಿ ಉತ್ತಮಗೊಳಿಸುವುದಕ್ಕಾಗಿ ಹಸುಗಳ ಮತ್ತು ಕರುಗಳ ಹಾಗೂ ಇತರ ಹಾಲು ಕೊಡುವ ಮತ್ತು ಭಾರ ಎಳೆಯುವ ದನಕರುಗಳ ವಧೆಯನ್ನು ನಿಷೇಧಿಸುವುದಕ್ಕಾಗಿ ಕ್ರಮ ಕೈಗೊಳ್ಳತಕ್ಕದ್ದು" ಎಂದು ಸಂವಿಧಾನದಲ್ಲಿ ನಿರ್ದೇಶಿಸಲಾಗಿದೆ.





ಕೃಷಿ ಅಭಿವೃದ್ಧಿ



ಆಧುನಿಕ ಕೃಷಿ

**9. ಪರಿಸರ:** ಪರಿಸರ ರಕ್ಷಣೆ ಮತ್ತು ಸುಧಾರಣೆ ಹಾಗೂ ವನ್ಯಜೀವಿಗಳ ರಕ್ಷಣೆ; ಗಣಿಗಾರಿಕೆ, ಕೈಗಾರಿಕೆಗಳಿಂದ ಉಂಟಾಗುವ ಮಾಲಿನ್ಯಗಳಿಂದ ಪರಿಸರವನ್ನು ಸಂರಕ್ಷಿಸುವುದು. ಹಾಗೂ ವನ್ಯಜೀವಿಗಳ ರಕ್ಷಣೆ ಮಾಡುವುದು.

**10. ಐತಿಹಾಸಿಕ ಸ್ಮಾರಕಗಳ ರಕ್ಷಣೆ:** ಐತಿಹಾಸಿಕ ಸ್ಥಳಗಳ ಹಾಗೂ ಸ್ಮಾರಕಗಳ ರಕ್ಷಣೆ ಮಾಡುವುದು ಉದಾಹರಣೆ: ಹಂಪಿ, ಬೇಲೂರು, ಹಳೇಬೀಡು, ಪಟ್ಟದಕಲ್ಲು, ಶ್ರೀರಂಗಪಟ್ಟಣ, ವಿಜಯಪುರ, ಬಾದಾಮಿ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನು ಸಂರಕ್ಷಿಸುವುದು.



ಬೇಲೂರಿನ ಚನ್ನಕೇಶವ ದೇವಾಲಯ

**11. ಅಂತರಾಷ್ಟ್ರೀಯ ಶಾಂತಿ, ಭದ್ರತೆ:** ಅಂತರಾಷ್ಟ್ರೀಯ ಶಾಂತಿ, ಭದ್ರತೆಗಳನ್ನು ಕಾಪಾಡುವುದರಲ್ಲಿ ದೇಶವು ಸಹ ಭಾಗಿಯಾಗುವುದು.

ಸಾಮಾಜಿಕ ನ್ಯಾಯ ಎಂದರೇನು? ಜಾತಿ, ಧರ್ಮ, ಲಿಂಗ, ಭಾಷೆ, ವರ್ಣ, ಪ್ರದೇಶ ಮತ್ತು ಅಂತಸ್ತುಗಳ ಭೇದಭಾವ ಇಲ್ಲದೆ ಎಲ್ಲಾ ನಾಗರಿಕರಿಗೆ ರಕ್ಷಣೆ ನೀಡುವುದು ಹಾಗೂ ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡುವುದೇ ಸಾಮಾಜಿಕ ನ್ಯಾಯ. ಹಿಂದುಳಿದ ವರ್ಗಗಳ ಹಿತಾಸಕ್ತಿ, ಕನಿಷ್ಠ ವೇತನ, ಜೀತಪದ್ಧತಿಯ ನಿರ್ಮೂಲನೆ, ಮಕ್ಕಳ ಶೋಷಣೆಯ ನಿರ್ಮೂಲನೆ, ಸ್ತ್ರೀಯರಿಗೆ ಸಮಾನ ಹಕ್ಕು ಹಾಗೂ ಗೌರವ ಮುಂತಾದವುಗಳು ಸಾಮಾಜಿಕ ನ್ಯಾಯಕ್ಕೆ ಒಳಪಟ್ಟಿವೆ.

ಸಂವಿಧಾನವು ಹಲವಾರು ಸಲಹೆ ಮತ್ತು ನಿರ್ದೇಶನಗಳನ್ನು ರಾಜ್ಯಕ್ಕೆ ನೀಡಿದೆ. ಆದರೂ ಅವುಗಳ ಉಲ್ಲಂಘನೆಯಾದರೆ, ನಾಗರಿಕರು ನ್ಯಾಯಾಲಯದಲ್ಲಿ ದೂರು ಸಲ್ಲಿಸುವಂತಿಲ್ಲ. (ಉದಾಹರಣೆ – ಆರು ದಶಕಗಳು ಕಳೆದರೂ ಕೇಂದ್ರ ಸರ್ಕಾರ ಮತ್ತು ಅನೇಕ ರಾಜ್ಯ ಸರ್ಕಾರಗಳು ಮದ್ಯಪಾನ ನಿಷೇಧ ಕಾನೂನು ತಂದಿಲ್ಲ. ಈ ನಿಟ್ಟಿನಲ್ಲಿ ನ್ಯಾಯಾಲಯದಲ್ಲಿ ದೂರು ಸಲ್ಲಿಸುವಂತಿಲ್ಲ.)

**ಚಟುವಟಿಕೆ:** ರಾಜ್ಯ ನಿರ್ದೇಶಕ ತತ್ವಗಳು ನಮ್ಮ ರಾಜ್ಯದಲ್ಲಿ ಎಷ್ಟರ ಮಟ್ಟಿಗೆ ಜಾರಿಗೆ ಬಂದಿವೆ? ಇಂದೂ ಬೇರೆ ಬೇರೆ ರೀತಿಯ ಶೋಷಣೆಗಳು ನಡೆಯುತ್ತಲೇ ಇವೆ. ಈ ವಿಚಾರದಲ್ಲಿ ಒಂದು ಚರ್ಚಾಕೂಟವನ್ನು ಏರ್ಪಡಿಸಿ ಅದರಲ್ಲಿ ಮೂಡಿಬಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ಪಟ್ಟಿ ಮಾಡಿ.

## ಅಭ್ಯಾಸಗಳು

**ಗುಂಪುಗಳಲ್ಲಿ ಚರ್ಚಿಸಿ ಉತ್ತರಿಸಿ.**

1. ರಾಜ್ಯ ನಿರ್ದೇಶಕ ತತ್ವಗಳು ಎಂದರೇನು?
2. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸ್ಥಾಪಿಸುವುದಕ್ಕಾಗಿ ಸಂವಿಧಾನವು ರಾಜ್ಯಕ್ಕೆ ಯಾವ ನಿರ್ದೇಶನಗಳನ್ನು ನೀಡಿದೆ?
3. ಸರ್ವರಿಗೂ ಸಮಾನ ಕಾನೂನಿನ ಅವಶ್ಯಕತೆಯನ್ನು ತಿಳಿಸಿ?
4. ಮದ್ಯಪಾನ ನಿಷೇಧವನ್ನು ಜಾರಿಗೆ ತರಲು ರಾಜ್ಯಕ್ಕೆ ನಿರ್ದೇಶನವನ್ನು ಏಕೆ ನೀಡಲಾಗಿದೆ?

**ಚರ್ಚಿಸಿ.**

1. ದುರ್ಬಲರಿಗೆ ಸಾಮಾಜಿಕ ನ್ಯಾಯ.
2. ಮದ್ಯಪಾನ ನಿಷೇಧ.
3. ಐತಿಹಾಸಿಕ ಸ್ಮಾರಕಗಳ ರಕ್ಷಣೆ.
4. ಮಕ್ಕಳ ಶಿಕ್ಷಣ ಹಕ್ಕನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಏನು ಮಾಡತಕ್ಕದ್ದು?

**ಚಟುವಟಿಕೆಗಳು.**

1. ನಿಮ್ಮ ಸುತ್ತಮುತ್ತಲಿನ ಸಮುದಾಯದಲ್ಲಿ ಕಂಡು ಬರುವ ಸಾಮಾಜಿಕ ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರನ್ನು ಗಮನಿಸಿ. ಅವರೇಕೆ ದುರ್ಬಲರಾಗಿದ್ದಾರೆ ಎಂಬದರ ಬಗ್ಗೆ ಸಹಪಾಠಿಗಳೊಡನೆ ಚಿಂತನೆ ನಡೆಸಿ.
2. ಮದ್ಯಪಾನ ಸೇವನೆ ಹಾಗೂ ಮಾದಕ ಪದಾರ್ಥಗಳ ಬಳಕೆಯು ನಮ್ಮ ಯುವ ಜನಾಂಗದ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳೇನು? ಈ ವಿಚಾರವಾಗಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.
3. ಮಕ್ಕಳ ಹಕ್ಕು ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಅವಶ್ಯಕವಾಗಿದೆ. ಅವುಗಳ ಉಲ್ಲಂಘನೆಯಾದಾಗ ಚೈಲ್ಡ್‌ಲೈನ್ 1098 ಎಂಬ ಸಹಾಯವಾಣಿ ಸಂಖ್ಯೆಗೆ ಕರೆಯನ್ನು ಮಾಡಬಹುದೆಂದು ನಿಮಗೆ ತಿಳಿದಿದೆ. ಈ ವಿಚಾರ ಕುರಿತು ಒಂದು ಚರ್ಚಾಗೋಷ್ಠಿ ಏರ್ಪಡಿಸಿ ಅಭಿಪ್ರಾಯ ಸಂಗ್ರಹಿಸಿ.

☆ ☆ ☆

## ಭೂಗೋಳ ವಿಜ್ಞಾನ

| ಪಾಠ 12 | ಉತ್ತರ ಅಮೆರಿಕ–ಪ್ರೈರೀಸ್‌ಗಳ ನಾಡು |
|---|---|

T3P8I2

### ಪಾಠದ ಪರಿಚಯ

ಕಳೆದ ವರ್ಷ ನೀವು ಏಷ್ಯ, ಯುರೋಪ್ ಮತ್ತು ಆಫ್ರಿಕ ಖಂಡಗಳ ಭೌಗೋಳಿಕ ಲಕ್ಷಣಗಳು ಮತ್ತು ಅವುಗಳ ಪ್ರಾಮುಖ್ಯತೆಯ ಬಗ್ಗೆ ಅಧ್ಯಯನ ಮಾಡಿದ್ದೀರಿ. ಈ ವರ್ಷ ನೀವು ಉತ್ತರ ಅಮೆರಿಕ, ದಕ್ಷಿಣ ಅಮೆರಿಕ, ಆಸ್ಟ್ರೇಲಿಯ ಮತ್ತು ಅಂಟಾರ್ಕ್ಟಿಕ್ ಖಂಡಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅರಿಯುವಿರಿ.

ಈ ಪಾಠದಲ್ಲಿ ಉತ್ತರ ಅಮೆರಿಕ ಖಂಡದ ಸ್ಥಾನ, ವಿಸ್ತೀರ್ಣ, ಭೌಗೋಳಿಕ ಸನ್ನಿವೇಶ, ಪ್ರಾಕೃತಿಕ ವಿಭಾಗಗಳು, ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ, ವ್ಯವಸಾಯ, ಪ್ರಮುಖ ಖನಿಜಗಳು ಹಾಗೂ ಕೈಗಾರಿಕೆಗಳು, ಜನಸಂಖ್ಯೆಯ ಬೆಳವಣಿಗೆ, ಹಂಚಿಕೆ ಮತ್ತು ಸಾಂದ್ರತೆಗಳನ್ನು ಪರಿಚಯಿಸಲಾಗಿದೆ.

### ಸಾಮರ್ಥ್ಯಗಳು

1] ಉತ್ತರ ಅಮೆರಿಕದ ಸ್ಥಾನ, ವಿಸ್ತೀರ್ಣ ಹಾಗೂ ಭೌಗೋಳಿಕ ಸನ್ನಿವೇಶಗಳನ್ನು ತಿಳಿಯುವರು.

2] ಉತ್ತರ ಅಮೆರಿಕದ ಪ್ರಾಕೃತಿಕ ವಿಭಾಗಗಳ ವೈವಿಧ್ಯವನ್ನು ಹೋಲಿಕೆ ಮಾಡಿ ಅರಿಯುವರು.

3] ಉತ್ತರ ಅಮೆರಿಕದ ನದಿ ಹಾಗೂ ಮಹಾಸರೋವರಗಳ ಬಗ್ಗೆ ತಿಳಿದುಕೊಳ್ಳುವರು.

4] ಉತ್ತರ ಅಮೆರಿಕದ ವೈವಿಧ್ಯ ವಾಯುಗುಣವು ಸ್ವಾಭಾವಿಕ ಸಸ್ಯವರ್ಗ ಹಾಗೂ ಪ್ರಾಣಿವರ್ಗಗಳ ಮೇಲೆ ಬೀರುವ ಪ್ರಭಾವವನ್ನು ತಿಳಿದುಕೊಳ್ಳುವರು.

5] ಉತ್ತರ ಅಮೆರಿಕದಲ್ಲಿನ ವ್ಯವಸಾಯದ ಅಭಿವೃದ್ಧಿಯನ್ನು ಅರಿತುಕೊಳ್ಳುವರು.


6] ಪ್ರಮುಖ ಖನಿಜಗಳ ಸಮೃದ್ಧಿಯನ್ನು ಬಳಸಿಕೊಂಡು ಉತ್ತರ ಅಮೆರಿಕವು ಹೇಗೆ ಕೈಗಾರಿಕಾ ಅಭಿವೃದ್ಧಿಯನ್ನು ಹೊಂದಿದೆ ಎಂಬುದನ್ನು ತಿಳಿಯುವರು.

7] ಉತ್ತರ ಅಮೆರಿಕದ ಜನಸಂಖ್ಯೆಯ ಮೂಲ, ಸಾಂದ್ರತೆ ಹಾಗೂ ಹಂಚಿಕೆಗಳನ್ನು ತಿಳಿಯುವರು.



ಉತ್ತರ ಅಮೆರಿಕವು ಇತ್ತೀಚೆಗೆ ಕಂಡುಹಿಡಿದ ಖಂಡವಾಗಿದೆ. ಸಾ.ಶ. 1501ರಲ್ಲಿ ಇಟಲಿಯ ನಾವಿಕ ಅಮೆರಿಗೊ ವೆಸ್‌ಪುಸಿ ಈ ಖಂಡದ ಕರಾವಳಿಯನ್ನು ತಲುಪಿದನು. ಅನಂತರ ಈ ಖಂಡವನ್ನು ಆತನ ಹೆಸರಿನ ಮೊದಲ ಪದ 'ಅಮೆರಿಗೊ' ದಿಂದ 'ಅಮೆರಿಕಾ' ಎಂದು ಕರೆಯಲಾಗಿದೆ. ಈ ಖಂಡದಲ್ಲಿನ ಬಹುತೇಕ ನಿವಾಸಿಗಳು ಯುರೋಪಿಯನರು ಮತ್ತು ಇತರ ದೇಶಗಳಿಂದ ವಲಸೆ ಬಂದವರಾಗಿದ್ದಾರೆ. ಅವರು ಮೆಕ್ಸಿಕೊದ ಚಿನ್ನವನ್ನು ಬಳಕೆ ಮಾಡಿದರೆ, ಫ್ರೆಂಚರು ಕೆನಡದಲ್ಲಿ

ತುಪ್ಪಳ (fur) ವ್ಯಾಪಾರವನ್ನು ಲಾಭದಾಯಕವಾಗಿ ಮಾಡಿಕೊಂಡರು. ಬ್ರಿಟಿಷರು ಕೆನಡದ ಅಟ್ಲಾಂಟಿಕ್ ಪ್ರಾಂತ್ಯ ಮತ್ತು ನ್ಯೂಇಂಗ್ಲೆಂಡ್‌ನ ಮೀನುಗಾರಿಕೆ ಮತ್ತು ಅಲ್ಲಿನ ಅರಣ್ಯವನ್ನು ಲೂಟಿಮಾಡಿದರು.






**ಉತ್ತರ ಅಮೆರಿಕ (ರಾಜಕೀಯ)**

ಉತ್ತರ ಅಮೆರಿಕದ ಹೇರಳವಾದ ಸಂಪನ್ಮೂಲಗಳು ಅಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಗೆ ತಳಹದಿಯಾಗಿವೆ. ವಿಸ್ತಾರವಾದ ಸ್ಥಳೀಯ ಮಾರುಕಟ್ಟೆ, ಅಂತರಾಷ್ಟ್ರೀಯ ವ್ಯಾಪಾರ ಸಂಬಂಧ, ಉತ್ತಮ ಸಾರಿಗೆ ಮುಂತಾದವುಗಳಿಂದ ಉತ್ತರ ಅಮೆರಿಕವು ಜಗತ್ತಿನ ಅತಿ ಶ್ರೀಮಂತ ಮತ್ತು ಆರ್ಥಿಕವಾಗಿ ಪ್ರಾಬಲ್ಯ ಹೊಂದಿದ ಖಂಡಗಳಲ್ಲೊಂದಾಗಿದೆ. ಈ ಖಂಡವನ್ನು ಮಾದರಿಯಾಗಿಟ್ಟುಕೊಂಡು ಇತರ ಖಂಡಗಳೊಡನೆ ಹೋಲಿಕೆ ಮಾಡಿ ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ.

# 1. ಸ್ಥಾನ, ಭೌಗೋಳಿಕ ಸನ್ನಿವೇಶ ಮತ್ತು ವಿಸ್ತೀರ್ಣ

**ಸ್ಥಾನ:** ಉತ್ತರ ಅಮೆರಿಕವು ಸಂಪೂರ್ಣವಾಗಿ ಸಮಭಾಜಕವೃತ್ತದ ಉತ್ತರದಲ್ಲಿ ನೆಲೆಗೊಂಡಿದೆ. ಅದು ಅಕ್ಷಾಂಶಿಕವಾಗಿ $19^0$ ಉತ್ತರ ದಿಂದ $71^0$ ಉತ್ತರ ಅಕ್ಷಾಂಶ, $50^0$ ಪಶ್ಚಿಮದಿಂದ, $150^0$ ಪಶ್ಚಿಮ ರೇಖಾಂಶಗಳ ನಡುವೆ ಹಬ್ಬಿದೆ. ಕರ್ಕಾಟಕ ಸಂಕ್ರಾಂತಿ ವೃತ್ತವು ($23\frac{1}{2}^0$ ಉ.ಅ) ಈ ಖಂಡದ ದಕ್ಷಿಣದಲ್ಲಿಯೂ ಉತ್ತರ ಮೇರು ವೃತ್ತವು ($66\frac{1}{2}^0$ ಉ.ಆರ್ಕ್ಟಿಕ್ ವೃತ್ತ) ಉತ್ತರ ಭಾಗದಲ್ಲಿ ಹಾದು ಹೋಗಿವೆ.

**ಭೌಗೋಳಿಕ ಸನ್ನಿವೇಶ:** ಉತ್ತರ ಅಮೆರಿಕವು ಪೂರ್ವದಲ್ಲಿ ಅಟ್ಲಾಂಟಿಕ್ ಮಹಾಸಾಗರ, ಪಶ್ಚಿಮದಲ್ಲಿ ಫೆಸಿಫಿಕ್ ಮಹಾಸಾಗರ ಮತ್ತು ಉತ್ತರದಲ್ಲಿ ಆರ್ಕ್ಟಿಕ್ (ಉತ್ತರ ಶೀತ) ಸಾಗರದಿಂದ ಸುತ್ತುವರಿದಿದೆ. ಬೇರಿಂಗ್ ಜಲಸಂಧಿಯು ಇದನ್ನು ಏಷ್ಯ ಖಂಡದಿಂದ ಪ್ರತ್ಯೇಕಿಸಿದೆ. ಪನಾಮ ಭೂಕಂಠದಿಂದಾಗಿ ಇದು ದಕ್ಷಿಣ ಅಮೆರಿಕದೊಂದಿಗೆ ಭೂಸಂಪರ್ಕವನ್ನು ಹೊಂದಿತ್ತು. ಈಗ ಅದು ಪನಾಮ ಕಾಲುವೆಯಿಂದ ಪ್ರತ್ಯೇಕಗೊಂಡಿದೆ. ಅಸಂಖ್ಯಾತ ಸಣ್ಣ ಸಣ್ಣ ಜಲಭಾಗಗಳನ್ನು ಇಲ್ಲಿ ಕಾಣಬಹುದು. ಉದಾ:– ಮೆಕ್ಸಿಕೊ ಖಾರಿ, ಹಡ್ಸನ್‌ಕೊಲ್ಲಿ, ಅಲಾಸ್ಕ ಖಾರಿ, ಕ್ಯಾಲಿಫೋರ್ನಿಯ ಖಾರಿ ಇತ್ಯಾದಿ. ವೆಸ್ಟ್ ಇಂಡಿಸ್ ಮತ್ತು ಕ್ಯೂಬಾ ದ್ವೀಪಗಳನ್ನು ಕೆರಬಿಯನ್ ಸಮುದ್ರದಲ್ಲಿ ಕಾಣಬಹುದು. ಕೆನಡದ ಪೂರ್ವ ಕರಾವಳಿಯಲ್ಲಿ ನ್ಯೂಫೌಂಡ್‌ಲ್ಯಾಂಡ್ ಪ್ರದೇಶವಿದೆ. ಆರ್ಕ್ಟಿಕ್ ಮಹಾಸಾಗರದಲ್ಲಿ ಅಸಂಖ್ಯಾತ ದ್ವೀಪಗಳಿದ್ದು, ಅವುಗಳಲ್ಲಿ ಗ್ರೀನ್‌ಲ್ಯಾಂಡ್ ಅತಿ ದೊಡ್ಡದಾಗಿದೆ. ಉತ್ತರ ಅಮೆರಿಕದ ದಕ್ಷಿಣದಲ್ಲಿರುವ ಅಂಚಿನ ಭೂಭಾಗವನ್ನು ಮಧ್ಯ ಅಮೆರಿಕವೆಂದು ಕರೆಯಲಾಗಿದೆ.

**ವಿಸ್ತೀರ್ಣ:** ಉತ್ತರ ಅಮೆರಿಕವು ವಿಸ್ತೀರ್ಣದಲ್ಲಿ (16.46%) ಏಷ್ಯ ಮತ್ತು ಆಫ್ರಿಕಗಳ ನಂತರ ಮೂರನೇ ಅತಿ ದೊಡ್ಡ ಭೂಖಂಡವಾಗಿದೆ (24.24 ದಶಲಕ್ಷ ಚ.ಕಿ.ಮೀ). ಇದು ಭಾರತಕ್ಕಿಂತ ಸುಮಾರು ಏಳು ಪಟ್ಟು ದೊಡ್ಡದಾಗಿದೆ. ಉತ್ತರ ಅಮೆರಿಕದಲ್ಲಿ 24 ರಾಜ್ಯಗಳಿವೆ. ಕೆನಡ, ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಮೆಕ್ಸಿಕೋ ಈ ಮೂರು ರಾಜ್ಯಗಳು ಗಾತ್ರದಲ್ಲಿ ದೊಡ್ಡದಾಗಿವೆ. ಉತ್ತರ ಅಮೆರಿಕದ ಭೌಗೋಳಿಕ ಪ್ರದೇಶದಲ್ಲಿ ಕೆರಿಬಿಯನ್ ದ್ವೀಪಗಳೂ ಸೇರಿವೆ.


**ನಿಮಗಿದು ತಿಳಿದಿದೆಯೇ?**

| ದೇಶಗಳು | ಅವುಗಳ ವಿಶೇಷತೆ |
|---|---|
| ಕೆನಡ | – ಟ್ರಾನ್ಸ್ ಕೆನಡಿಯನ್ ರೈಲ್ವೆ |
| ಯು.ಎಸ್.ಎ. | – ಗ್ರ್ಯಾಂಡ್ ಕ್ಯಾನಿಯನ್, ಹೋಮ್ಸ್ ಸರೋವರಗಳು, ಬಾರ್ ರಿಂಗರ್ ಕ್ರೇಟರ್, ವಾಲ್ಕನಾಸ್ |
| ವೆಸ್ಟ್ ಇಂಡಿಸ್ | – ಕ್ರಿಕೆಟ್, ದ್ವೀಪಗಳು |

# 2. ಪ್ರಾಕೃತಿಕ ವಿಭಾಗಗಳು

ಉತ್ತರ ಅಮೆರಿಕ ಖಂಡವನ್ನು ನಾಲ್ಕು ಮುಖ್ಯ ಪ್ರಾಕೃತಿಕ ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ


1. ಪಶ್ಚಿಮದ ಪರ್ವತಾವಳಿಗಳು (ರಾಕಿ ಪರ್ವತಗಳು)
2. ಕೇಂದ್ರದ ಮಹಾ ಮೈದಾನಗಳು
3. ಪೂರ್ವದ ಉನ್ನತ ಪ್ರದೇಶಗಳು/ಅಪಲೇಷಿಯನ್ ಪರ್ವತಗಳು
4. ಕರಾವಳಿ ಪ್ರದೇಶ





ಉತ್ತರ ಅಮೆರಿಕ ಪ್ರಾಕೃತಿಕ ವಿಭಾಗಗಳು

## 1. ಪಶ್ಚಿಮದ ಪರ್ವತಾವಳಿಗಳು

ಇವು ಹಿಮಾಲಯ ಪರ್ವತಗಳಂತೆ ಮಡಿಕೆ ಪರ್ವತ ಶ್ರೇಣಿಗಳಾಗಿವೆ. ಪಶ್ಚಿಮದ ಈ ಪರ್ವತಾವಳಿಗಳು ಉತ್ತರದಲ್ಲಿ ಅಲಾಸ್ಕದಿಂದ ದಕ್ಷಿಣದಲ್ಲಿ ಪನಾಮದವರೆಗೂ ಹಬ್ಬಿವೆ. ಅವು ಅನೇಕ ಸರಣಿ ಸಮಾನಾಂತರ ಪರ್ವತ ಸರಣಿಗಳಿಂದ ಕೂಡಿದ್ದು, ಅವುಗಳ ನಡುವೆ ಅಂತರ್ ಮೈದಾನ ಮತ್ತು ಪ್ರಸ್ಥಭೂಮಿಗಳಿವೆ.



ರಾಕಿ ಪರ್ವತ ಸರಣಿ



ಅಲಾಸ್ಕ ಪರ್ವತ ಸರಣಿ



ಮ್ಯಾಕ್‌ಕಿನ್ಲೆ ಪರ್ವತ

ಇವುಗಳ ಎತ್ತರವು ಅಲಾಸ್ಕದೆಡೆಗೆ ಹೋದಂತೆ ಕಡಿಮೆಯಾಗುತ್ತದೆ ಮತ್ತು ಮೆಕ್ಸಿಕೊ ಕಡೆಗೆ ಹೋದಂತೆ ಹೆಚ್ಚಾಗುತ್ತದೆ. ಪಶ್ಚಿಮದ ಪರ್ವತಾವಳಿಗಳಲ್ಲಿ ರಾಕಿ ಪರ್ವತಗಳು ಅತಿ ಪ್ರಮುಖವಾದ ಸರಣಿಗಳಾಗಿವೆ. ಈ ಪ್ರದೇಶದಲ್ಲಿ ಮೌಂಟ್ ಮ್ಯಾಕ್‌ಕಿನ್ಲೆ (6194 ಮೀ) ಅತಿ ಎತ್ತರವಾದ ಶಿಖರವಾಗಿದ್ದರೆ, ಮೃತ್ಯುಕಣಿವೆಯು (ಸಮುದ್ರ ಮಟ್ಟದಿಂದ 86 ಮೀ.ನಷ್ಟು ತಗ್ಗಾದ) ಅತಿ ತಗ್ಗಾದ ಭಾಗವಾಗಿದೆ. ಕಾಸ್ಕೇಡ್ ಮತ್ತು ಸಿಯೆರ್ರಾ ನಿವೇಡಗಳು ಇತರೆ ಪರ್ವತ ಸರಣಿಗಳು. ಕ್ಯಾಲಿಫೋರ್ನಿಯದಲ್ಲಿರುವ ವೈಟ್ನೀ ಪರ್ವತ ಮತ್ತು ಶ್ವೇತ ಪರ್ವತಗಳು ತಮ್ಮದೇ ಆದ ಏರಿಳಿತ ಲಕ್ಷಣಗಳನ್ನು ಹೊಂದಿದ್ದು,

ಅವು ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾಗಿವೆ. ಈ ಸರಣಿಗಳ ಮಧ್ಯೆ ಕೆಲವು ಅಂತರ್ ಪರ್ವತ ಪ್ರಸ್ಥಭೂಮಿಗಳನ್ನು ಕಾಣಬಹುದು. ಅವುಗಳಲ್ಲಿ ಕೊಲಂಬಿಯ. ಕೊಲರಾಡೊ ಮತ್ತು ಮೆಕ್ಸಿಕನ್ ಪ್ರಸ್ಥಭೂಮಿಗಳು ಪ್ರಮುಖವಾದವುಗಳಾಗಿವೆ. ಕೊಲರಾಡೊ ನದಿಯು ಕೊಲರಾಡೊ ಪ್ರಸ್ಥಭೂಮಿಯನ್ನು ತನ್ನ ಅಪಾರ ಸವಕಳಿಯ ಮೂಲಕ 'ಮಹಾ ಕಂದರ' (ಗ್ರ್ಯಾಂಡ್ ಕ್ಯಾನಿಯನ್)ವನ್ನು ನಿರ್ಮಾಣಕ್ಕೆ ಕಾರಣವಾಗಿದೆ.

ಓಲ್ಡ್ ಫೇಥ್‌ಫುಲ್ ಎಂಬುದು – ಪ್ರಪಂಚದ ಹೆಸರಾಂತ ಗೈಸರ್ (ಬಿಸಿ ನೀರಿನ ಬುಗ್ಗೆ) ಆಗಿದ್ದು ಅಮೆರಿಕ ಸಂಯುಕ್ತ ಸಂಸ್ಥಾನದ ಯೆಲ್ಲೋಸ್ಟೋನ್ ರಾಷ್ಟ್ರೀಯ ಉದ್ಯಾನವನದಲ್ಲಿದೆ.



ಓಲ್ಡ್ ಫೇಥ್‌ಫುಲ್ ಗೈಸರ್

## 2. ಕೇಂದ್ರೀಯ ಮಹಾ ಮೈದಾನಗಳು

ಕೇಂದ್ರೀಯ ಮೈದಾನಗಳನ್ನು ಪ್ರೈರೀಸ್‌ನ ಮಹಾಮೈದಾನಗಳೆಂದೂ ಕರೆಯಲಾಗಿದೆ. ಅವುಗಳು ಪೂರ್ವದಲ್ಲಿ ಅಪಲೇಷಿಯನ್ ಪರ್ವತ ಮತ್ತು ಪಶ್ಚಿಮದಲ್ಲಿ ಪರ್ವತಾವಳಿಗಳ ಮಧ್ಯೆ ಕಂಡುಬರುತ್ತವೆ. ಈ ಮೈದಾನಗಳು ಹೆಚ್ಚು ವಿಸ್ತಾರವಾಗಿದ್ದು (ಉತ್ತರ ಅಮೆರಿಕದ ಒಟ್ಟು ಭೂಭಾಗದ 3/5ರಷ್ಟು) ಸಮತಟ್ಟಾದ ಲಕ್ಷಣದಿಂದ ಸಾಧಾರಣ ಇಳಿಜಾರುವಿನಿಂದ ಕೂಡಿವೆ. ಈ ಮೈದಾನಗಳು ಮಿಸಿಸಿಪ್ಪಿ ಮತ್ತು ಮಿಸ್ಸೌರಿ ನದಿಗಳು ಮತ್ತು ಅವುಗಳ ಉಪನದಿಗಳಿಂದ ನಿರ್ಮಾಣವಾಗಿವೆ. ಇದು ಪ್ರಪಂಚದ ಅತಿ ಫಲವತ್ತಾದ ಮೈದಾನಗಳಲ್ಲೊಂದಾಗಿದ್ದು, ಉತ್ತಮ ಕೃಷಿ ಪ್ರದೇಶವಾಗಿದೆ. ಈ ಪ್ರದೇಶದ ಉತ್ತರ ಭಾಗವು ಹಿಮಹಾಳೆಗಳಿಂದ (ಹಿಮನದಿ) ಭೂನಗ್ನೀಕರಣಕ್ಕೆ ಒಳಗಾಗಿರುವ ಕಾರಣದಿಂದಾಗಿ ಅಧಿಕ ಸಂಖ್ಯೆಯ ಬಯಲುಗಳು ನಿರ್ಮಾಣಗೊಂಡಿವೆ. ಈ ಬಯಲುಗಳು ಸರೋವರಗಳಿಂದ ಸುತ್ತುವರೆದಿವೆ.

ಧೂಳಿನ ಸುಂಟರಗಾಳಿ (ಭೋಗುಣಿ) (Dust Bowl) – ಅವೈಜ್ಞಾನಿಕ ಸಾಗುವಳಿಯಿಂದ 1930ರ ದಶಕದಲ್ಲಿ ಉಂಟಾದ ಬಿರುಗಾಳಿಗೆ ಧೂಳಿನ ಸುಂಟರಗಾಳಿ ಎನ್ನುವರು. ಇದು ಅಮೆರಿಕ ಮತ್ತು ಕೆನಡದ ಕೃಷಿ ಭೂಮಿಗೆ ಅಪಾರ ಹಾನಿಯನ್ನುಂಟು ಮಾಡಿತು.

## 3. ಪೂರ್ವದ ಉನ್ನತ ಪ್ರದೇಶಗಳು/ ಅಪಲೇಷಿಯನ್ ಪರ್ವತಗಳು

ಪೂರ್ವದ ಉನ್ನತ ಪ್ರದೇಶಗಳನ್ನು ಅಪಲೇಷಿಯನ್ ಪರ್ವತಗಳೆಂದೂ ಕರೆಯಲಾಗುತ್ತದೆ. ಇವುಗಳು ಭೂಖಂಡದ ಪೂರ್ವ ಅಂಚಿನುದ್ದಕ್ಕೂ ನ್ಯೂಫೌಂಡ್‌ಲ್ಯಾಂಡ್ ಪ್ರದೇಶದಿಂದ ಅಲಬಾಮದವರೆಗೂ ವಿಸ್ತರಿಸಿವೆ. ಅಪಲೇಷಿಯನ್‌ಗಳು ಪ್ರಾಚೀನ ಮಡಿಕೆ ಪರ್ವತಗಳಾಗಿದ್ದು ಭೂನಗ್ನೀಕರಣಕ್ಕೊಳಗಾಗಿದ್ದು ಅವು ಇಂದು ಪ್ರಸ್ತುತ ಎತ್ತರವನ್ನು ಹೊಂದಿವೆ.



ಅಪಲೇಷಿಯನ್ ಮಡಿಕೆ ಪರ್ವತಗಳು

ಅಪಲೇಷಿಯನ್ ಸರಣಿಗಳ ಪೂರ್ವ ಭಾಗದಲ್ಲಿ ಪರ್ವತಪಾದದ ಪ್ರಸ್ಥಭೂಮಿ ಮತ್ತು ಅಟ್ಲಾಂಟಿಕ್ ಕರಾವಳಿ ಮೈದಾನಗಳಿವೆ. ಸೇಂಟ್ ಲಾರೆನ್ಸ್ ಕಣಿವೆಯು ಲಾಬ್ರಡಾರ್ ಪ್ರಸ್ಥಭೂಮಿಯನ್ನು ಅಪಲೇಷಿಯನ್ ಶ್ರೇಣಿಗಳಿಂದ ಪ್ರತ್ಯೇಕಿಸುತ್ತದೆ. ಅವು ಕಲ್ಲಿದ್ದಲು, ಸೀಸ, ಸತು, ಕಬ್ಬಿಣದ ಅದಿರು, ತಾಮ್ರ, ಜಲಶಕ್ತಿ ಮತ್ತು ಕಾಡುಮರಗಳಂತಹ ಸಂಪನ್ಮೂಲಗಳಿಂದ ಶ್ರೀಮಂತವಾಗಿವೆ. ಈ ಪ್ರದೇಶವು ಅಪಾರ ಜನಸಂಖ್ಯೆಯನ್ನು ಹೊಂದಿದ್ದು, ಅದು ಉತ್ತರ ಅಮೆರಿಕದ ಆರ್ಥಿಕತೆಗೆ ಪ್ರಮುಖ ಕೊಡುಗೆ ನೀಡಿದೆ.

## 4. ಕರಾವಳಿ ಮೈದಾನ


ದಕ್ಷಿಣದ ಪನಾಮ ಭೂಕಂಠವನ್ನು ಹೊರತಾಗಿ ಉತ್ತರ ಅಮೆರಿಕಾವು ಬಹಳ ಉದ್ದವಾದ ಮತ್ತು ಕೋಚುಕೋಚಾದ (Indented) ಸಮುದ್ರ ತೀರವನ್ನು ಹೊಂದಿದೆ. ಕರಾವಳಿ ಮೈದಾನವು ಈಶಾನ್ಯದಲ್ಲಿ ಕಿರಿದಾಗಿದೆ ಮತ್ತು ದಕ್ಷಿಣ ಮತ್ತು ಪಶ್ಚಿಮದ ಕಡೆಗೆ ಹೋದಂತೆ ಅಗಲವಾಗಿದೆ. ಸರಾಸರಿ ಎತ್ತರ ಸಮುದ್ರ ಮಟ್ಟಕ್ಕೆ 150ಮೀ. ಇದು ತಗ್ಗು ಮತ್ತು ಸಾಧಾರಣಾ ಮೈದಾನ ಪ್ರದೇಶವಾಗಿದ್ದು ಫಲವತ್ತಲ್ಲದ ಮರಳು ಮಣ್ಣಿನಿಂದ ಆವರಿಸಿದೆ. ಬಹಳಷ್ಟು ಜವುಗು ಮತ್ತು ಜವುಳು ಭಾಗಗಳಿವೆ.

ನದಿ ಮುಖಭಾಗ ಮತ್ತು ಕೊಲ್ಲಿಗಳ ಅಸ್ತಿತ್ವದಿಂದಾಗಿ ಸಮುದ್ರ ತೀರ ಕೋಚುಕೋಚಾಗಿದ್ದು, ಅನೇಕ ಬಂದರುಗಳು ನೆಲಸಿವೆ.

## ನದಿಗಳು ಮತ್ತು ದೊಡ್ಡ ಸರೋವರಗಳು

ಉತ್ತರ ಅಮೆರಿಕವು ಕೆಲವು ದೊಡ್ಡ ಮತ್ತು ಚಿಕ್ಕ ನದಿಗಳನ್ನು ಹೊಂದಿದೆ. ಕೆನಡಿಯನ್ ಭೂಫಲಕದ ಸುತ್ತಲಿನ ಅಸಂಖ್ಯಾತ ಸರೋವರಗಳು ಈ ಭೂಖಂಡದ ವೈಶಿಷ್ಟ್ಯ ಭೂಸ್ವರೂಪವನ್ನು ನಿರ್ಮಿಸಿವೆ.

**ನದಿಗಳು:** ಮಿಸಿಸಿಪ್ಪಿ ಮತ್ತು ಅದರ ಉಪನದಿಗಳು ಉತ್ತರ ಅಮೇರಿಕಾದ ಅತಿ ದೊಡ್ಡ ನದಿ ವ್ಯವಸ್ಥೆಯಾಗಿದ್ದು, ಖಂಡದ ಮೂರನೇ ಎರಡರಷ್ಟು ಭೂಭಾಗದ ಮೂಲಕ ಹರಿಯುತ್ತವೆ. ಮಿಸಿಸಿಪ್ಪಿ ನದಿಯು ಮೆಕ್ಸಿಕೊ ಖಾರಿಯನ್ನು ಸೇರುತ್ತದೆ. ಮಿಸ್ಸೌರಿ ಎಂಬುದು ಇದರ ಪ್ರಮುಖ ಉಪನದಿ. ರೆಡ್‌ರಿವರ್, ಓಹಾವೊ, ಅರಕಾನ್ಸ್‌ಸ್, ಟೆನಸ್ಸಿ ಮತ್ತು ಪ್ಲಾಟೆ ಎಂಬುವು ಇತರೆ ಉಪನದಿಗಳು. ಸ್ನೇಕ್, ಫ್ರೇಸರ್, ಕೊಲಂಬಿಯಾ, ಯೂಕಾನ್, ಕೊಲರಾಡೊ, ರಯೊಗ್ರಾಂಡ್, ಮೆಕೆಂಜಿ, ನೆಲ್ಸನ್ ಮತ್ತು ಸೇಂಟ್ ಲಾರೆನ್ಸ್‌ಗಳು ಉತ್ತರ ಅಮೇರಿಕೆಯ ಇತರ ಪ್ರಮುಖ ನದಿಗಳು.





ಉತ್ತರ ಅಮೆರಿಕದ ನದಿಗಳು



ಮಿಸಿಸಿಪ್ಪಿ ನದಿ

ಕೊಲರಾಡೊ, ಕೊಲಂಬಿಯ ಮತ್ತು ಫ್ರೇಸರ್‌ಗಳು ಪಶ್ಚಿಮಕ್ಕೆ ಹರಿಯುವ ಪ್ರಮುಖ ನದಿಗಳು. ಇವು ಚಿಕ್ಕವು ಮತ್ತು ರಭಸದಿಂದ ಹರಿಯುತ್ತವೆ. ಅವು ಪೆಸಿಫಿಕ್ ಸಾಗರವನ್ನು ಸೇರುತ್ತವೆ.

ಕೊಲರಾಡೊ ನದಿಯು ಕೊಲರಾಡೊ ಪ್ರಸ್ಥಭೂಮಿಯ ಮೂಲಕ ಹರಿಯುತ್ತಾ ಗ್ರಾಂಡ್ ಕ್ಯಾನಿಯನ್ ಮಹಾಕಂದರವನ್ನು ನಿರ್ಮಾಣ ಮಾಡಿದೆ. ಅದು ಪ್ರಕೃತಿ ಸೌಂದರ್ಯ ಮತ್ತು ಪ್ರವಾಸೋದ್ಯಮದ ಕೇಂದ್ರವಾಗಿದೆ. ಈ ಮಹಾಕಂದರವನ್ನು 'ಪ್ರಪಂಚದ ಪ್ರಾಕೃತಿಕ ಅದ್ಭುತ' ಎಂದು ಕರೆಯಲಾಗಿದೆ. ಕೊಲಂಬಿಯಾ ನದಿಯು ಕೊಲಂಬಿಯಾ ಪ್ರಸ್ಥಭೂಮಿಯ ಮೂಲಕ ಹರಿಯುತ್ತದೆ.



ಮಿಸ್ಸೋರಿ ನದಿ

| | |
|---|---|
| ಮಹಾಕಂದರ (ಅರಿಜೋನ, ಯು.ಎಸ್.ಎ.)<br>ಆಳ – ಸುಮಾರು 1800 ಮೀ.<br>ಅಗಲ – 3ರಿಂದ 29 ಕಿ.ಮೀ. | <br>ಗ್ರ್ಯಾಂಡ್ ಕ್ಯಾನಿಯನ್ (ಮಹಾ ಕಂದರ) |

ಕೆನಡಿಯನ್ ಫಲಕದಲ್ಲಿ ಅನೇಕ ಚಿಕ್ಕ ನದಿಗಳು ಹರಿಯುತ್ತವೆ. ಅವು ಹಡ್ಸನ್ ಕೊಲ್ಲಿಗೆ ಸೇರುತ್ತವೆ. ಸೇಂಟ್ ಲಾರೆನ್ಸ್ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳ ಅತಿ ಪ್ರಮುಖವಾದ ನದಿಯಾಗಿದೆ. ಇದು ಮಹಾಸರೋವರಗಳ ಮೂಲಕ ಹರಿಯುತ್ತದೆ. ಒಂದು ವರ್ಷದಲ್ಲಿ ಇದರ ನೀರು ಮೂರು ತಿಂಗಳುಗಳ ಕಾಲ ಹೆಪ್ಪುಗಟ್ಟಿರುತ್ತದೆ.

**ಸರೋವರಗಳು:** ಉತ್ತರ ಅಮೆರಿಕವು ಅಪಾರ ಸಂಖ್ಯೆಯ ಸಿಹಿನೀರಿನ ಮತ್ತು ಉಪ್ಪು ನೀರಿನ ಸರೋವರಗಳನ್ನು ಹೊಂದಿದೆ. ಅವುಗಳು ಕೆನಡಿಯನ್ ಭೂಫಲಕದ ದಕ್ಷಿಣದ ಗಡಿಭಾಗದಲ್ಲಿ ನೆಲೆಗೊಂಡಿವೆ. ಹ್ಯೂರಾನ್, ಓಂಟಾರಿಯೊ, ಮಿಚಿಗನ್, ಐರಿ ಮತ್ತು ಸುಪೀರಿಯರ್‌ಗಳು ಪ್ರಮುಖವಾದ ಸರೋವರಗಳಾಗಿವೆ.



ಸುಪೀರಿಯರ್ ಸರೋವರ

ಒಟ್ಟಾರೆಯಾಗಿ ಈ ಸರೋವರಗಳನ್ನು **ಹೋಮ್ಸ್ (HOMES)** ಎಂದು ಕರೆಯಲಾಗಿದೆ. ಸುಪೀರಿಯರ್ ಸರೋವರವು ಮಹಾಸರೋವರಗಳಲ್ಲಿ ದೊಡ್ಡದಾಗಿದ್ದು ವಿಶ್ವದ ಅತಿ ದೊಡ್ಡ ಸಿಹಿ ನೀರಿನ ಸರೋವರವಾಗಿದೆ. ಚಿಕಾಗೊ ಮತ್ತು ಡೆಟ್ರಾಯಿಟ್ ನಗರಗಳು ಐರಿ ಸರೋವರದ ದಡದಲ್ಲಿ ನೆಲೆಗೊಂಡಿವೆ. ವಿನ್ನಿಪೆಗ್ ಸರೋವರವು ಕೆನಡಾದ ಪ್ರಮುಖ ಸರೋವರವಾಗಿದೆ. ಈ ಎಲ್ಲಾ ಸರೋವರಗಳು ಪ್ರಮುಖವಾದ ಜಲಮಾರ್ಗಗಳನ್ನು ಒದಗಿಸಿವೆ.

## 3. ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗ


**ವಾಯುಗುಣ:** ಉತ್ತರ ಅಮೆರಿಕವು ಅತಿ ವಿಸ್ತಾರವಾದ ವಿಭಿನ್ನ ಮೇಲ್ಮೈ ಲಕ್ಷಣ ಅಕ್ಷಾಂಶಗಳ ವಿಸ್ತರಣೆಗಳಿಂದಾಗಿ ವಿಭಿನ್ನವಾದ ವಾಯುಗುಣವನ್ನು ಹೊಂದಿದೆ. ಅಲಾಸ್ಕ ಮತ್ತು ಗ್ರೀನ್‌ಲ್ಯಾಂಡ್ ಹೆಪ್ಪುಗಟ್ಟುವ ಹವಾಗುಣ ಪರಿಸ್ಥಿತಿಗಳನ್ನು (ಟಂಡ್ರಾ ಮಾದರಿ) ಹೊಂದಿದ್ದರೆ, ಅಮೆರಿಕ ಸಂಯುಕ್ತ ಸಂಸ್ಥಾನದ ನೈರುತ್ಯದಲ್ಲಿರುವ ಮರುಭೂಮಿಗಳು ಸುಡುವ ಶಾಖವನ್ನು ಹೊಂದಿವೆ. ಫ್ಲಾರಿಡದ ಆಗ್ನೇಯ ಭಾಗ, ಕೆರೆಬಿಯನ್ ಮತ್ತು ಕೇಂದ್ರೀಯ ಅಮೆರಿಕ ಉಷ್ಣವಲಯ ಪರಿಸ್ಥಿತಿಯನ್ನು ಹೊಂದಿವೆ. ಈ ಖಂಡದ ಕೇಂದ್ರ ಮತ್ತು ದಕ್ಷಿಣ ಪ್ರದೇಶಗಳು ಹರಿಕೇನ್ ಮತ್ತು ಟಾರ್ನಾಡೊಗಳಂತಹ ಬಿರುಗಾಳಿಯುಕ್ತ ಪ್ರದೇಶಗಳಾಗಿವೆ.



ಹರಿಕೇನ್ಸ್



ಟಾರ್ನಾಡೊ




ಉತ್ತರ ಅಮೆರಿಕದ ಸ್ವಾಭಾವಿಕ ಸಸ್ಯವರ್ಗ

**ಸ್ವಾಭಾವಿಕ ಸಸ್ಯವರ್ಗ:** ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿವರ್ಗಗಳ ಹಂಚಿಕೆ ಹೆಚ್ಚಾಗಿ ಅಲ್ಲಿನ ವಾಯುಗುಣ, ಮಣ್ಣು ಮತ್ತು ಭೂಸ್ವರೂಪಗಳನ್ನು ಅವಲಂಬಿಸಿದೆ. ಉತ್ತರ ಅಮೆರಿಕವು ಹೊಂದಿರುವ ವೈವಿಧ್ಯ ವಾಯುಗುಣ ಮತ್ತು ಭೂಸ್ವರೂಪಗಳಿಂದಾಗಿ ವೈವಿಧ್ಯಮಯ ಸಸ್ಯವರ್ಗಗಳನ್ನು ಹೊಂದಿದೆ.



ಸೂಚಿಪರ್ಣ ಅರಣ್ಯ


ಈ ಸಸ್ಯವರ್ಗದ ಪಟ್ಟಿಗಳು ಮುಖ್ಯವಾಗಿ ವಾಯುಗುಣ ಪ್ರದೇಶಗಳನ್ನು ಅನುಸರಿಸುತ್ತವೆ. ಅವುಗಳೆಂದರೆ ಟಂಡ್ರಾ ಮಾದರಿಯ ಸಸ್ಯವರ್ಗವು ಉತ್ತರ ಮೇರುವೃತ್ತ (ಆರ್ಕ್ಟಿಕ್ ವೃತ್ತ)ದೊಳಗೆ ಕಂಡುಬರುತ್ತದೆ. ಅದರಲ್ಲೂ ಮುಖ್ಯವಾಗಿ ಕೆನಡ, ಅಲಾಸ್ಕ ಮತ್ತು ಗ್ರೀನ್‌ಲ್ಯಾಂಡ್‌ಗಳಲ್ಲಿ ಕಂಡುಬರುತ್ತದೆ. ಇಲ್ಲಿ ಚಳಿಗಾಲವು ದೀರ್ಘ ಮತ್ತು ಹೆಪ್ಪುಗಟ್ಟುವ ಸ್ಥಿತಿಯನ್ನೂ ಹಾಗೂ ಬೇಸಿಗೆಯು ಅತಿಕಡಿಮೆ ಅವಧಿಯನ್ನು ಹೊಂದಿದೆ. ಇಲ್ಲಿ ಕಂಡುಬರುವ ಸಸ್ಯವರ್ಗಗಳೆಂದರೆ ಪಾಚಿ ಮತ್ತು ಹಾವಸೆಗಳು ಮಾತ್ರ. ಬೇಸಿಗೆ ಋತುಮಾನದಲ್ಲಿ ಕೆಲವು ಸುಗಂಧ ದ್ರವ್ಯಕ್ಕೆ ಸಂಬಂಧಿಸಿದ ಹೂಬಿಡುವ ಸಸ್ಯಗಳು ಬೆಳೆಯುತ್ತವೆ. ಇಂತಹ ಕಷ್ಟ ಮತ್ತು ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಬದುಕಬಲ್ಲ ಪ್ರಾಣಿಗಳಾದ ಹಿಮಜಿಂಕೆ, ಕಾರಿಬೊ ಮತ್ತು ಶಾಖಾಹಾರಿಗಳಾದ ಹಿಮಕರಡಿಗಳು ಇಲ್ಲಿ ಕಂಡು ಬರುತ್ತವೆ.

ಟಂಡ್ರಾ ಪಟ್ಟಿಯ ದಕ್ಷಿಣಭಾಗವು ತಂಪಾದ ಸಮಶೀತೋಷ್ಣ ವಿಧದ ವಾಯುಗುಣ ಪ್ರದೇಶದಲ್ಲಿದೆ. ಇದು ವಾಸ್ತವವಾಗಿ ಸೂಚಿಪರ್ಣ ಅರಣ್ಯದ ಪಟ್ಟಿಯಾಗಿದ್ದು ಅದನ್ನು **ಟೈಗಾ** ಎಂದು ಕರೆಯಲಾಗಿದೆ. ಸೂಚಿಪರ್ಣ ಅರಣ್ಯಗಳಲ್ಲಿ ಸದಾ ಹಸಿರಿನಿಂದ ಕೂಡಿದ ಪ್ರಭೇದಗಳಾದ ಪೈನ್, ಫರ್, ಸ್ಪ್ರೂಸ್, ಲಾರ್ಚ್ ಮುಂತಾದ ಮರಗಳು ಕಂಡುಬರುತ್ತವೆ. ಉಣ್ಣೆಯಂತಹ ಕೂದಲನ್ನು ಹೊಂದಿರುವ ಪ್ರಾಣಿಗಳನ್ನು ಈ ಪ್ರದೇಶದಲ್ಲಿ ಕಾಣಬಹುದು. ಉದಾ: ಲಿಂಕ್ಸ್, ಸಾಬಲ್, ಸಿಲ್ವರ್ ತೋಳ ಇತ್ಯಾದಿ.





ಬೀವರ್



ಕಪ್ಪು ಕರಡಿ



ಹಿಮ ಕಪ್ಪುಕರಡಿ



ಸಿಲ್ವರ್ ಫಾಕ್ಸ್



ಸೈಪ್ರಸ್



ಚೆಸ್ಟ್‌ನೆಟ್



ಎಲೆಯುದುರುವ ವಿಧದ ಅರಣ್ಯಗಳನ್ನು ಸೆಂಟ್ ಲಾರೆನ್ಸ ಮತ್ತು ಮಹಾಸರೋವರಗಳ ಪೂರ್ವಭಾಗದಲ್ಲಿ ಕಾಣಬಹುದು. ಈ ಪ್ರಾಂತ್ಯದ ಉತ್ತರ ಭಾಗವು ಶೀತದಿಂದ ಮತ್ತು ದಕ್ಷಿಣದ ಭಾಗವು ಬೆಚ್ಚನೆಯ ಹವಾಗುಣದಿಂದ ಕೂಡಿದೆ. ಚಳಿಗಾಲವು ಶೀತವಾಗಿದ್ದರೆ ಬೇಸಿಗೆಯು ಬೆಚ್ಚಗಿದೆ ಮತ್ತು ಸಾಮಾನ್ಯವಾಗಿ ಮಳೆಯನ್ನು ಪಡೆಯುತ್ತದೆ ಇಲ್ಲಿ ಕಂಡುಬರುವ ಮರಗಳು ನಿರ್ದಿಷ್ಟ ಪಡಿಸಿದ ಅವಧಿಯಲ್ಲಿ ತಮ್ಮ ಎಲೆಗಳನ್ನು ಉದುರಿಸಿಕೊಳ್ಳುತ್ತವೆ. ಉದಾ: ಸೈಪ್ರಸ್, ಓಕ್, ಆಶ್ ಮತ್ತು ಚೆಸ್ಟ್‌ನಟ್‌ಗಳು. ಇಲ್ಲಿ ಕಂಡುಬರುವ ವನ್ಯಜೀವಿಗಳೆಂದರೆ ಬೀವರ್, ಕಪ್ಪುಕರಡಿ, ಹಿಮಇಲಿ ಮತ್ತು ಮುಳ್ಳುಹಂದಿ.

ತಂಪಾದ ಸಮಶೀತೋಷ್ಣವಲಯದ ವಾಯುಗುಣವನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಭಾಗಗಳಲ್ಲಿ ಕಾಣಬಹುದಾಗಿದೆ. ರಾಕೀ ಪರ್ವತಗಳು ಮತ್ತು ಮಿಸಿಸಿಪ್ಪಿ– ಮಿಸ್ಸೋರಿ ಬಯಲುಗಳ ಮಧ್ಯೆ ವಿಶಾಲವಾದ ಹುಲ್ಲುಗಾವಲು ಪ್ರದೇಶವಿದೆ. ಇದನ್ನು **ಪ್ರೈರೀಸ್** ಎಂತಲೂ ಕರೆಯಲಾಗುತ್ತದೆ. ಇದು ವಾಸ್ತವವಾಗಿ ವಿಶಾಲವಾದ ವೃಕ್ಷರಹಿತ ಪ್ರದೇಶವಾಗಿದೆ. ಈ ಮೈದಾನ ಪ್ರದೇಶವು ಗೋಧಿ ಬೇಸಾಯ ಮತ್ತು ಪಶುಸಂಗೋಪನೆಗೆ ಹೆಸರುವಾಸಿಯಾಗಿದೆ. ಇದನ್ನು ಪ್ರಪಂಚದ ಗೋಧಿಯ ಕಣಜ ಅಥವಾ 'ರೊಟ್ಟಿಯ ಬುಟ್ಟಿ' ಎಂದು ಕರೆಯುತ್ತಾರೆ.



ಪ್ರೈರೀಸ್ ಹುಲ್ಲುಗಾವಲು

ಸೂಚಿಪರ್ಣ ಮತ್ತು ಎಲೆ ಉದುರಿಸುವ ಮರಗಳು ಸಮಶೀತೋಷ್ಣ ಮಿಶ್ರ ಅರಣ್ಯಗಳಲ್ಲಿ ಕಂಡುಬರುತ್ತವೆ. ಕೆನಡ ಮತ್ತು ಉತ್ತರ ಕ್ಯಾಲಿಫೋರ್ನಿಯಗಳು ಅಂತಹ ಅರಣ್ಯಗಳನ್ನು ಹೊಂದಿವೆ. ಈ ಅರಣ್ಯ ಪ್ರದೇಶದಲ್ಲಿ ಕಂಡುಬರುವ ಪ್ರಮುಖ ಮರಗಳೆಂದರೆ ಬರ್ಚ್, ಬೀಚ್, ಮ್ಯಾಪಲ್, ಓಕ್ ಮುಂತಾದವುಗಳು.



ಮಹಾಗನಿ



ಮ್ಯಾಪಲ್

ಕೆನಡ ಸರೋವರಗಳಿಂದ ಕೂಡಿದ ದೇಶ. ವಿರಳ ಜನಸಂಖ್ಯೆ ಹಾಗೂ ಅಪಾರ ಟೈಗಾ ಮಾದರಿಯ ಕಾಡುಗಳನ್ನು ಹೊಂದಿದೆ. ಪ್ರಪಂಚದ ಅತ್ಯಧಿಕ ಮರದ ರಫ್ತು ಇಲ್ಲಿಂದಾಗುತ್ತದೆ.

ಮೆಕ್ಸಿಕೊದ ದಕ್ಷಿಣ ಭಾಗ ಮತ್ತು ವೆಸ್ಟ್ ಇಂಡಿಸ್ ಪ್ರದೇಶವು ಉಷ್ಣವಲಯದ ಅರಣ್ಯಗಳನ್ನು ಹೊಂದಿದೆ. ಇಲ್ಲಿ ಗಟ್ಟಿಮರಗಳಾದ ಮಹಾಗನಿ ಮತ್ತು ಲಾಗ್‌ವುಡ್‌ಗಳನ್ನು ಒಳಗೊಂಡಂತಿರುವ ಮಿಶ್ರ ಅರಣ್ಯಗಳನ್ನು ಕಾಣಬಹುದು.

ಕ್ಯಾಲಿಫೋರ್ನಿಯದ ಪಶ್ಚಿಮ ಕರಾವಳಿಯು ಮೆಡಿಟರೇನಿಯನ್ ವಿಧದ ವಾಯುಗುಣ ಹೊಂದಿದೆ. ದೀರ್ಘ ಬೇಸಿಗೆ ಬರಪರಿಸ್ಥಿತಿಗೆ ನೈಜವಾಗಿ ಹೊಂದಿಕೊಳ್ಳಬಲ್ಲ ಸಸ್ಯವರ್ಗವಿದೆ. ಇಲ್ಲಿ ಆಲಿವ್, ಓಕ್, ಕಾರ್ಕ್ ಮುಂತಾದ ಮರಗಳು ಬೆಳೆಯುತ್ತವೆ. ಈ ಪ್ರದೇಶವು ಹುಳಿಹಣ್ಣು (ಕಿತ್ತಳೆ) ಬೇಸಾಯಕ್ಕೆ ಪ್ರಸಿದ್ಧಿ. ದಕ್ಷಿಣ ಕ್ಯಾಲಿಫೋರ್ನಿಯ, ಮೆಕ್ಸಿಕೊ ಮತ್ತು ಅರಿಝೋನಗಳಲ್ಲಿ ಈ ಖಂಡದ ಪಶ್ಚಿಮ ಭಾಗದ ಮರುಭೂಮಿಯಂತಹ (ಶುಷ್ಕ) ಪರಿಸ್ಥಿತಿಯನ್ನು ಕಾಣಬಹುದಾಗಿದೆ. ವಿವಿಧ ರೀತಿಯ ಪಾಪಾಸು ಕಳ್ಳಿ ಮತ್ತು ಮುಳ್ಳಿನ ಪೊದೆಗಳು ಇಲ್ಲಿ ಸರ್ವೇಸಾಮಾನ್ಯ. ಇಲ್ಲಿನ ಮರುಭೂಮಿಯ ರಾತ್ರಿಗಳನ್ನು 'ಮರುಭೂಮಿಗಳ ಚಳಿಗಾಲ'ವೆಂದು ಕರೆಯಲಾಗಿದೆ.



ಮರುಭೂಮಿ ಸಸ್ಯ – ವಿವಿಧ ಪಾಪಾಸು ಕಳ್ಳಿಗಳು

## 4. ಕೃಷಿ

ಕೃಷಿಯು ಉತ್ತರ ಅಮೆರಿಕದ ಒಂದು ಪ್ರಮುಖವಾದ ಕಸಬಾಗಿದೆ. ಈ ಖಂಡದ ಕೇಂದ್ರೀಯ ತಗ್ಗು ಪ್ರದೇಶಗಳಾದ ಅದರಲ್ಲೂ ವಿಶೇಷವಾಗಿ ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಅತ್ಯಧಿಕ ಕೃಷಿ ಉತ್ಪನ್ನ ರಾಷ್ಟ್ರಗಳಾಗಿವೆ. ಉತ್ತರ ಅಮೆರಿಕದ ಒಟ್ಟು ಭೂಭಾಗದಲ್ಲಿನ ಶೇ.10ರಷ್ಟು ಪ್ರದೇಶವು ಮಾತ್ರ ಕೃಷಿಗೆ ಸೂಕ್ತವಾಗಿದೆ. ಆದರೆ ಆ ಕೃಷಿಕ್ಷೇತ್ರಗಳಿಂದ ಬರುತ್ತಿರುವ ಉತ್ಪನ್ನ ಅತಿ ಹೆಚ್ಚು. ಏಕೆಂದರೆ ವಿಸ್ತಾರವಾದ ಭೂಹಿಡುವಳಿ, ಫಲವತ್ತಾದ ಮಣ್ಣು, ಸಾಕಷ್ಟು ನೀರಾವರಿ, ಯಾಂತ್ರಿಕ ಬೇಸಾಯ ಹಾಗೂ ಇತರ ಸೌಲಭ್ಯಗಳ ಜೊತೆಗೆ ಮಾನವನ ಪೂರ್ಣ ಶ್ರಮವಿರುವುದರಿಂದ ಉತ್ತರ ಅಮೆರಿಕವನ್ನು ವಿಶ್ವದ ಅತಿದೊಡ್ಡ ಕೃಷಿಪ್ರದೇಶವಾಗಿ ಪರಿಣಮಿಸಿದೆ.

ವಿಶಿಷ್ಟ ಬೆಳೆಗಳ ಉತ್ಪಾದನೆಯಲ್ಲಿ ವಿಶಿಷ್ಟತೆಯನ್ನು ಹೊಂದಿರುವ ಪ್ರಾಂತ್ಯಗಳನ್ನು ಬೆಳೆಪಟ್ಟಿ ಎಂದು ಕರೆಯಲಾಗಿದೆ. ಉದಾ: ಕಾರ್ನ್‌ಪಟ್ಟಿ, ಗೋಧಿಪಟ್ಟಿ, ಹತ್ತಿಪಟ್ಟಿ, ತಂಬಾಕುಪಟ್ಟಿ ಇತ್ಯಾದಿ.

ಉತ್ತರ ಅಮೆರಿಕ ಅದರಲ್ಲೂ ವಿಶೇಷವಾಗಿ ಕೆನಡ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಗೋಧಿಯನ್ನು ಒಂದು ಪ್ರಮುಖ ಆಹಾರ ಧಾನ್ಯವನ್ನಾಗಿ ಬೆಳೆಯುತ್ತಿವೆ. ಪ್ರೈರೀ ಪ್ರದೇಶವು ಗೋಧಿ ಬೇಸಾಯಕ್ಕೆ ಸೂಕ್ತ ಮಣ್ಣನ್ನು ಒದಗಿಸಿದೆ. ಇಲ್ಲಿನ ಜನಸಂಖ್ಯೆಯು ಕಡಿಮೆಯಿದ್ದು, ಅಪಾರ ಪ್ರಮಾಣದ ಉತ್ಪಾದನೆ ಇರುವುದರಿಂದ ಅದನ್ನು ರಫ್ತು ಮಾಡಲಾಗುತ್ತಿದೆ. ಮೆಕ್ಕೆಜೋಳವು **ಕಾರ್ನ್** ಎಂದು ಪ್ರಖ್ಯಾತಿಪಡೆದಿದೆ. ಅದನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಮೆಕ್ಸಿಕೊಗಳಲ್ಲಿ ವಿಶಾಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಬಹುತೇಕ ಪ್ರಮಾಣದ ಮೆಕ್ಕೆ ಜೋಳವನ್ನು ಹಸು ಮತ್ತು ಹಂದಿಗಳ ಮೇವಿಗಾಗಿ ಉಪಯೋಗಿಸಲಾಗುತ್ತದೆ. ಇವುಗಳನ್ನು ಮೆಕ್ಸಿಕೊದಲ್ಲಿ ಮಾಂಸಕ್ಕಾಗಿ ಸಾಕಲಾಗುತ್ತದೆ. ಇದೊಂದು ಆಹಾರ ಧಾನ್ಯವಾಗಿದೆ. ಆದರೆ ಇಂದು ಮೆಕ್ಕೆಜೋಳವು ಇಂಧನ ಬೆಳೆಯಾಗಿ ಬೆಳೆಯಲಾಗುತ್ತಿದೆ.



ಗೋಧಿ



ಮೆಕ್ಕೆಜೋಳ

ಇತರ ಪ್ರಧಾನ ಬೆಳೆಗಳೆಂದರೆ ಬಾರ್ಲಿ, ಓಟ್ಸ್ ಮತ್ತು ಆಲೂಗಡ್ಡೆಗಳಾಗಿವೆ. ಬಾರ್ಲಿ ಮತ್ತು ಓಟ್ಸ್‌ಗಳನ್ನು ಚಳಿಗಾಲದಲ್ಲಿ ಬೆಳೆಯಬಹುದು. ಬಾರ್ಲಿಯನ್ನು ಬಿಯರ್ (beer) ತಯಾರಿಕೆಗೆ ಬಳಸಲಾಗುತ್ತದೆ. ಓಟ್ಸನ್ನು ಪ್ರಾಣಿಗಳ ಮೇವುಗಳಿಗಾಗಿ ಉಪಯೋಗಿಸಲಾಗುತ್ತದೆ. ಈ ಖಂಡದಲ್ಲಿ ಆಲೂಗಡ್ಡೆಯನ್ನು ಸಹ ಬೆಳೆಯಲಾಗುತ್ತಿದ್ದು ಇದು ಪ್ರಮುಖ ಆಹಾರ ಬೆಳೆಯಾಗಿದೆ.

ಉತ್ತರ ಅಮೆರಿಕದಲ್ಲಿ ಹತ್ತಿ ಮತ್ತು ತಂಬಾಕುಗಳನ್ನು ವಾಣಿಜ್ಯ ಬೆಳೆಗಳನ್ನಾಗಿ ದಕ್ಷಿಣ ಭಾಗಗಳಲ್ಲಿ ಬೆಳೆಯಲಾಗುತ್ತಿದೆ. ಮಿಸಿಸಿಪ್ಪಿ ನದಿಯ ಕಣಿವೆಯುದ್ದಕ್ಕೂ ಹತ್ತಿ ಪ್ರದೇಶವು ಕಂಡುಬರುತ್ತದೆ. ಯು.ಎಸ್.ಎ ಮತ್ತು ಮೆಕ್ಸಿಕೊ ದೇಶಗಳಲ್ಲಿ ಉದ್ದ ಎಳೆಯ ಹತ್ತಿಯನ್ನು ಉತ್ಪಾದಿಸಲಾಗುತ್ತದೆ. ದಕ್ಷಿಣ ಯು.ಎಸ್.ಎ, ಕ್ಯೂಬ, ಜಮೈಕ ಮತ್ತು ಮೆಕ್ಸಿಕೊಗಳಲ್ಲಿ ತಂಬಾಕು ಬೆಳೆಯಲಾಗುತ್ತದೆ. ಅಮೆರಿಕ ತಂಬಾಕು ಬೆಳೆಯುತ್ತಿರುವ ವಿಶ್ವದ ರಾಷ್ಟ್ರಗಳಲ್ಲಿ ಚೀನದ ನಂತರ ಎರಡನೇ ಸ್ಥಾನದಲ್ಲಿದೆ.

ಕಬ್ಬು ಇಲ್ಲಿ ಬೆಳೆಯುತ್ತಿರುವ ಮತ್ತೊಂದು ಪ್ರಮುಖ ಬೆಳೆಯಾಗಿದೆ. ಕ್ಯೂಬಾ ವಿಶ್ವದಲ್ಲಿ ಸಕ್ಕರೆ ಉತ್ಪಾದನೆಯ ಮೂರನೇ ಅತಿ ದೊಡ್ಡ ರಾಷ್ಟ್ರವಾಗಿರುವುದರಿಂದಲೇ ಇದನ್ನು 'ಜಗತ್ತಿನ ಸಕ್ಕರೆ ಬೋಗುಣಿ' ಎಂದು ಕರೆಯಲಾಗಿದೆ. ಯು.ಎಸ್.ಎ ದಲ್ಲಿ ಶುಗರ್ ಬೀಟ್‌ನ್ನೂ ಸಹ ಬೆಳೆಯಲಾಗುತ್ತದೆ. ಇದು ಸಕ್ಕರೆ ತಯಾರಿಕೆಗೆ ಕಬ್ಬಿನ ತರುವಾಯ ಪ್ರಮುಖ ಮೂಲವಾಗಿದೆ.



ಸೇಬಿನ ತೋಟ



ದ್ರಾಕ್ಷಿ

ಕಾಫಿ ಮತ್ತು ಕೋಕೊಗಳು ಉಷ್ಣವಲಯದ ತೋಟಗಾರಿಕಾ ಬೆಳೆಯಾಗಿದ್ದು, ಇವುಗಳನ್ನು ಅಮೆರಿಕದ ಕೇಂದ್ರಭಾಗಗಳು ಮತ್ತು ವೆಸ್ಟ್ ಇಂಡಿಸ್‌ಗಳಲ್ಲಿ ಬೆಳೆಯಲಾಗುತ್ತಿದೆ. ಕ್ಯಾಲಿಫೋರ್ನಿಯ, ಫ್ಲಾರಿಡಾ, ನ್ಯೂಜೆರ್ಸಿ ಮತ್ತು ನಗರ ಕೇಂದ್ರಗಳ ಸುತ್ತಲಿನ ಪ್ರದೇಶಗಳಲ್ಲಿ ದ್ರಾಕ್ಷಿ, ಕಿತ್ತಳೆ, ನಿಂಬೆ (ಲಿಂಬೆ), ಸೇಬು, ಸೀಬೆ, ಪೀಚ್ ಇತ್ಯಾದಿ ಹಣ್ಣುಗಳನ್ನು ಬೆಳೆಯಲಾಗುತ್ತಿದೆ. ಕ್ಯಾಲಿಫೋರ್ನಿಯವು ಉತ್ತರ ಅಮೆರಿಕದ ಶೇ.90ರಷ್ಟು ದ್ರಾಕ್ಷಿಯನ್ನು ಬಳಸಿ ದ್ರಾಕ್ಷಾರಸ ಉತ್ಪಾದಿಸುತ್ತದೆ. ಆದುದರಿಂದ ಕ್ಯಾಲಿಫೋರ್ನಿಯವನ್ನು 'ದ್ರಾಕ್ಷಾರಸದ ನಾಡು' ಎಂದು ಕರೆಯಲಾಗಿದೆ.

ಉತ್ತರ ಅಮೆರಿಕ ಖಂಡದ ಈಶಾನ್ಯ ಭಾಗದ ಅಂಟ್ಲಾಂಟಿಕ್ ಸಾಗರ ತೀರದಲ್ಲಿ ಗ್ರ್ಯಾಂಡ್ ಬ್ಯಾಂಕ್‌ಗಳು, ನ್ಯೂಇಂಗ್ಲೆಂಡಿನ ಜಾರ್ಜಸ್ ಬ್ಯಾಂಕ್‌ಗಳು ಮತ್ತು ನ್ಯೂಫೌಂಡ್ ಲ್ಯಾಂಡ್ ಕರಾವಳಿಗಳ ಆಳವಿಲ್ಲದ ಖಂಡಾವರಣ ಪ್ರದೇಶಗಳು ಹೆಸರಾಂತ ಮೀನುಗಾರಿಕಾ ಪ್ರದೇಶಗಳಾಗಿವೆ.

## 5. ಪ್ರಮುಖ ಖನಿಜಗಳು ಮತ್ತು ಕೈಗಾರಿಕೆಗಳು

ಉತ್ತರ ಅಮೆರಿಕವು ಅಪಾರ ಸಂಪನ್ಮೂಲಗಳ ಕೊಡುಗೆಗೆ ಒಳಗಾಗಿದೆ. ಅದರ ನೈಸರ್ಗಿಕ ಸಂಪನ್ಮೂಲಗಳೆಂದರೆ ವೈವಿಧ್ಯಮಯ ಮಣ್ಣುಗಳು, ವಿಸ್ತಾರವಾದ ಹುಲ್ಲುಗಾವಲು, ಖನಿಜ, ಶಕ್ತಿ ಸಂಪನ್ಮೂಲಗಳು ಮತ್ತು ಅರಣ್ಯ ಸಂಪತ್ತುಗಳಾಗಿದೆ.

ಉತ್ತರ ಅಮೆರಿಕ ಭೂಖಂಡವು ವಿವಿಧ ಬೆಲೆಬಾಳುವ ಖನಿಜಗಳ ಅಧಿಕ ನಿಕ್ಷೇಪವನ್ನು ಹೊಂದಿದೆ. ಇಲ್ಲಿರುವ ಚಿನ್ನದ ನಿಕ್ಷೇಪವು ಜನರನ್ನು ಈ ಖಂಡಕ್ಕೆ ಬಹು ಹಿಂದೆಯೇ ಆಕರ್ಷಿಸಿದೆ. ಇದಲ್ಲದೆ ಕಬ್ಬಿಣದ ಅದಿರು, ತಾಮ್ರ, ನಿಕಲ್, ಬೆಳ್ಳಿ ಮತ್ತು ಸತುಗಳು ಇತರ ಪ್ರಮುಖವಾದ ಖನಿಜ ನಿಕ್ಷೇಪಗಳಾಗಿವೆ. ಈ ಖಂಡವು ಸಾಕಷ್ಟು ಪ್ರಮಾಣದ ಕಲ್ಲಿದ್ದಲು, ಕಲ್ಲೆಣ್ಣೆ ಮತ್ತು ನೈಸರ್ಗಿಕ ಅನಿಲಗಳನ್ನು ಹೊಂದಿದೆ.

ಉತ್ತರ ಅಮೆರಿಕದಲ್ಲಿ ಪ್ರಪ್ರಥಮ ಖನಿಜ ಗಣಿಯೆಂದರೆ ಚಿನ್ನದ ಗಣಿಯಾಗಿದೆ. ಕ್ಯಾಲಿಫೋರ್ನಿಯ ಮತ್ತು ಯೂಕಾನ್ ಕಣಿವೆಗಳು ಚಿನ್ನದ ಗಣಿಗಳ ಪ್ರಮುಖ ಪ್ರದೇಶಗಳಾಗಿವೆ. ಸುಪೀರಿಯರ್ ಸರೋವರ ಮತ್ತು ಅದನ್ನು ಸುತ್ತುವರಿದಿರುವ ಪ್ರದೇಶಗಳು ಅಪಾರ ಪ್ರಮಾಣದ ಕಬ್ಬಿಣದ ಅದಿರಿನ ನಿಕ್ಷೇಪಕ್ಕೆ ಪ್ರಖ್ಯಾತಿ ಪಡೆದಿವೆ. ಅತಿ ಉತ್ಕೃಷ್ಟ ದರ್ಜೆಯ ಕಬ್ಬಿಣದ ಅದಿರನ್ನು ಕೆನಡಿಯನ್ ಭೂಫಲಕದಲ್ಲಿ ಮತ್ತು ಅದನ್ನು ಸುತ್ತುವರಿದ ಪ್ರದೇಶದಲ್ಲಿ ಕಾಣಬಹುದಾಗಿದೆ. ಮೆಕ್ಸಿಕೊ ವಿಶ್ವದ ಪ್ರಮುಖ ಬೆಳ್ಳಿ ಉತ್ಪಾದಿಸುತ್ತಿರುವ ರಾಷ್ಟ್ರವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನವು ಪ್ರಪಂಚದಲ್ಲಿ ಅತ್ಯಧಿಕ ತಾಮ್ರವನ್ನು ಉತ್ಪಾದಿಸುತ್ತಿರುವ ರಾಷ್ಟ್ರವಾಗಿದೆ. ಖಂಡದಾದ್ಯಂತ ಪಳೆಯುಳಿಕೆ ಇಂಧನಗಳು ಸಾಧಾರಣ ಪ್ರಮಾಣದಲ್ಲಿ ಹಂಚಿಕೆಯಾಗಿರುವುದು ಕಂಡುಬರುತ್ತದೆ.



ಚಿನ್ನ



ಕಬ್ಬಿಣದ ಅದಿರು



ಉಕ್ಕು



ಕಲ್ಲಿದ್ದಲು



ತಾಮ್ರ



ನಿಕಲ್




ಬೆಳ್ಳಿ



ತವರ (ಸತುವು)



ಉತ್ತರ ಅಮೆರಿಕವು ಇಲ್ಲಿನ ಅಪಲೇಷಿಯನ್ ಪ್ರದೇಶದಲ್ಲಿ ಉತ್ತಮ ದರ್ಜೆಯ ಕಲ್ಲಿದ್ದಲ್ಲಿನ ಅಧಿಕ ನಿಕ್ಷೇಪವನ್ನು ಹೊಂದಿದೆ. ಜಗತ್ತಿನ ಒಟ್ಟು ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಶೇಕಡಾ 20ರಷ್ಟು ಪೆನ್ಸಿಲ್ವೇನಿಯಾ ಒಂದೇ ಉತ್ಪಾದಿಸುವುದು. ಅಮೆರಿಕ ಸಂಯುಕ್ತ ಸಂಸ್ಥಾನವು ಪ್ರಪಂಚದ ಅತ್ಯಧಿಕ ಕಲ್ಲಿದ್ದಲನ್ನು ರಫ್ತು ಮಾಡುತ್ತಿರುವ ದೇಶವಾಗಿದೆ. ಅಲಾಸ್ಕಾ, ಟೆಕ್ಸಾಸ್, ಲೂಷಿಯಾನ, ಕಾನ್ಸಾಸ್ ಮತ್ತು ಪಶ್ಚಿಮ ಕೆನಡಾದಲ್ಲಿ ಮತ್ತು ಮೆಕ್ಸಿಕೊದ ಕೆಲವು ಭಾಗಗಳಲ್ಲಿ ತೈಲ ಮತ್ತು ನೈಸರ್ಗಿಕ ಅನಿಲವಿರುವುದು ಕಂಡುಬಂದಿವೆ. ಪೆಸಿಫಿಕ್ ಮಹಾಸಾಗರದಂಚಿನ ಪ್ರದೇಶಗಳು ನೈಸರ್ಗಿಕ ಅನಿಲದ ಅಧಿಕ ನಿಕ್ಷೇಪವನ್ನು ಹೊಂದಿವೆ. ಅಮೆರಿಕ ಸಂಯುಕ್ತ ಸಂಸ್ಥಾನವು ಪ್ರಮುಖ ಪೆಟ್ರೋಲಿಯಂ ಉತ್ಪಾದಿಸುತ್ತಿರುವ ರಾಷ್ಟ್ರವಾಗಿದೆಯಲ್ಲದೆ ವಿಶ್ವದಲ್ಲಿ ಅಧಿಕ ಅಣುಶಕ್ತಿಯನ್ನು ಉತ್ಪಾದಿಸುತ್ತಿರುವ ದೇಶವೂ ಆಗಿದೆ.

ಉತ್ತರ ಅಮೆರಿಕದ ದೇಶಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳು

ಹೆಚ್ಚು ಕೈಗಾರಿಕೀಕರಣಕ್ಕೊಳಪಟ್ಟಿವೆ. ಇಲ್ಲಿ ಲಭ್ಯವಿರುವ ಕಬ್ಬಿಣದ ಅದಿರು, ಕಲ್ಲಿದ್ದಲು, ತಾಮ್ರ, ಬಾಕ್ಸೈಟ್‌ಗಳಂತಹ ಕಚ್ಚಾ ವಸ್ತುಗಳು ಭಾರಿ ಕೈಗಾರಿಕೆಗಳಿಗೆ ಸಹಾಯಕವಾಗಿವೆ. ಶಕ್ತಿ, ಸಾರಿಗೆ ಮತ್ತು ಆಧುನಿಕ ತಾಂತ್ರಿಕತೆಗಳ ಲಭ್ಯತೆಯು ವಿಸ್ತೃತ ಕೈಗಾರಿಕೀಕರಣಕ್ಕೆ ಕಾರಣವಾಗಿದೆ.

ಐರಿ, ಸುಪೀರಿಯರ್ ಮತ್ತು ಮಿಚಿಗನ್ ಸರೋವರಗಳ ಪ್ರದೇಶಗಳಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಉತ್ತಮವಾಗಿ ಅಭಿವೃದ್ಧಿಗೊಂಡಿರುವುದನ್ನು ಕಾಣಬಹುದು. ಇದಕ್ಕೆ ಇಲ್ಲಿನ ಕಚ್ಚಾವಸ್ತು ಮತ್ತು ಜಲಸಾರಿಗೆಗಳು ಸಹಾಯಕವಾಗಿವೆ. ಯು.ಎಸ್.ಎದಲ್ಲಿ ಅನುಕೂಲಕರವಾದ ಕೈಗಾರಿಕಾ ನೀತಿಯು ಕೈಗಾರಿಕೆಗಳ ಬೆಳವಣಿಗೆಗೆ ಸಹಾಯಕವಾಗಿದೆ. ಇಲ್ಲಿನ ಪಿಟ್ಸ್‌ಬರ್ಗ್ ನಗರವನ್ನು 'ಉಕ್ಕಿನ ನಗರ' ಎಂದು ಕರೆಯಲಾಗಿದೆ. ಇದಕ್ಕೆ ಕಾರಣ ಅಪಲೇಷಿಯನ್ ಪ್ರದೇಶದಲ್ಲಿ ದೊರೆಯುವ ಸಂಪದ್ಭರಿತವಾದ ಕಲ್ಲಿದ್ದಲು ನಿಕ್ಷೇಪಗಳು, ಜಲವಿದ್ಯುಚ್ಛಕ್ತಿ ಮತ್ತು ಬೃಹತ್ ಪ್ರಮಾಣದ ಸರಕುಗಳನ್ನು ಸಾಗಿಸಲು ಉತ್ತಮ ಸಾರಿಗೆ ಸೌಲಭ್ಯವಿರುವುದು. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಮೂಲ ಕೈಗಾರಿಕೆಯಾದ್ದರಿಂದ ಇದು ಇತರ ಕೈಗಾರಿಕೆಗಳಾದ ಆಟೋಮೊಬೈಲ್, ಹಡಗು ನಿರ್ಮಾಣ, ಲೋಕೋಮೋಟೀವ್ಸ್, ಭಾರಿ ಇಂಜಿನಿಯರಿಂಗ್, ವಿಮಾನ ನಿರ್ಮಾಣ ಮುಂತಾದ ಕೈಗಾರಿಕೆಗಳ ಅಭಿವೃದ್ಧಿಗೆ ಸಹಾಯಕವಾಗಿದೆ.



ಪಿಟ್ಸ್‌ಬರ್ಗ್ – ಉಕ್ಕಿನ ನಗರ

ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡಗಳಲ್ಲಿ ಮೃದು ಮರಗಳನ್ನು ಕಾಗದ, ಕಾರ್ಡ್‌ಬೋರ್ಡ್ ಮತ್ತು ನ್ಯೂಸ್‌ಪ್ರಿಂಟ್‌ಕಾಗದಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಮರದ ತಿರುಳನ್ನು ಕೃತಕ ನಾರು ತಯಾರಿಕೆಯಲ್ಲಿ ಬಳಸುವರು. ಕಾಗದ, ಮರದ ತಿರುಳು ಮತ್ತು ನ್ಯೂಸ್‌ಪ್ರಿಂಟ್‌ಕಾಗದಗಳ ರಫ್ತಿನಲ್ಲಿ ಕೆನಡವು ಅತಿ ಪ್ರಮುಖ ರಾಷ್ಟ್ರವಾಗಿದೆ. ಮರಕಡಿಯುವಿಕೆ ಉತ್ತರ ಅಮೆರಿಕದಲ್ಲಿ ಉತ್ತಮ ಸಂಘಟಿತ ವೃತ್ತಿಯಾಗಿದೆ. ಕೆನಡದಲ್ಲಿ ಮರಕಡಿಯುವ ವೃತ್ತಿಯನ್ನು

ಅವಲಂಬಿಸಿರುವ ಜನರನ್ನು **ಲಂಬರ್ ಜಾಕ್ಸ್** ಎಂದು ಕರೆಯಲಾಗುತ್ತದೆ. ರಾಸಾಯನಿಕ ಕೈಗಾರಿಕೆಯು ಕೃತಕ ರಬ್ಬರ್, ಪ್ಲಾಸ್ಟಿಕ್, ರಸಗೊಬ್ಬರಗಳು ಮತ್ತು ಔಷಧಿಗಳಂತಹ ವಿಭಿನ್ನ ವಸ್ತುಗಳನ್ನು ಉತ್ಪಾದಿಸುತ್ತದೆ. ಈಗ ಮರದ ಬದಲಾಗಿ ಪ್ಲಾಸ್ಟಿಕ್‌ನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಪ್ಲಾಸ್ಟಿಕ್‌ನ್ನು ತಯಾರಿಸಲಾಗುತ್ತಿದೆ. ಚಿಕಾಗೊ ನಗರವು ಪ್ಲಾಸ್ಟಿಕ್ ಕೈಗಾರಿಕೆಗೆ ಹೆಸರುವಾಸಿಯಾಗಿದೆ.

ಮಾಂಸವನ್ನು ಡಬ್ಬಿಗಳಲ್ಲಿ ತುಂಬುವುದು ಒಂದು ಪ್ರಮುಖ ಕೈಗಾರಿಕೆಯಾಗಿದ್ದು, ಅಸಂಖ್ಯಾತ ಕೇಂದ್ರಗಳಲ್ಲಿ ಮುಖ್ಯವಾಗಿ ಚಿಕಾಗೊ, ಕಾನ್ಸಾಸ್ ನಗರ ಮತ್ತು ಸೇಂಟ್ ಲೂಯಿಸ್‌ಗಳಲ್ಲಿ ವಿಸ್ತೃತವಾಗಿ ಹರಡಿದೆ. ವಿದ್ಯುತ್ ಮತ್ತು ವಿದ್ಯುನ್ಮಾನ ವಸ್ತುಗಳು ಸಹ ಅಧಿಕ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತವೆ. ಹಲವು ಕೈಗಾರಿಕಾ ಉತ್ಪನ್ನಗಳು ಮತ್ತು ಯಂತ್ರಗಳು ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಕೆನಡ ರಾಷ್ಟ್ರಗಳಿಂದ ರಫ್ತಾಗುತ್ತವೆ. ಕೇಂದ್ರ ಅಮೆರಿಕಾದ ಮೆಕ್ಸಿಕೊ ಮತ್ತು ಇತರ ರಾಷ್ಟ್ರಗಳು ಕೈಗಾರಿಕಾಭಿವೃದ್ಧಿಯಲ್ಲಿ ಹಿಂದುಳಿದಿವೆ. ಸಾಮಾನ್ಯವಾಗಿ ಇವು ಚಿಕ್ಕ ರಾಷ್ಟ್ರಗಳಾಗಿವೆ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಬೇಕಾಗುವಂತ ಶಕ್ತಿ ಸಂಪನ್ಮೂಲಗಳು ಮತ್ತು ಕಚ್ಚಾವಸ್ತುಗಳು ಹೆಚ್ಚು ಪ್ರಮಾಣದಲ್ಲಿರುವುದಿಲ್ಲ.







ಚಿಕಾಗೊ ಕೈಗಾರಿಕಾ ನಗರ

## 6. ಜನಸಂಖ್ಯೆ

ಬಹುತೇಕ ಉತ್ತರ ಅಮೆರಿಕನ್ನರು ಯುರೋಪಿಯನ್ನರು, ಅಮೆರಿಕನ್ ಇಂಡಿಯನ್ಸ್ ಮತ್ತು ಆಫ್ರಿಕನ್ನರಾಗಿದ್ದಾರೆ. ಅವರಲ್ಲಿ ಬಹುತೇಕ ಜನರು ಸ್ಪ್ಯಾನಿಷ್, ಇಂಗ್ಲೀಷ್, ಫ್ರೆಂಚ್ ಅಥವಾ ಅಮೆರಿಕನ್ ಇಂಡಿಯನ್ ಭಾಷೆಗಳನ್ನು ಮಾತನಾಡುತ್ತಾರೆ.




ಉತ್ತರ ಅಮೆರಿಕದ ಜನಸಾಂದ್ರತೆ



ಉತ್ತರ ಅಮೆರಿಕದ ಪೂರ್ವಭಾಗಗಳಲ್ಲಿ ಅತಿ ಹೆಚ್ಚಿನ ಜನಸಾಂದ್ರತೆಯನ್ನು ಕಾಣಬಹುದು. ಇಲ್ಲಿ ಹೆಚ್ಚಿನ ನಗರೀಕರಣವಿದೆ. ಉದಾ: ನ್ಯೂಯಾರ್ಕ್, ವಾಷಿಂಗ್‌ಟನ್, ಚಿಕಾಗೊ ಇತ್ಯಾದಿ. ಆದರೆ ಖಂಡದ ಬಹುತೇಕ ಉತ್ತರ ಭಾಗವು ಸಾಮಾನ್ಯವಾಗಿ ಹೆಚ್ಚು ಹಿಮಾವೃತದಿಂದ ಕೂಡಿರುವುದರಿಂದ ಖಾಲಿ ಲಕ್ಷಣದಿಂದ ಕೂಡಿದೆ.

ಅಮೆರಿಕ ಸಂಯುಕ್ತ ಸಂಸ್ಥಾನದ ನಗರ ಕೇಂದ್ರಗಳು ಮತ್ತು ಕೈಗಾರಿಕಾ ಪ್ರದೇಶಗಳು ಅಧಿಕ ಜನಸಾಂದ್ರತೆಯ ಪ್ರದೇಶಗಳಾಗಿವೆ. ಉತ್ತರ ಅಮೆರಿಕದ ಶೇ.98ರಷ್ಟು ಜನಸಂಖ್ಯೆಯು ನಗರ ಜನಸಂಖ್ಯೆಯಾಗಿದೆ.

**ಹೊಸ ಪದಗಳು :**

ಪ್ರೈರೀ, ಕೆರೆಬಿಯನ್, ಪರ್ವತಾವಳಿಗಳು, ರಾಕೀಸ್, ಅಪಲೇಷಿಯನ್, ಕೆನಡಿಯನ್, ಮಡಿಕೆ ಪರ್ವತ, ಭೂಫಲಕ, ಮಹಾಕಂದರ, ಹೋಮ್ಸ್, ಹರಿಕೇನ್ಸ್, ಟಾರ್ನಾಡೊ, ಟಂಡ್ರಾ, ಹಿಮಜಿಂಕೆ, ಕಾರಿಬೊ, ತೈಗಾ, ಬೆಳೆಪಟ್ಟಿ, ಓಟ್ಸ್, ಡಸ್ಟಬೌಲ್, ಕೋಕಿಂಗ್, ಲೋಕೋಮೋಟೀವ್ಸ್, ಲಂಬರ್ ಜಾಕ್ಸ್.

## ಅಭ್ಯಾಸಗಳು

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಉತ್ತರ ಅಮೆರಿಕ ಖಂಡವನ್ನು 'ಪ್ರೈರೀ ನಾಡು' ಎಂದು ಏಕೆ ಕರೆಯುತ್ತಾರೆ?
2. ಉತ್ತರ ಅಮೆರಿಕ ಖಂಡದ ಸ್ಥಾನ ಮತ್ತು ವಿಸ್ತೀರ್ಣ ತಿಳಿಸಿರಿ.
3. ಉತ್ತರ ಅಮೆರಿಕ ಖಂಡದ ಪ್ರಮುಖ ರಾಷ್ಟ್ರಗಳನ್ನು ಪಟ್ಟಿ ಮಾಡಿರಿ.
4. ಉತ್ತರ ಅಮೆರಿಕದ ಗ್ರ್ಯಾಂಡ್ ಕ್ಯಾನಿಯನ್ ಹೇಗೆ ನಿರ್ಮಾಣಗೊಂಡಿದೆ?
5. ಉತ್ತರ ಅಮೆರಿಕದ ಪ್ರಮುಖ ಸಸ್ಯ ಹಾಗೂ ಪ್ರಾಣಿಗಳನ್ನು ಹೆಸರಿಸಿರಿ.
6. ಉತ್ತರ ಅಮೆರಿಕದ ಪ್ರಮುಖ ನದಿಗಳನ್ನು ಪಟ್ಟಿ ಮಾಡಿರಿ.
7. ಉತ್ತರ ಅಮೆರಿಕದಲ್ಲಿ 'ಲಂಬರ್ ಜಾಕ್ಸ್' ಎಂದು ಯಾರನ್ನು ಕರೆಯುತ್ತಾರೆ?
8. ಉತ್ತರ ಅಮೆರಿಕದಲ್ಲಿ ಕಂಡುಬರುವ ಪ್ರಮುಖ ಜನರು ಹಾಗೂ ಅವರ ಭಾಷೆಗಳನ್ನು ತಿಳಿಸಿರಿ.

**ಚಟುವಟಿಕೆಗಳು**

1. ಉತ್ತರ ಅಮೆರಿಕ ಖಂಡದ ಬಾಹ್ಯರೇಖಾ ನಕ್ಷೆಯಲ್ಲಿ ಅಟ್ಲಾಸ್ ಪುಸ್ತಕದ ಸಹಾಯದಿಂದ ಖಂಡದ ಪ್ರಮುಖ ಪರ್ವತ, ನದಿ, ಮಹಾಸರೋವರ, ಮೈದಾನಗಳನ್ನು ಗುರುತಿಸಿರಿ.
2. ಉತ್ತರ ಅಮೆರಿಕ ಖಂಡದಲ್ಲಿ ಕಂಡುಬರುವ ಪ್ರಮುಖ ಸಸ್ಯ ಹಾಗೂ ಪ್ರಾಣಿಗಳನ್ನು ಪಟ್ಟಿ ಮಾಡಿ ಅವುಗಳ ಚಿತ್ರಗಳನ್ನು ಸಂಗ್ರಹಿಸಿರಿ.

☆ ☆ ☆

| ಪಾಠ 13 | ದಕ್ಷಿಣ ಅಮೆರಿಕ– ಆ್ಯಂಡೀಸ್‌ಗಳ ನಾಡು |
|---|---|

D7X6M7

**ಪಾಠದ ಪರಿಚಯ**

ಈ ಪಾಠದಲ್ಲಿ ದಕ್ಷಿಣ ಅಮೆರಿಕ ಖಂಡದ ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ, ನದಿಗಳು ಮತ್ತು ಸರೋವರಗಳು, ವಾಯುಗುಣ, ಸ್ವಾಭಾವಿಕ ಸಸ್ಯವರ್ಗ, ವನ್ಯಜೀವಿಗಳು, ಕೃಷಿ ಮತ್ತು ಪ್ರಾಣಿ ಸಾಕಣೆ, ಜನಸಂಖ್ಯೆಯ ಸಂಯೋಜನೆ, ಹಂಚಿಕೆ ಹಾಗೂ ಸಾಂದ್ರತೆಗಳನ್ನು ಕುರಿತ ಪರಿಚಯ.

**ಸಾಮರ್ಥ್ಯಗಳು.**

1] ದಕ್ಷಿಣ ಅಮೆರಿಕದ ಸ್ಥಾನ, ವಿಸ್ತೀರ್ಣ ಹಾಗೂ ಭೌಗೋಳಿಕ ಸನ್ನಿವೇಶಗಳ ಬಗ್ಗೆ ತಿಳಿಯುವರು.

2] ದಕ್ಷಿಣ ಅಮೆರಿಕದ ನದಿ ಹಾಗೂ ಸರೋವರಗಳ ಬಗ್ಗೆ ಅರಿತುಕೊಳ್ಳುವರು.

3] ದಕ್ಷಿಣ ಅಮೆರಿಕದ ವಾಯುಗುಣದ ವೈವಿಧ್ಯತೆ, ವೈವಿದ್ಯ ಪ್ರಾಣಿವರ್ಗ ಹಾಗೂ ಸಸ್ಯವರ್ಗಗಳನ್ನು ತಿಳಿಯುವರು.

4] ದಕ್ಷಿಣ ಅಮೆರಿಕದ ಕೃಷಿ ಮತ್ತು ಪ್ರಾಣಿ ಸಾಕಣೆಯಲ್ಲಿನ ವಿಶಿಷ್ಟತೆಯನ್ನು ಅರಿಯುವರು.

5] ದಕ್ಷಿಣ ಅಮೆರಿಕದ ಜನಸಂಖ್ಯೆ, ಜನಾಂಗೀಯ ಮಿಶ್ರಣ, ಹಂಚಿಕೆ, ಸಾಂದ್ರತೆಗಳನ್ನು ತಿಳಿಯುವರು.




ದಕ್ಷಿಣ ಅಮೆರಿಕವು ಪ್ರಪಂಚದ ನಾಲ್ಕನೆಯ ಅತಿ ದೊಡ್ಡ ಭೂಖಂಡವಾಗಿದೆ. ಕ್ರಿ.ಶ. 1498ರಲ್ಲಿ ಕ್ರಿಸ್ಟೋಫರ್ ಕೊಲಂಬಸನು ಈ ಭೂಖಂಡವನ್ನು ತಲುಪಿ, ಅದನ್ನು ಭಾರತವೆಂದು ಭಾವಿಸಿದ. ಅಲ್ಲಿನ ಸ್ಥಳೀಯರನ್ನು ರೆಡ್ ಇಂಡಿಯನ್ನರೆಂದು ಕರೆದನು. ಅನಂತರ ಯುರೋಪಿಯನ್ನರು (ಸ್ಪ್ಯಾನಿಷ್ ಮತ್ತು ಪೋರ್ಚುಗೀಸರು) ಈ ಭೂಖಂಡಕ್ಕೆ ಮುಗಿಬಿದ್ದರು.

ದಕ್ಷಿಣ ಅಮೆರಿಕವು ಆ್ಯಂಡೀಸ್ ಪರ್ವತ ಮತ್ತು ಅಮೆಜಾನ್ ನದಿ ವ್ಯವಸ್ಥೆವುಳ್ಳ ವಿಶೇಷವಾದ ಭೂಭಾಗವಾಗಿದೆ. ಅದು ಪ್ರಪಂಚದಲ್ಲೇ ಅತ್ಯಧಿಕ ಕಾಫಿಯನ್ನು ಉತ್ಪಾದಿಸುತ್ತಿದೆ ಇದನ್ನು ಸಾಮಾನ್ಯವಾಗಿ 'ಹುಲ್ಲುಗಾವಲುಗಳ ನಾಡು' ಎಂದು ಕರೆಯಲಾಗಿದೆ.

## 1. ಸ್ಥಾನ, ವಿಸ್ತಾರ ಮತ್ತು ಭೌಗೋಳಿಕ ಸನ್ನಿವೇಶ

**ಸ್ಥಾನ:** ದಕ್ಷಿಣ ಅಮೆರಿಕ ಖಂಡದ ಬಹುಭಾಗವು ದಕ್ಷಿಣಾರ್ಧಗೋಳದಲ್ಲಿದೆ. ಸ್ವಲ್ಪ ಭಾಗ ಉತ್ತರಾರ್ಧಗೋಳದಲ್ಲಿದೆ. ಭೂಮಧ್ಯರೇಖೆ ಮತ್ತು ಮಕರ ಸಂಕ್ರಾಂತಿ ವೃತ್ತಗಳು ಈ ಖಂಡದ ಮೂಲಕ ಹಾದುಹೋಗಿವೆ.




**ದಕ್ಷಿಣ ಅಮೆರಿಕ**

ಇದು ಉತ್ತರದಲ್ಲಿ ಅಗಲವಾಗಿಯೂ ಮತ್ತು ದಕ್ಷಿಣದ ಕಡೆಗೆ ಕಿರಿದಾಗಿದ್ದು ತ್ರಿಕೋನಾಕಾರವಾಗಿದೆ. ಅದರ ಅಕ್ಷಾಂಶಿಕವಾಗಿ $12^0$ ಉ. ಅಕ್ಷಾಂಶದಿಂದ $56^0$ ದಕ್ಷಿಣ ಅಕ್ಷಾಂಶದವರೆಗೂ ಮತ್ತು ರೇಖಾಂಶಿಕವಾಗಿ $35^0$ ಪ. ರೇಖಾಂಶದಿಂದ $81^0$ ಪಶ್ಚಿಮ ರೇಖಾಂಶದವರೆಗೂ ವಿಸ್ತರಿಸಿದೆ. ದಕ್ಷಿಣ ಅಮೆರಿಕ ಖಂಡವು ಪಶ್ಚಿಮಾರ್ಧಗೋಳದಲ್ಲಿ ನೆಲೆಗೊಂಡಿದೆ.

**ಭೌಗೋಳಿಕ ಸನ್ನಿವೇಶ:** ದಕ್ಷಿಣ ಅಮೆರಿಕ ಖಂಡವು ಉತ್ತರ ಭಾಗವನ್ನು ಹೊರತುಪಡಿಸಿ ಉಳಿದೆಲ್ಲಾ ದಿಕ್ಕುಗಳು ಜಲಭಾಗಗಳಿಂದ ಸುತ್ತುವರೆದಿದೆ. ಉತ್ತರದಲ್ಲಿ ಪನಾಮ ಕಾಲುವೆಯು ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳನ್ನು ಪ್ರತ್ಯೇಕಿಸಿದೆ. ದಕ್ಷಿಣ ಅಮೆರಿಕ ಖಂಡವು ಉತ್ತರದಲ್ಲಿ ಕೆರಿಬಿಯನ್ ಸಮುದ್ರಗಡಿಯಿಂದ, ಪೂರ್ವ ಮತ್ತು ಈಶಾನ್ಯ ಭಾಗದಲ್ಲಿ ಅಟ್ಲಾಂಟಿಕ್ ಸಾಗರದಿಂದ, ಪಶ್ಚಿಮದಲ್ಲಿ ಪೆಸಿಫಿಕ್ ಮಹಾಸಾಗರದಿಂದ ಮತ್ತು ದಕ್ಷಿಣದಲ್ಲಿ ಅಂಟಾರ್ಕ್ಟಿಕ್ ಸಾಗರದ ಹಿಮನೀರಿನಿಂದ ಆವರಿಸಲ್ಪಟ್ಟಿದೆ.

**ವಿಸ್ತೀರ್ಣ:** ದಕ್ಷಿಣ ಅಮೆರಿಕದ ಒಟ್ಟು ಭೂಭಾಗವು ಸುಮಾರು 177.1 ಲಕ್ಷ ಚ.ಕಿ.ಮೀ.ಗಳಷ್ಟಿದ್ದು ಅದು ಭಾರತಕ್ಕಿಂತಲೂ ಮೂರುವರೆ ಪಟ್ಟು ದೊಡ್ಡದಾಗಿದೆ. ಈ ಖಂಡದಲ್ಲಿ ಒಟ್ಟು ಹದಿಮೂರು ರಾಷ್ಟ್ರಗಳಿವೆ. ಬ್ರೆಜಿಲ್ ಅತಿ ದೊಡ್ಡ ಮತ್ತು ಫ್ರೆಂಚ್ ಗಯಾನವು ಅತಿ ಚಿಕ್ಕ ರಾಷ್ಟ್ರವಾಗಿದೆ, ಬೊಲಿವಿಯಾ ಮತ್ತು ಪರಾಗ್ವೆ ಹೊರತುಪಡಿಸಿ ದಕ್ಷಿಣ ಅಮೆರಿಕದ ಉಳಿದೆಲ್ಲಾ ದೇಶಗಳು ಸಮುದ್ರ ತೀರವನ್ನು ಹೊಂದಿವೆ. ಚಿಲಿ ದೇಶವು ನೀಳವಾದ ರಾಷ್ಟ್ರವಾಗಿದೆ.


- ಪನಾಮ ಕಾಲುವೆಯು (1912) ಉತ್ತರ ಅಮೆರಿಕ ಮತ್ತು ದಕ್ಷಿಣ ಅಮೆರಿಕಗಳ ಮಧ್ಯೆ ಇರುವ ಮುಖ್ಯ ಸಾಗರ ಮಾರ್ಗವಾಗಿದೆ.
- ಈಕ್ವೆಡಾರ್ ದೇಶದ ಹೆಸರು ಈಕ್ವೇಟರ್ ಎಂಬ ಆಂಗ್ಲಭಾಷಾ ಶಬ್ಧದಿಂದ ಬಂದಿದೆ.
- ಅರ್ಜೆಂಟೈನಾ ಮತ್ತು ಬ್ರೆಜಿಲ್‌ಗಳು ಕಾಲ್ಚೆಂಡಾಟಕ್ಕೆ ಪ್ರಖ್ಯಾತವಾಗಿವೆ.
- ಕ್ರಿ.ಶ. 2016ರಲ್ಲಿ ಬ್ರೆಜಿಲ್‌ನಲ್ಲಿ ಒಲಿಂಪಿಕ್ ಸಮಾವೇಶ ನಡೆದಿದೆ.
- ವೆನಿಜೂಲ ದೇಶವು ಮಾಡಲಿಂಗ್ ಮತ್ತು ವಿನ್ಯಾಸಕ್ಕೆ ಹೆಸರುವಾಸಿಯಾಗಿದೆ.
- ಸವೋ ಪೊಲೊ ಸಿಟಿ ಆಫ್ ಸ್ಕೈಸ್ಕೇಪರ್ (ಗಗನಚುಂಬಿ ಕಟ್ಟಡಗಳ ಶಹರ) ಎಂದು ಪ್ರಖ್ಯಾತವಾಗಿದೆ.



## 2. ಮೇಲ್ಮೈ ಲಕ್ಷಣಗಳು

ದಕ್ಷಿಣ ಅಮೆರಿಕವು ವಿಶಿಷ್ಟವಾದ ಭೂಮೇಲ್ಮೈ ಲಕ್ಷಣಗಳನ್ನು ಹೊಂದಿದೆ. ಅದು ಹಿಮಾವೃತವಾದ ಶಿಖರಗಳನ್ನು ಮತ್ತು ದಟ್ಟವಾದ (ಉಷ್ಣವಲಯದ) ಸಮಭಾಜಕವೃತ್ತದ ಅರಣ್ಯಗಳನ್ನು ಹೊಂದಿದೆ. ಈ ಭೂಖಂಡವು ಅತಿ ಫಲವತ್ತಾದ ಮೈದಾನ ಪ್ರದೇಶ ಅಂತೆಯೇ ಅನುಪಯುಕ್ತ ಮರುಭೂಮಿಗಳನ್ನು ಹೊಂದಿದೆ. ಈ ಖಂಡದ ಪ್ರಮುಖ ಪ್ರಾಕೃತಿಕ ವಿಭಾಗಗಳೆಂದರೆ:

1. ಆ್ಯಂಡೀಸ್ ಪರ್ವತಗಳು
2. ಪೂರ್ವದ ಎತ್ತರ ಪ್ರದೇಶಗಳು
3. ಕೇಂದ್ರದ ತಗ್ಗು ಪ್ರದೇಶಗಳು
4. ಪಶ್ಚಿಮದ ಕರಾವಳಿ ಮೈದಾನಗಳು






ದಕ್ಷಿಣ ಅಮೆರಿಕ (ಪ್ರಾಕೃತಿಕ ವಿಭಾಗಗಳು)

## 1. ಆ್ಯಂಡೀಸ್ ಪರ್ವತಗಳು

ಆ್ಯಂಡೀಸ್ ಪರ್ವತಗಳು ಪೆಸಿಫಿಕ್ ಸಾಗರದ ಕರಾವಳಿ ತೀರದುದ್ದಕ್ಕೂ ಸುಮಾರು 6,440 ಕಿ.ಮೀ.ಗಳಷ್ಟು ದೂರ ಹಬ್ಬಿರುವ ಪ್ರಪಂಚದ ಅತ್ಯಂತ ಉದ್ದವಾದ ಪರ್ವತ ಸರಣಿಯಾಗಿದೆ. ಇವು ಪೆಸಿಫಿಕ್ ಸಾಗರದಂಚಿನ ಅಗ್ನಿಯುಂಗುರ ಪ್ರದೇಶದಲ್ಲಿರುವುದರಿಂದ ಈ ಭಾಗದಲ್ಲಿ ಹಲವು ಭೂಕಂಪನಗಳು ಮತ್ತು ಜ್ವಾಲಾಮುಖಿಗಳಿರುವುದನ್ನು ಗುರುತಿಸಬಹುದು. ಮೌಂಟ್ ಅಕನ್‌ಕಾಗುವ (6,960 ಮೀ.) ಅರ್ಜೆಂಟೈನಾ–ಚಿಲಿ ಗಡಿಭಾಗದಲ್ಲಿದ್ದು ಅದು ಈ ಸರಣಿಯ ಅತಿ ಎತ್ತರದ ಶಿಖರವಾಗಿದೆ. ಇಕ್ವೆಡಾರ್‌ನಲ್ಲಿನ ಕೊಟೊಪಾಕ್ಸಿ (5896 ಮೀ.) ಮತ್ತು ಚಿಂಬೋರಾಸೊ (6272 ಮೀ.) ಇತರ ಪರ್ವತಗಳಾಗಿವೆ. ಆ್ಯಂಡೀಸ್ ಪರ್ವತ ಪ್ರದೇಶದಲ್ಲಿ ತಾಮ್ರ ಮತ್ತು ತವರಗಳಂತಹ ಖನಿಜಗಳು ಸಮೃದ್ಧವಾಗಿದೆ.



ಆ್ಯಂಡೀಸ್ ಪರ್ವತಗಳು

## 2. ಪೂರ್ವದ ಎತ್ತರದ ಪ್ರದೇಶಗಳು

ಈ ಪ್ರದೇಶವು ಎರಡು ವಿಭಿನ್ನ ಉನ್ನತ ಪ್ರದೇಶಗಳನ್ನು ಒಳಗೊಂಡಿದೆ. (i) ಉತ್ತರದಲ್ಲಿ ಗಯಾನ ಉನ್ನತ ಪ್ರದೇಶಗಳು ಮತ್ತು (ii) ದಕ್ಷಿಣದಲ್ಲಿ ಬ್ರೆಜಿಲ್ ಉನ್ನತ ಪ್ರದೇಶಗಳು.ಇವುಗಳು ಭಾರತದ ದಕ್ಷಿಣ ಪ್ರಸ್ಥಭೂಮಿಯಂತೆ ಹಳೆಯ ಶಿಲೆಗಳಿಂದ ರಚಿಸಲ್ಪಟ್ಟಿವೆ. ಓರಿನೊಕೊ ನದಿಯ ಉಪನದಿಯಾದ ಚೂರನ್ ನದಿಯು ವಿಶ್ವದ ಅತ್ಯಂತ ಎತ್ತರವಾದ ಏಂಜಲ್ ಜಲಪಾತವನ್ನು (974 ಮೀ.) ಗಯಾನ ಪ್ರದೇಶದಲ್ಲಿ ನಿರ್ಮಿಸಿದೆ.



ಏಂಜಲ್ ಜಲಪಾತ

## 3. ಕೇಂದ್ರದ ತಗ್ಗು ಪ್ರದೇಶಗಳು

ಆ್ಯಂಡೀಸ್ ಪರ್ವತಗಳು ಮತ್ತು ಪೂರ್ವದ ಉನ್ನತ ಭೂಭಾಗಗಳ ಮಧ್ಯೆ ಕಂಡುಬರುತ್ತವೆ. ಇವು ವಿಶಾಲವಾದ ನದಿ ಜಲಾನಯನ ಪ್ರದೇಶಗಳಿಂದ ಕೂಡಿವೆ. ಅವುಗಳೆಂದರೆ: ಅಮೆಜಾನ್, ಓರಿನೊಕೊ ಮತ್ತು ಲಾಪ್ಲಾಟಾ ನದಿಬಯಲುಗಳಾಗಿವೆ. ಅವುಗಳಲ್ಲಿ ಅಮೆಜಾನ್ ನದಿ ಜಲಾನಯನ ಪ್ರದೇಶವು ಅತಿ ದೊಡ್ಡದಾಗಿದ್ದು ಪ್ರಖ್ಯಾತವಾಗಿದೆ. ದಕ್ಷಿಣ ಅಮೆರಿಕಾದ ಉತ್ತರ ಭಾಗದಲ್ಲಿ ಓರಿನೋಕೋ ನದಿಯು ಮೈದಾನವನ್ನು ನಿರ್ಮಿಸಿದ್ದು ಅದು ಗಯಾನ ಉನ್ನತ ಪ್ರದೇಶ ಮತ್ತು ಅಮೇಜಾನ್ ಬಯಲುಗಳಿಂದ ಪ್ರತ್ಯೇಕವಾಗಿದೆ. ಆ್ಯಂಡೀಸ್ ಪರ್ವತಗಳ ಪೂರ್ವಭಾಗದಲ್ಲಿ ಗ್ರ್ಯಾನ್‌ಚಾಕೊ (ಬೇಟೆಯ ಅಥವಾ ಶಿಖಾರಿನಾಡು) ವಿಶಾಲವಾದ ಮೆಕ್ಕಲು ಮಣ್ಣಿನ ಪ್ರದೇಶವಿದೆ. ಇದು ಪ್ರಸಿದ್ಧ ಜಾನುವಾರು ಗೋಮಾಳವಾಗಿದೆ.

## 4. ಪಶ್ಚಿಮ ಕರಾವಳಿ ಮೈದಾನಗಳು

ಇವುಗಳು ಕಿರಿದಾದ ಮೈದಾನಗಳಾಗಿದ್ದು ಪೆಸಿಫಿಕ್ ಮಹಾಸಾಗರ ಮತ್ತು ಆ್ಯಂಡೀಸ್ ಪರ್ವತ ಶ್ರೇಣಿಗಳ ಮಧ್ಯೆ ಕಂಡುಬರುತ್ತವೆ. ಪಶ್ಚಿಮ ಕರಾವಳಿ ತೀರವು ಬಹುತೇಕ ಒಡೆದ ತೀರದಂತಿದೆ. ಏಕೆಂದರೆ ಕರಾವಳಿಯಿಂದ ಆ್ಯಂಡೀಸ್ ಪರ್ವತವು ಕಡಿದಾಗಿ ಮೇಲಕ್ಕೆತ್ತಲ್ಪಟ್ಟಿದೆ. ಕೇಂದ್ರೀಯ ಚಿಲಿ ಮತ್ತು ಕೊಲಂಬಿಯಗಳ ಪಶ್ಚಿಮ ಕರಾವಳಿ ತೀರದುದ್ದಕ್ಕೂ ಕಿರಿದಾದ ಕರಾವಳಿ ಮೈದಾನಗಳನ್ನು ಕಾಣಬಹುದು. ಈ ಕರಾವಳಿಯು ಒಡೆದ ತೀರವಾಗಿದೆ. ಹಲವಾರು ದೊಡ್ಡನಗರಗಳು ಕರಾವಳಿ ಮೈದಾನದಲ್ಲಿ ನೆಲೆಗೊಂಡಿವೆ. ಕರಾವಳಿಯ ದಕ್ಷಿಣ ಭಾಗದಲ್ಲಿ ಹಾಗೂ ಇತರ ಕಡೆಗಳಲ್ಲಿ ಹಲವು ದ್ವೀಪಗಳಿವೆ.


## 3. ನದಿಗಳು ಮತ್ತು ಸರೋವರಗಳು

ಅಮೆಜಾನ್, ಪರಾನ, ಪರಗ್ವೆ, ಉರುಗ್ವೆ ಮತ್ತು ಓರಿನೊಕೊಗಳು ದಕ್ಷಿಣ ಅಮೆರಿಕದ ಪ್ರಮುಖ ನದಿವ್ಯೂಹಗಳಾಗಿವೆ. ಅಮೆಜಾನ್ (6,450 ಕಿ.ಮೀ.) ನದಿಯು ಆ್ಯಂಡೀಸ್ ಪರ್ವತದಲ್ಲಿ ಹುಟ್ಟುವ ದಕ್ಷಿಣ ಅಮೆರಿಕದ ಅತಿ ಉದ್ದವಾದ ನದಿಯಾಗಿರುವುದಲ್ಲದೆ ಪ್ರಪಂಚದ ಅತಿ ದೊಡ್ಡ ನದಿಯಾಗಿದೆ. ಈ ನದಿಯ ಪಾತ್ರದುದ್ದಕ್ಕೂ ಬಹುದೂರ ನೌಕಾಯಾನಕ್ಕೆ ಅನುಕೂಲವಾಗಿದೆ. ಓರಿನೊಕೊ ಮತ್ತೊಂದು ಪ್ರಮುಖವಾದ ನದಿವ್ಯೂಹವಾಗಿದೆ. ಪರಾನ, ಪರಗ್ವೆ ಮತ್ತು ಉರುಗ್ವೆಗಳ ಒಗ್ಗೂಡಿದ ನದಿವ್ಯೂಹವನ್ನು ಲಾಪ್ಲಾಟಾವೆಂದು ಕರೆಯಲಾಗಿದೆ.

ಟಿಟಿಕಾಕ ಸರೋವರವು (ಬೊಲಿವಿಯ) ಪ್ರಪಂಚದಲ್ಲಿಯೇ ಎತ್ತರದಲ್ಲಿರುವ ಸರೋವರವಾಗಿದೆ ಹಾಗು ದಕ್ಷಿಣ ಅಮೆರಿಕದ ನೌಕಾಯಾನಕ್ಕೆ ಸಹಾಯಕವಾಗಿರುವ ಸರೋವರವಾಗಿದೆ. ಜುನಿನ್ ಸರೋವರ, ಪೆರುವಿನ ಪರೋಕೋಚ್ ಸರೋವರ, ಬೋಲಿವಿಯಾದ ಪೂಪಾ ಸರೋವರಗಳು ದಕ್ಷಿಣ ಅಮೆರಿಕಾದ ಇತರ ಪ್ರಮುಖ ಸರೋವರಗಳಾಗಿವೆ.



ಟಿಟಿಕಾಕ ಸರೋವರ






**ದಕ್ಷಿಣ ಅಮೆರಿಕ ನದಿಗಳು**

| | |
|---|---|
| ➢ ಅಮೆಜಾನ್ ನದಿ ವೈಶಿಷ್ಟ್ಯಗಳು | – ಮರಾಜೊ ನದಿ ದ್ವೀಪ<br>– ಅನಕೊಂಡ ಮತ್ತು ಪಿರಾನ್ಹ ಜೀವಿಗಳ ಆವಾಸ<br>– ಅತಿದೊಡ್ಡ ನದಿ, 1,000ಕ್ಕಿಂತ ಅಧಿಕವಾದ ಉಪನದಿಗಳು<br>– ಪ್ರಪಂಚದ ಸುಮಾರು 11.5%ದಷ್ಟು ಭೂಭಾಗ<br>– ಹುಂಗ-ನೆಲದೊಳಗಿನ ನದಿ |

## 3. ವಾಯುಗುಣ

ದಕ್ಷಿಣ ಅಮೆರಿಕವು ವೈವಿಧ್ಯಮಯ ವಾಯುಗುಣವನ್ನು ಹೊಂದಿದೆ. ಈ ಖಂಡದ ವಾಯುಗುಣದಲ್ಲಿನ ವ್ಯತ್ಯಾಸಕ್ಕೆ ಅಲ್ಲಿನ ಅಕ್ಷಾಂಶ ವಿಸ್ತರಣೆ, ಎತ್ತರ. ಪೆಸಿಫಿಕ್ ಹಾಗು ಅಟ್ಲಾಂಟಿಕ್ ಮಹಾಸಾಗರಗಳ ಸಾಮೀಪ್ಯ ಕಾರಣವಾಗಿದೆ.

ಈ ಖಂಡದ ಉತ್ತರ ಭಾಗದಲ್ಲಿ ಭೂಮಧ್ಯರೇಖೆಯು ಹಾದುಹೋದರೆ, ಇದರ ದಕ್ಷಿಣ ಭಾಗದಲ್ಲಿ ಮಕರ ಸಂಕ್ರಾಂತಿ ವೃತ್ತವು ಹಾದು ಹೋಗಿದೆ. ಈ ಎರಡು ಅಕ್ಷಾಂಶಗಳ ಮಧ್ಯೆ ಕಂಡುಬರುವ ಭೂಭಾಗವು ಉಷ್ಣವಲಯದಲ್ಲಿದೆ. ಉತ್ತರದಲ್ಲಿ ಅಗಲವಾದ ಭಾಗವು ಉಷ್ಣವಲಯ ವಾಯುಗುಣದ ಪ್ರಭಾವಕ್ಕೆ ಒಳಪಟ್ಟಿದೆ. ಆದ್ದರಿಂದ ಇಲ್ಲಿನ ವಾಯುಗುಣವು ಶಾಖ ಮತ್ತು ತೇವಯುತವಾಗಿದೆ. ಸಮಭಾಜಕವೃತ್ತವಿರುವುದರಿಂದ ಅಮೆಜಾನ್ ನದಿ ಬಯಲು ಉಷ್ಣ ಮತ್ತು ತೇವಯುತ ಸಮಭಾಜಕವೃತ್ತದ ವಾಯುಗುಣವನ್ನು ಹೊಂದಿದೆ. ಈ ಪ್ರದೇಶವು ಬಹುತೇಕವಾಗಿ ಪ್ರತಿನಿತ್ಯವೂ ಪರಿಸರಣ ಮಳೆಯ ಅನುಭವವನ್ನು ಹೊಂದಿದೆ. ಈ ಪ್ರದೇಶದಲ್ಲಿ ಬೀಳುವ ಭಾರಿ ಮಳೆಯು ದಟ್ಟವಾದ ಅರಣ್ಯದ ಬೆಳವಣಿಗೆಗೆ ಕಾರಣವಾಗಿದೆ. ಅಮೆಜಾನ್ ಮುಖಜಭೂಮಿಯು ದಟ್ಟ ಅರಣ್ಯವನ್ನು ಹೊಂದಿದ್ದು, ಸಸ್ಯವರ್ಗ ಮತ್ತು ಪ್ರಾಣಿವರ್ಗಗಳಿಗೆ ನೆಲೆಯನ್ನು ಕಲ್ಪಿಸಿಕೊಟ್ಟಿದೆ. ಸರೀಸೃಪಗಳು, ಪಕ್ಷಿಗಳು ಮತ್ತು ಮಂಗಗಳು ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

> ಒಂದು ಭೂಭಾಗದ ಜಲರಾಶಿಯು ಬೆಳಗಿನಿಂದಲೇ ಸೂರ್ಯನ ಶಾಖದಿಂದ ಆವಿಯಾಗಿ ಮೇಲೇರಿ, ಮೋಡವಾಗಿ ಅಂದೇ ಅದೇ ಪ್ರದೇಶದಲ್ಲಿ ಮಳೆಯಾಗುವುದಕ್ಕೆ 'ಪರಿಸರಣ ಮಳೆ' ಎನ್ನುತ್ತಾರೆ. ಸಮಭಾಜಕ ವೃತ್ತ ಪ್ರದೇಶದಲ್ಲಿ ಬೀಳುವ ಪರಿಸರಣ ಮಳೆಯನ್ನು ಅಪರಾಹ್ನದ ಮಳೆ, ಚಹ ವಿರಾಮದ ಮಳೆ, ಮತ್ತು 4 ಗಂಟೆಯ ಮಳೆ ಎಂದು ಕರೆಯಲಾಗಿದೆ.




ಈ ಖಂಡದ ಪಶ್ಚಿಮ ಅಂಚಿನುದ್ದಕ್ಕೂ ಆ್ಯಂಡೀಸ್ ಪರ್ವತಗಳು ಹಬ್ಬಿವೆ. ಕರಾವಳಿ ಅಂಚಿನಲ್ಲಿ ಬೀಸುವ ಮಾರುತಗಳು ವಾಯುಮುಖ ಭಾಗದ ಕಡೆಗೆ ಮಳೆಯನ್ನು ತರುತ್ತವೆ. ಆದರೆ, ಆ್ಯಂಡೀಸ್ ಪರ್ವತದ ಪೂರ್ವ ಭಾಗಗಳು ಕಡಿಮೆ ಮಳೆಯನ್ನು ಪಡೆಯುತ್ತವೆ. ಇದು ಮಳೆನೆರಳಿನ ಪ್ರದೇಶವಾಗಿದ್ದು, ಇಲ್ಲಿ ದಕ್ಷಿಣ ಅಮೆರಿಕದ ಸಮಶೀತೋಷ್ಣವಲಯದ ಮರುಭೂಮಿಗಳಿವೆ. ಖಂಡದ ವಾಯುಗುಣದ ಮೇಲೆ ಸಾಗರ ಪ್ರವಾಹಗಳೂ ಸಹ ಪ್ರಭಾವ ಬೀರುತ್ತವೆ. ಬ್ರೆಜಿಲಿಯನ್ ಉಷ್ಣ ಪ್ರವಾಹವು ಪೂರ್ವ ಕರಾವಳಿಗುಂಟ ಚಲಿಸಿ ಮಳೆಯನ್ನುಂಟು ಮಾಡುವುದು. ಅದೇ ರೀತಿ ಪಶ್ಚಿಮ ಕರಾವಳಿಯಲ್ಲಿ ಪೆರುವಿಯನ್ (ಹಂಬೋಲ್ಟ್) ಶೀತ ಪ್ರವಾಹವು ಅಲ್ಲಿನ ಉಷ್ಣತೆಯನ್ನು ಕಡಿಮೆಗೊಳಿಸುವುದು ಮತ್ತು ಒಣದಾಗಿಸುವುದು. ಆದ್ದರಿಂದ ಉಷ್ಣ ಮರಭೂಮಿ ಬಗೆಯ ವಾಯುಗುಣವು ಉತ್ತರ ಚಿಲಿ ಮತ್ತು ದಕ್ಷಿಣ ಪೆರುವಿನ ಕೆಲವು ಭಾಗಗಳಲ್ಲಿ ಕಂಡುಬರುವುದು. ಆ್ಯಂಡೀಸ್‌ನ ಪಶ್ಚಿಮ ಭಾಗ ಮತ್ತು ಚಿಲಿಯ ಬಹುತೇಕ ದಕ್ಷಿಣ ಪ್ರದೇಶವು ವರ್ಷವಿಡೀ ಮಳೆಯನ್ನು ಪಡೆಯುವುದು. ಇದು ಚಳಿಗಾಲದಲ್ಲಿ ಹೆಚ್ಚಿಗಿರುತ್ತದೆ. ಈ ಪ್ರದೇಶವು ಸಾಗರೀಕ ವಾಯುಗುಣವನ್ನು ಹೊಂದಿದೆ. ಚಿಲಿ ತೀರದ ಉತ್ತರ ಮತ್ತು ಕೇಂದ್ರ ಪ್ರದೇಶವು ಉಷ್ಣ ಬೇಸಿಗೆ ಮತ್ತು ಸೌಮ್ಯ ಚಳಿಗಾಲಗಳು ಜೊತೆಗೆ ಚಳಿಗಾಲದಲ್ಲಿ ಮಳೆಯನ್ನು ಹೊಂದಿರುವುದು. ಈ ಪ್ರದೇಶವು ಮೆಡಿಟರೇನಿಯನ್ ಮಾದರಿಯ ವಾಯುಗುಣವನ್ನು ಹೊಂದಿದೆ. ಅಟಕಾಮ ಮರುಭೂಮಿಯು (ಚಿಲಿ) ಭೂಮಿಯ ಮೇಲಿನ ಅತಿ ಶುಷ್ಕ ಪ್ರದೇಶವಾಗಿದೆ. ಕಳೆದ 200 ವರ್ಷಗಳಿಂದಲೂ ಇಲ್ಲಿ ಮಳೆ ಬಿದ್ದಿಲ್ಲ.



ಅಟಕಾಮ ಮರುಭೂಮಿ

# 4. ಸ್ವಾಭಾವಿಕ ಸಸ್ಯವರ್ಗ




ನಿತ್ಯ ಹರಿದ್ವರ್ಣದ ಕಾಡು



'ಸೆಲ್ವಾಸ್'

ಅಮೆಜಾನ್ ಬಯಲಿನ ಸಮಭಾಜಕವೃತ್ತ ಪ್ರದೇಶವು ವಿಶ್ವದ ಅತಿದೊಡ್ಡ ಮಳೆಅರಣ್ಯವಾಗಿದ್ದು, ಸ್ಥಳೀಯವಾಗಿ **ಸೆಲ್ವಾಸ್** ಎಂದು ಕರೆಯಲಾಗಿದೆ. ಗಟ್ಟಿ ಮರದ ನಿತ್ಯ ಹರಿದ್ವರ್ಣ ಕಾಡುಗಳು ಸಾಂದ್ರವಾದ ಚಪ್ಪರದಾಕಾರದ ಮರಗಳಿಂದ ಕೂಡಿರುವುದನ್ನು ಇಲ್ಲಿ ಕಾಣಬಹುದು. ಮಹಾಗನಿ ಮತ್ತು ಎಬೋನಿಗಳು ಈ ಪ್ರದೇಶದಲ್ಲಿ ಕಂಡುಬರುವ ಬೆಲೆಬಾಳುವ ಮರಗಳಾಗಿವೆ. ಇಲ್ಲಿನ ರಬ್ಬರ್ ಮರಗಳನ್ನು 'ಲ್ಯಾಟೆಕ್ಸ್' (ರಬ್ಬರ್ ಹಾಲು) ತೆಗೆಯಲು ಬಳಸಲಾಗುತ್ತದೆ. ಸಮಭಾಜಕವೃತ್ತ

ಅರಣ್ಯಗಳ ಎರಡೂ ಪಾರ್ಶ್ವಭಾಗಗಳಲ್ಲಿ ಹುಲ್ಲುಗಾವಲುಗಳಿವೆ. ಇವುಗಳನ್ನು ಓರಿನೊಕೊ ನದಿ ಬಯಲಿನಲ್ಲಿ ಲಾನೋಸ್ ಎಂದು ಕರೆದರೆ, ಬ್ರೆಜಿಲಿನ ಉನ್ನತ ಭಾಗಗಳಲ್ಲಿ (ವೆನಿಜೂಲ) **ಕಾಂಪಾಸ್** ಎಂದು ಕರೆಯಲಾಗುತ್ತದೆ. ಬ್ರೆಜಿಲಿನ ಆಗ್ನೇಯ ಕರಾವಳಿಯು ಉಷ್ಣವಲಯದ ಎಲೆಯುದುರುವ ಕಾಡುಗಳಿಂದ ಕೂಡಿದೆ.





ದಕ್ಷಿಣ ಅಮೆರಿಕ ಸ್ವಾಭಾವಿಕ ಸಸ್ಯವರ್ಗ

**ದಕ್ಷಿಣ ಅಮೆರಿಕ 'ಹುಲ್ಲುಗಾವಲುಗಳ ನಾಡು'**

- ವೆನಿಜೂಲದ ಲಾನೋಸ್ (Llanos)
- ಬ್ರೆಜಿಲ್‌ನ ಕಾಂಪಾಸ್ (Campos)
- ಅರ್ಜೆಂಟೈನಾದ ಪಂಪಾಸ್ (Pampos)


ಸಮಶೀತೋಷ್ಣವಲಯದ ಹುಲ್ಲುಗಾವಲು

ಗ್ರಾನ್ ಚಾಕೋ ಪ್ರದೇಶದ ದಕ್ಷಿಣ ಭಾಗವು (ಅರ್ಜೆಂಟೈನಾ ಮತ್ತು ಉರುಗ್ವೆ) ಅತಿ ವಿಸ್ತಾರವಾದ ಸಮಶೀತೋಷ್ಣವಲಯದ ಹುಲ್ಲುಗಾವಲುಗಳಿಂದ ಕೂಡಿದ್ದು, ಅದನ್ನು **ಪಂಪಾಸ್** ಎಂದು ಕರೆಯಲಾಗಿದೆ. ಆ್ಯಂಡೀಸ್ ಪರ್ವತದ ಪೂರ್ವದ ಕಡೆಗೆ ಪಟಗೋನಿಯು ಪ್ರಸ್ಥಭೂಮಿಯಿದ್ದು ಕುರುಚಲು ಸಸ್ಯವರ್ಗಗಳಿಂದ ಕೂಡಿದ ಸಮಶೀತೋಷ್ಣವಲಯ ಮರುಭೂಮಿಯನ್ನು ಹೊಂದಿದೆ. ಕೇಂದ್ರೀಯ ಪ್ರದೇಶವು ಮಿಶ್ರ ವಿಧದ ಅರಣ್ಯಗಳಿಂದ ಕೂಡಿದೆ. ಬಳಿದಾದ ಇಳುಕಲಿನ ಮೇಲೆ ಸಮಶೀತೋಷ್ಣವಲಯದ ಎಲೆಗಳುದುರಿಸುವ ಅರಣ್ಯಗಳು ಕಂಡುಬಂದರೆ, ಕಡಿದಾದ ಇಳುಕಲಿನ ಮೇಲೆ ಕೋನಿಫೆರಸ್ ಅರಣ್ಯಗಳು ಕಂಡುಬರುತ್ತವೆ. ನಿತ್ಯಹರಿದ್ವರ್ಣದ ಮರಗಳನ್ನು ಮತ್ತು ಕುರುಚಲು ಸಸ್ಯಗಳನ್ನು ಒಳಗೊಂಡ ಕೇಂದ್ರ ಚಿಲಿಯು ಮೆಡಿಟರೇನಿಯನ್ ಮಾದರಿಯ ವಾಯುಗುಣವನ್ನು ಹೊಂದಿದೆ.

## 5. ವನ್ಯ ಜೀವಿಗಳು

ದಕ್ಷಿಣ ಅಮೆರಿಕವು ವೈವಿಧ್ಯಮಯವಾದ ವನ್ಯಪ್ರಾಣಿಗಳು, ಪಕ್ಷಿಗಳು ಮತ್ತು ಸರೀಸೃಪಗಳನ್ನು ಹೊಂದಿದೆ. ದಕ್ಷಿಣ ಅಮೆರಿಕ ಖಂಡವನ್ನು 'ಪಕ್ಷಿಗಳ ಖಂಡ' ಎಂದು ಕರೆಯಲಾಗಿದೆ. ಕಾಂಡರ್ ಪ್ರಪಂಚದ ಅತಿದೊಡ್ಡ ಪಕ್ಷಿಯಾಗಿದೆ. ಆಫ್ರಿಕದಲ್ಲಿನ ಆಸ್ಟ್ರಿಚ್‌ನಂತೆ ರ್‍ಹಿಯಾ ಹಾರಲಾರದ ಒಂದು ದೊಡ್ಡ ಪಕ್ಷಿಯಾಗಿದೆ. ಹಾರುವ ಮಂಗ, ಅಳಿಲು ಮತ್ತು ಮಂಗಗಳು ಅಮೆಜಾನ್ ಅರಣ್ಯಗಳ ಮರಗಳಲ್ಲಿ ವಾಸಿಸುತ್ತವೆ. ಅನಕೊಂಡ ಹೆಬ್ಬಾವು ಇಲ್ಲಿನ ಮಳೆ ಅರಣ್ಯಗಳಲ್ಲಿ ಜೀವಿಸುತ್ತಿರುವ ಅತಿ ದೊಡ್ಡ ಸರೀಸೃಪವಾಗಿದೆ. ಪ್ಯೂಮ ಮತ್ತು ಜಾಗ್ವಾರ್‌ಗಳು ದೊಡ್ಡ ಪ್ರಾಣಿಗಳಾಗಿದ್ದು ಕೋತಿ ಮತ್ತು ಇತರ ಸಣ್ಣ ಪ್ರಾಣಿಗಳನ್ನು ಆಹಾರವನ್ನಾಗಿ ಉಪಯೋಗಿಸುತ್ತಿವೆ. ಲಾಮ ಮತ್ತು ಆಲ್‌ಪಾಕಗಳು ಒಂಟೆಯಂತಹ ಪ್ರಾಣಿಗಳಾಗಿದ್ದು, ಅವು ಉದ್ದವಾದ ಕುತ್ತಿಗೆಯನ್ನು ಹೊಂದಿವೆ. ಇವುಗಳನ್ನು ಸ್ಥಳೀಯ ನಿವಾಸಿಗಳು ತಮ್ಮ ದೈನಂದಿನ ಕೆಲಸಗಳಲ್ಲಿ ಬಳಸಿಕೊಳ್ಳುತ್ತಾರೆ. ಗಾಲ್ಪಗೋಸ್ ದ್ವೀಪಗಳು

ಬೃಹದಾಕಾರದ ಆಮೆಗಳಿಗೆ ಪ್ರಖ್ಯಾತಿಯಾಗಿವೆ. ಅಲ್ಲಿನ ನೊಣಗಳು ಮತ್ತು ಕೀಟಗಳು ನಿದ್ರಾ ಹೀನತೆಗೆ ಕಾರಣಗಳಾಗಿವೆ. ಅಮೆಜಾನ್ ನದಿಯು ವೈವಿಧ್ಯಮಯ ಮೀನುಗಳನ್ನು ಹೊಂದಿದೆ.ಅವುಗಳೆಂದರೆ ಸ್ಟಿಂಗ್ ರೇ, ಎಲೆಕ್ಟ್ರಿಕ್ ಫಿಷ್ ಮತ್ತು ಪಿರಾನ್ಹ [ವಿಶ್ವದಲ್ಲೇ ಅತಿ ಅಪಾಯಕಾರಿ ಮೀನು]ಗಳಾಗಿವೆ. ನದಿಗಳು ಮೊಸಳೆಗಳನ್ನು ಸಹ ಹೊಂದಿವೆ.



ಲಾಮ




ಜಾಗ್ವಾರ್



ಕಾಂಡರ್



ಅನಕೊಂಡ



ಆಲ್‌ಪಾಕ



ಪುಮ



ಆಮೆ



ಪಿರಾನ್ಹ ಮೀನು



ರ್ಹಿಯಾ



## 6. ಕೃಷಿ ಮತ್ತು ಪ್ರಾಣಿಸಾಕಣೆ

ದಕ್ಷಿಣ ಅಮೆರಿಕದಲ್ಲಿನ ಕೃಷಿ ಭೂಮಿ ಕಡಿಮೆಯಿದೆ. ಇದು ಕೇವಲ ಶೇ.10ರಷ್ಟು ಸಾಗುವಳಿ ಭೂಮಿಯಲ್ಲಿ ವ್ಯವಸಾಯದ ಬೆಳೆ ಬೆಳೆಯಲಾಗುತ್ತಿದೆ. ಪ್ರಮುಖವಾದ ಕೃಷಿ ಪ್ರದೇಶಗಳೆಂದರೆ ಅರ್ಜೆಂಟೈನಾದ ಪಂಪಾಸ್ ಮತ್ತು ಉರುಗ್ವೆ, ಬ್ರೆಜಿಲ್‌ನ ಉನ್ನತ ಪ್ರದೇಶಗಳ ಭಾಗಗಳು ಹಾಗು ಮಧ್ಯ ಚಿಲಿಯ ಪೂರ್ವ ಕರಾವಳಿಗಳಾಗಿವೆ. ದಕ್ಷಿಣ ಅಮೆರಿಕದ ಅತಿ ಪ್ರಮುಖವಾದ ಬೆಳೆಗಳೆಂದರೆ ಮೆಕ್ಕೆ ಜೋಳ, ಗೋಧಿ, ಭತ್ತ, ಕಾಫಿ, ಹತ್ತಿ, ಕಬ್ಬು ಇತ್ಯಾದಿಗಳು.

ಮೆಕ್ಕೆ ಜೋಳವು ದಕ್ಷಿಣ ಅಮೆರಿಕದ ದೇಶೀಯ ಬೆಳೆಯಾಗಿದೆ ಹಾಗೂ ಇದು ಬೆಚ್ಚನೆಯ ಉಷ್ಣವಲಯ ಪ್ರದೇಶದಲ್ಲಿ ಅತಿ ಪ್ರಮುಖವಾದ ಆಹಾರ ಬೆಳೆಯಾಗಿದೆ. ಗೋಧಿಯನ್ನು ಅರ್ಜೆಂಟೈನ ಮತ್ತು ಚಿಲಿ ದೇಶಗಳ ತಂಪಾದ ಸಮಶೀತೋಷ್ಣವಲಯ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಗೋಧಿಯನ್ನು ಅರ್ಜೆಂಟೈನದಿಂದಲೂ ಸಹ ರಫ್ತು ಮಾಡಲಾಗುತ್ತದೆ. ಆಲೂಗಡ್ಡೆಯನ್ನು ಆ್ಯಂಡೀಸ್ ಪ್ರದೇಶದಲ್ಲಿ ವಿಶಾಲ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಭತ್ತವನ್ನು ಬ್ರೆಜಿಲ್‌ನ ಕರಾವಳಿ ತೀರದುದ್ದಕ್ಕೂ ಬೆಳೆಯಲಾಗುತ್ತಿದೆ.

ಬ್ರೆಜಿಲ್‌ನ್ನು 'ಪ್ರಪಂಚದ ಕಾಫಿಯ ಪಾತ್ರೆ' ಎಂದು ಕರೆಯಲಾಗಿದೆ. ಆಫ್ರಿಕದಲ್ಲಿರುವ ಇಥಿಯೋಪಿಯಾ ದೇಶದ 'ಕಾಫಿ' ಪ್ರದೇಶವು ಕಾಫಿ ಬೆಳೆಯ ಮೂಲವಾಗಿದ್ದು 'ಕಾಫಾ' ಅಥವಾ ಕಾಫೀ ಎನ್ನುತ್ತಾರೆ. ಬ್ರೆಜಿಲ್‌ನ ಫೆಜೆಂಡಾದಲ್ಲಿ ಸಾವಿರಾರು ಕಾಫಿ ತೋಟಗಳಿವೆ. ರಿಯೋಡಿ ಜನೈರೊವನ್ನು 'ವಿಶ್ವದ ಕಾಫಿ ಬಂದರು' ಎಂದು ಕರೆಯಲಾಗಿದೆ.



ಕಾಫಿ ತೋಟ

ಆಹಾರೇತರ ಬೆಳೆಗಳಾದ ಕಾಫಿ ಹಾಗು ಕೋಕೊಗಳನ್ನು ಉತ್ಪಾದಿಸುವುದರಲ್ಲಿ ದಕ್ಷಿಣ ಅಮೆರಿಕವು ಒಂದು ಪ್ರಮುಖವಾದ ರಾಷ್ಟ್ರವಾಗಿದೆ. ಬ್ರೆಜಿಲ್ ವಿಶ್ವದಲ್ಲಿ ಅತಿ ಹೆಚ್ಚು ಕಾಫಿಯನ್ನು ಉತ್ಪಾದಿಸುತ್ತದೆ. ಕೊಲಂಬಿಯ ಮತ್ತು ಈಕ್ವೆಡಾರ್‌ಗಳು ಸಹ ಪ್ರಮುಖವಾಗಿ ಕಾಫಿಯನ್ನು ಉತ್ಪಾದಿಸುತ್ತವೆ. ಬ್ರೆಜಿಲ್‌ನ ಕರಾವಳಿ ಪ್ರದೇಶದಲ್ಲಿ ಅಪಾರ ಪ್ರಮಾಣದ ಕೋಕೊವನ್ನು ಉತ್ಪಾದಿಸಲಾಗುತ್ತಿದೆ.



ಕಬ್ಬು

ಹತ್ತಿಯನ್ನು ಆ್ಯಂಡೀಸ್ ಪ್ರದೇಶದ ಶುಷ್ಕ ಇಳಿಜಾರುಗಳಲ್ಲಿ ಬೆಳೆಯಲಾಗುತ್ತಿದೆ ಹಾಗೂ ಕಚ್ಚಾ ಹತ್ತಿಯನ್ನು ಇತರ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿದೆ. ದಕ್ಷಿಣ ಅಮೆರಿಕವು ಕಬ್ಬು ಉತ್ಪಾದನೆಯ ಒಂದು ಪ್ರಮುಖ ರಾಷ್ಟ್ರವಾಗಿದ್ದು. ಅದನ್ನು ಉಷ್ಣವಲಯದ ತಗ್ಗುಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಬ್ರೆಜಿಲ್ ಕಬ್ಬನ್ನು ಉತ್ಪಾದಿಸುತ್ತಿರುವ ಪ್ರಮುಖ ರಾಷ್ಟ್ರವಾಗಿದ್ದು, ಇದು ಜಗತ್ತಿನ ಎರಡನೇಯ ಅಧಿಕ ಉತ್ಪಾದನಾ ರಾಷ್ಟ್ರವಾಗಿದೆ.

ಪಂಪಾಸ್ ಹುಲ್ಲುಗಾವಲುಗಳು ಪ್ರಾಣಿ ಸಾಕಣೆಗೆ ಸೂಕ್ತವಾಗಿವೆ. ಪ್ರಾಣಿ ಸಾಕಣೆಯು ಮುಖ್ಯವಾಗಿ ಕುದುರೆಗಳು, ಹಂದಿಗಳು, ಕುರಿ ಮತ್ತು ಹಸುಗಳನ್ನು ಒಳಗೊಂಡಿದೆ. ಒಂದು ಕಾಲದಲ್ಲಿ ಪ್ರಪಂಚದಲ್ಲಿ ದನದ ಮಾಂಸವನ್ನು ಅಧಿಕ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದ ದೇಶ ಅರ್ಜೆಂಟೈನವಾಗಿತ್ತು. ಮಾಂಸಕ್ಕಾಗಿ ಹಸು ಸಾಕಣೆ ಮಾಡಲು ಮೇವಿಗಾಗಿ ಪಂಪಾಸ್‌ಗಳು ಉತ್ತಮ ಹುಲ್ಲುಗಾವಲುಗಳಾಗಿವೆ. ಉತ್ತಮ ಹಾಗು ದಟ್ಟವಾದ ಹಸಿರು ಮೇವಿರುವ ಪ್ರದೇಶಗಳು ಡೈರಿ ಉತ್ಪನ್ನನೀಡುವ ಪ್ರಾಣಿಸಾಕಣೆಗಾಗಿ ಮೀಸಲಾಗಿದೆ. ಹಾಗೆಯೇ ಕಡಿಮೆ ಪ್ರಮಾಣದ ಮೇವಿರುವ ಪಟಗೋನಿಯದ ಮೈದಾನಗಳು ಮತ್ತು ಪರ್ವತಗಳು ಕುರಿ ಸಾಕಣೆಗೆ ಮೀಸಲಾಗಿವೆ. ಗಾಚೊ (Gauchos) ಎಂಬ ಗೋಪಾಲಕರು ಕುರಿಪಾಲನೆ ಮಾಡುವರು.


ಕುರಿ ಸಾಕಣೆ


ಹಸು ಸಾಕಣೆ



ಪೆಸಿಫಿಕ್ ಮಹಾಸಾಗರದ ಕರಾವಳಿಯಂಚಿನಲ್ಲಿ ಅತ್ಯುತ್ತಮವಾದ ಮೀನುಗಾರಿಕಾ ಪ್ರದೇಶಗಳು ನೆಲೆಗೊಂಡಿವೆ. ಪೆರು ಮತ್ತು ಚಿಲಿ ದೇಶಗಳ ಕರಾವಳಿ ತೀರಗಳು ಅತಿ ಮುಖ್ಯವಾದ ಮೀನುಗಾರಿಕಾ ಕೇಂದ್ರಗಳನ್ನು ಹೊಂದಿದೆ. ಪೆರು ದೇಶವು ಪ್ರಮುಖ ಮೀನುಗಾರಿಕಾ ರಾಷ್ಟ್ರಗಳಲ್ಲಿ ಒಂದಾಗಿದೆ. ಆದಾಗ್ಯೂ ಅದರ ಪ್ರಾಮುಖ್ಯತೆಯು ಕಡಿಮೆಯಾಗುತ್ತಿದೆ. ಏಕೆಂದರೆ ಅದು ಸಂಗ್ರಹಿಸುವ ಸಮುದ್ರ ಮೀನುಗಳಲ್ಲಿ ಅಧಿಕ ಪ್ರಮಾಣದಲ್ಲಿ ಸಣ್ಣ ಮೀನುಗಳಾಗಿರುತ್ತವೆ. ಅವುಗಳನ್ನು ರಾಸಾಯನಿಕ ಗೊಬ್ಬರಗಳ ತಯಾರಿಕೆಗೆ ಬಳಸಲಾಗುತ್ತದೆ. ಚಿಲಿ ದೇಶದ ಮೀನು ಉತ್ಪಾದನೆ ಬಹಳಷ್ಟು ಮಟ್ಟಿಗೆ ಕೆನಡಾದ ಉತ್ಪಾದನೆಗೆ ಸಮ. ಆದರೆ ಬಹುತೇಕ ಪ್ರಮಾಣದ ಇಲ್ಲಿನ ಮೀನುಗಳನ್ನು ಆಹಾರಕ್ಕಿಂತ ಹೆಚ್ಚಾಗಿ ಕೈಗಾರಿಕಾ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ. ಟಿಟಿಕಾಕ ಸರೋವರ ಮತ್ತು ಅಮೆಜಾನ್ ನದಿಗಳು ಸಿಹಿನೀರಿನ ಮೀನುಗಾರಿಕೆಗೆ ಪ್ರಾಮುಖ್ಯತೆ ಪಡೆದಿವೆ.








ಮೀನುಗಾರಿಕೆ



## 7. ಜನಸಂಖ್ಯೆ

ದಕ್ಷಿಣ ಅಮೆರಿಕದ ನಿವಾಸಿಗಳು ಮಿಶ್ರ ಜನಾಂಗೀಯ ಗುಂಪುಗಳಿಗೆ ಸೇರಿದವರಾಗಿದ್ದಾರೆ. ಯೂರೋಪಿಯನ್ನರು ಚಿನ್ನವನ್ನು ಅರಸಿ ಬಂದ ನಂತರ ಇಲ್ಲಿಯೇ ನೆಲೆಸಿ, ಇಲ್ಲಿನ ತೋಟಗಳಲ್ಲಿ ಕೆಲಸಮಾಡಲು ಆಫ್ರಿಕದಿಂದ ಗುಲಾಮರನ್ನು ಕರೆದು ತಂದರು. ಈ ಗುಂಪುಗಳ ನಡುವೆ ವಿವಾಹವೇರ್ಪಟ್ಟ ಪ್ರಯುಕ್ತ ಮಿಶ್ರ ಜನಾಂಗವು ನಿರ್ಮಾಣವಾಯಿತು. ದಕ್ಷಿಣ ಅಮೆರಿಕದಲ್ಲಿ ಮೂರು ಪ್ರಮುಖವಾದ ಜನಾಂಗಗಳಿವೆ.

ದಕ್ಷಿಣ ಅಮೆರಿಕವು ಪ್ರಪಂಚದ ಸರಾಸರಿ (47%) ನಗರೀಯ ಜನಸಂಖ್ಯೆಯ ಪ್ರಮಾಣಕ್ಕಿಂತ ಅತ್ಯಧಿಕ ಪ್ರಮಾಣವನ್ನು (80%) ಹೊಂದಿದೆ. ಅತ್ಯಧಿಕ ನಗರ ಜನಸಂಖ್ಯೆಯು ಉರುಗ್ವೆಯಲ್ಲಿದ್ದು (93%), ಕನಿಷ್ಠ ನಗರ ಜನಸಂಖ್ಯೆಯು ಗಯಾನದಲ್ಲಿದೆ (36%).




**ದಕ್ಷಿಣ ಅಮೆರಿಕ – ಜನಸಾಂದ್ರತೆ**



ದಟ್ಟಕಾಡಿನ ಅಮೆಜಾನ್ ಹಾಗೂ ಆ್ಯಂಡಿಯನ್ ಪರ್ವತಗಳು, ಅಟಕಾಮ ಮತ್ತು ಪೆಟಗೋನಿಯಗಳಂತಹ ಮರುಭೂಮಿಗಳಲ್ಲಿ ಅತಿ ವಿರಳ ಜನಸಂಖ್ಯೆಯಿದೆ. ಗ್ರಾನ್ ಚಾಕೊ ಮತ್ತು ಗಯಾನ ಎತ್ತರ ಪ್ರದೇಶಗಳಲ್ಲಿಯೂ ವಿರಳ ಜನಸಾಂದ್ರತೆಯಿದೆ. ಬಹುತೇಕ ಜನಸಾಂದ್ರತೆಯು ಬೃಹತ್ ನಗರಗಳು ಮತ್ತು ಬಂದರುಗಳಾದ ಬ್ಯೂನಸ್ ಐರಿಸ್, ರಿಯೋಡಿ ಜನೈರೊ, ಸವೊ ಪೊಲೋ ಮುಂತಾದ ನಗರಗಳಲ್ಲಿ ಕಂಡುಬರುತ್ತದೆ.

> ದಕ್ಷಿಣ ಅಮೆರಿಕ ಖಂಡದ ಅಧಿಕ ಜನರು ಮುಖ್ಯವಾಗಿ ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಖಂಡದ ಕೇಂದ್ರಭಾಗವು ವಿರಳ ಜನಸಂಖ್ಯೆಯಿಂದ ಕೂಡಿದ್ದು ಈ ಖಂಡವನ್ನು 'ಟೊಳ್ಳುಭೂಮಿ' ಎಂದು ಕರೆಯುತ್ತಾರೆ.

ದಕ್ಷಿಣ ಅಮೆರಿಕವು ಪ್ರಪಂಚದ ಸರಾಸರಿ ಜನನ ಪ್ರಮಾಣದಷ್ಟೇ ಜನನ ಪ್ರಮಾಣವನ್ನು [21/1000] ದಾಖಲಿಸಿದೆ. ಆದರೆ ಮರಣ ಪ್ರಮಾಣವು ಪ್ರಪಂಚದ [9/1000] ಸರಾಸರಿ ಪ್ರಮಾಣಕ್ಕಿಂತ ಕಡಿಮೆ [6/1000] ಇದೆ. ಆದುದರಿಂದ ದಕ್ಷಿಣ ಅಮೆರಿಕದ ಸ್ವಾಭಾವಿಕ ಜನಸಂಖ್ಯಾ ಹೆಚ್ಚಳದ ದರವು ಪ್ರಪಂಚದ ಸರಾಸರಿ ದರಕ್ಕಿಂತ ಅಧಿಕವಾಗಿದೆ.

### ಹೊಸ ಪದಗಳು

ರೆಡ್ ಇಂಡಿಯನ್ಸ್, ಆ್ಯಂಡೀಸ್, ಅಗ್ನಿಯುಂಗುರ, ಈಕ್ವೆಡಾರ್, ಗಯಾನ, ಓರಿನೊಕೊ, ಅಮೆಜಾನ್, ಲಾಪ್ಲಾಟಾ, ಗ್ರಾನ್‌ಚಾಕೋ, ಗಾಲಪಗೋಸ್, ಹೋರ್ನೋಸ್, ಪರಾನ, ಪರಾಗ್ವೆ, ಉರುಗ್ವೆ, ಟಿಟಿಕಾಕ, ಉಷ್ಣೋದಕ, ಶೀತೋದಕ, ಸೆಲ್ವಾಸ್, ಲ್ಯಾಟೆಕ್ಸ್, ಕಾಂಪಾಸ್, ಪಂಪಾಸ್, ಪಿರಾನ್ಹ, ಗೌಶೋಸ್, ಪಟಗೋನಿಯ, ಅಟಕಾಮ.

## ಅಭ್ಯಾಸಗಳು

**I ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ದಕ್ಷಿಣ ಅಮೆರಿಕ ಖಂಡದ ಸ್ಥಳೀಯರನ್ನು 'ರೆಡ್ ಇಂಡಿಯನ್ಸ್' ಎಂದು ಏಕೆ ಕರೆಯುತ್ತಾರೆ?
2. ದಕ್ಷಿಣ ಅಮೆರಿಕದ ಸ್ಥಾನ ಮತ್ತು ವಿಸ್ತೀರ್ಣಗಳನ್ನು ತಿಳಿಸಿರಿ.
3. ದಕ್ಷಿಣ ಅಮೆರಿಕದ ಅತಿ ದೊಡ್ಡ ಹಾಗೂ ಅತಿ ಚಿಕ್ಕ ರಾಷ್ಟ್ರಗಳನ್ನು ಹೆಸರಿಸಿರಿ.
4. ದಕ್ಷಿಣ ಅಮೆರಿಕದಲ್ಲಿ ಕಂಡುಬರುವ ಪ್ರಪಂಚದ ಅತಿ ಎತ್ತರ ಜಲಪಾತ ಯಾವುದು? ಅದು ಯಾವ ನದಿಯಿಂದ ನಿರ್ಮಾಣಗೊಂಡಿದೆ?
5. ದಕ್ಷಿಣ ಅಮೆರಿಕದ ಪ್ರಮುಖ ಹುಲ್ಲುಗಾವಲುಗಳನ್ನು ತಿಳಿಸಿರಿ.
6. ದಕ್ಷಿಣ ಅಮೆರಿಕದ ಪ್ರಮುಖ ಸಸ್ಯ ಹಾಗೂ ವನ್ಯಜೀವಿಗಳನ್ನು ಹೆಸರಿಸಿರಿ.
7. ದಕ್ಷಿಣ ಅಮೆರಿಕದ ಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ಪ್ರಮುಖ ನಗರಗಳನ್ನು ಹೆಸರಿಸಿರಿ.

### ಚಟುವಟಿಕೆಗಳು

1. ದಕ್ಷಿಣ ಅಮೆರಿಕ ಖಂಡದ ಬಾಹ್ಯರೇಖಾ ನಕ್ಷೆಯಲ್ಲಿ ಅಟ್ಲಾಸ್ ಪುಸ್ತಕದ ಸಹಾಯದಿಂದ ದೇಶಗಳು ಮತ್ತು ಅವುಗಳ ರಾಜಧಾನಿ, ಪ್ರಮುಖ ಪರ್ವತಗಳು, ನದಿಗಳು, ಸರೋವರಗಳು ಮತ್ತು ಹುಲ್ಲುಗಾವಲುಗಳನ್ನು ಪಟ್ಟಿಮಾಡಿ ಗುರುತಿಸಿರಿ.
2. ದಕ್ಷಿಣ ಅಮೆರಿಕದಲ್ಲಿ ಕಂಡುಬರುವ ಪ್ರಮುಖ ಸಸ್ಯ, ಪ್ರಾಣಿ ಹಾಗೂ ಪಕ್ಷಿಗಳನ್ನು ಪಟ್ಟಿಮಾಡಿ ಅವುಗಳ ಚಿತ್ರಗಳನ್ನು ಸಂಗ್ರಹಿಸಿರಿ.